ಸಂಪುಟ: 04 ಸಂಚಿಕೆ: 127 ಪುಟಗಳು: 08 ಶನಿವಾರ 20 ಜುಲೈ 2024
www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**

ಮನಸ್ಸನ್ನು ಶಕ್ತಿಯುತವೂ, ಶಿಸ್ತುಬದ್ಧವೂ ಆಗಿ ಸುವುದರಲ್ಲಿಯೇ ಜ್ಞಾನದ ಮೌಲ್ಯವಿರುವುದು.

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಕಾಡುಗೊಲ್ಲ ನಿಗಮಕ್ಕೆ ಶೀಘ್ರದಲ್ಲೇ ಅನುದಾನ ಬಿಡುಗಡೆ : ತಂಗಡಗಿ

• ಉದಯವಾಹಿನಿ, ಬೆಂಗಳೂರು

ಕಾಡುಗೊಲ್ಲ ಅಭಿವೃದ್ಧಿ ನಿಗಮಕ್ಕೆ ಶೀಘ್ರದಲ್ಲೇ ಅನುದಾನ ಬಿಡುಗಡೆ ಮಾಡುವ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೊತೆ ಚರ್ಚಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳುವುದಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಆಶ್ವಾಸನೆ ನೀಡಿದರು. ವಿಧಾನಪರಿಷತ್‌ನಲ್ಲಿ ಸದಸ್ಯ ನಾಗರಾಜ್ ಯಾದವ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಕಾಡುಗೊಲ್ಲ ಅಭಿವೃದ್ಧಿ ನಿಗಮಕ್ಕೆ ಒಟ್ಟು 15 ಕೋಟಿ ರೂ. ಕ್ರಿಯಾ ಯೋಜನೆ ರೂಪಿಸಿದ್ದೇವೆ. ಅನುದಾನ ಬಿಡುಗಡೆ ಮಾಡಬೇಕೆಂಬ ಒತ್ತಡವಿದೆ. ಹೀಗಾಗಿ ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುವುದಾಗಿ ಹೇಳಿದರು. ಸಮುದಾಯಕ್ಕೆ ಮೀಸಲಿಟ್ಟ ಹಣ ಇನ್ನು ಬಿಡುಗಡೆಯಾಗದಿರಲು ಕೆಲವು ತಾಂತ್ರಿಕ ಕಾರಣಗಳು ತೊಡಕ್ಕಾಗಿವೆ. ಈ ಸಂಬಂಧ ಅಧಿಕಾರಿಗಳ ಜೊತೆ ಚರ್ಚಿಸಿ ಮುಂದಿನ ದಿನಗಳಲ್ಲಿ ಸಮುದಾಯಕ್ಕೆ ಅನುಕೂಲವಾಗುವಂತಹ ತೀರ್ಮಾನಗಳನ್ನು ತೆಗೆದುಕೊಳ್ಳಲಾಗುವುದು ಎಂದರು. ಕಾಡುಗೊಲ್ಲ ಅಭಿವೃದ್ಧಿ ನಿಗಮಕ್ಕೆ ಸದ್ಯ ನಾನೇ ಅಧ್ಯಕ್ಷನಾಗಿದ್ದೇನೆ. ಈ ಸಮುದಾಯದ ಬಗ್ಗೆ ಕಳಕಳಿ ಇರುವ ವ್ಯಕ್ತಿಯೊಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂಬ ಬೇಡಿಕೆಯು ಇದೆ. ಶೀಘ್ರದಲ್ಲೇ ಇದರ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

## ರಾಜ್ಯದಲ್ಲಿ ದಿನದಿಂದ ದಿನಕ್ಕೆ ಕುಸಿಯುತ್ತಿದೆ ಅಂತರ್ಜಲ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ದಿನದಿಂದ ದಿನಕ್ಕೆ ಅಂತರ್ಜಲ ಕುಸಿಯುತ್ತಿರುವ ಹಿನ್ನಲೆಯಲ್ಲಿ ಭವಿಷ್ಯದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಸೆಂಟರ್ ಆಫ್ ಎಕ್ಸಲೆನ್ಸ್ ಪ್ರಾರಂಭಿಸುವುದಾಗಿ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.ವಿಧಾನಪರಿಷತ್‌ನಲ್ಲಿ ಸದಸ್ಯೆ ಭಾರತಿ ಶೆಟ್ಟಿ ಅವರು ಅಂತರ್ಜಲ ಕುಸಿಯುತ್ತಿರುವ ಬಗ್ಗೆ ಗಮನಸೆಳೆದಾಗ ಅಂತರ್ಜಲ ಅತಿಹೆಚ್ಚು ಕುಸಿಯುತ್ತಿರುವ ರಾಜ್ಯಗಳಲ್ಲಿ ರಾಜಸ್ಥಾನದ ನಂತರ ಕರ್ನಾಟಕ ಸ್ಥಾನ ಪಡೆದುಕೊಂಡಿದೆ. ಇದು ಅತ್ಯಂತ ಅಪಾಯಕಾರಿ ಎಂದು ಆಶ್ಚರ್ಯ ವ್ಯಕ್ತಪಡಿಸಿದರು. ಮಲೆನಾಡು, ಕರಾವಳಿ ತೀರಾಪ್ರದೇಶಗಳನ್ನು ಹೊಂದಿದ್ದರೂ ಕರ್ನಾಟಕದಲ್ಲಿ ಅಂತರ್ಜಲ ಪ್ರಮಾಣ ಗಣನೀಯ ಪ್ರಮಾಣದಲ್ಲಿ ಕುಸಿಯುತ್ತಿದೆ. ಹೀಗಾಗಿ ಕಂದಾಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಐಟಿಬಿಟಿ, ಕೃಷಿ ಸೇರಿದಂತೆ ವಿವಿಧ ಇಲಾಖೆಗಳ ಸಮನ್ವಯತೆಯಲ್ಲಿ ಈ ಕೇಂದ್ರದಲ್ಲಿ ಸ್ಥಾಪಿಸುತ್ತೇವೆ ಎಂದರು.

## ಸದನದಕ್ಕೆ ಬಾರದ ಸಚಿವರು, ಸರ್ಕಾರಕ್ಕೆ ಸಭಾಪತಿ ತರಾಟೆ

• ಉದಯವಾಹಿನಿ, ಬೆಂಗಳೂರು

ಸದನದ ಕಲಾಪ ನಡೆಯುವ ವೇಳೆ ಸಚಿವರು ಮತ್ತೆ ಗೈರು ಹಾಜರಾಗಿದ್ದರಿಂದ ಸಭಾಪತಿ ಬಸವರಾಜ ಹೊರಟ್ಟಿ ಅವರು ಸರ್ಕಾರವನ್ನು ಮತ್ತೆ ತರಾಟೆಗೆ ತೆಗೆದುಕೊಂಡ ಪ್ರಸಂಗ ವಿಧಾನಪರಿಷತ್‌ನಲ್ಲಿಂದು ಜರುಗಿತು.ಬೆಳಗ್ಗೆ ಸದನ ಆರಂಭವಾದ ವೇಳೆ ಆಡಳಿತಪಕ್ಷದ ಸಾಲಿನಲ್ಲಿ ಬೆರಳೆಣಿಕೆಯ ಸಚಿವರು ಕುಳಿತಿದ್ದರು.ಈ ವೇಳೆ ಸಭಾಪತಿಯವರು ಪ್ರಶ್ನೋತ್ತರ ಕಲಾಪವನ್ನು ಪ್ರಾರಂಭಿಸಿ ಸಂಬಂಧಪಟ್ಟ ಸದಸ್ಯರಿಗೆ ಪ್ರಶ್ನೆ ಕೇಳಲು ಸೂಚಿಸಿದರು. ಆಗ ಜೆಡಿಎಸ್‌ನ ಭೋಜೇಗೌಡ ಅವರು ನಿಯಮಗಳ ಪ್ರಕಾರ ಉತ್ತರ ನೀಡುವ ಆರು ಸಚಿವರು ಸೇರಿದಂತೆ ಸದನದಲ್ಲಿ ಒಟ್ಟು 8 ಸಚಿವರು ಇರಬೇಕು. ಇಲ್ಲಿ ಕೇವಲ ಬೆರಳಣಿಕೆಯಷ್ಟು ಮಾತ್ರ ಸಚಿವರಿದ್ದಾರೆ. ಸಭಾಪತಿಗಳ ಮಾತಿಗೆ ಬೆಲೆ ಇಲ್ಲವೇ? ಹಾಗದರೆ ಸದನವನ್ನು ಏಕೆ ನಡೆಸಬೇಕೆಂದು ಏರಿದ ದನಿಯಲ್ಲಿ ಪ್ರಶ್ನಿಸಿದರು. ಈ ವೇಳೆ ಸಭಾನಾಯಕ ಭೋಸ್‌ರಾಜ್, ಸದಸ್ಯರಾದ ಐವಾನ್ ಡಿಸೋಜ ಮತ್ತಿತರರು ಎಲ್ಲಾದರಲ್ಲೂ ರಾಜಕೀಯ ಮಾಡಬೇಡಿ ಎಂದು ತಿರುಗೇಟು ನೀಡಿದರು.

## ಶೀಘ್ರವೇ ಅಂಗನವಾಡಿ ಶಿಕ್ಷಕಿಯರ ನೇಮಕ: ಲಕ್ಷ್ಮೀ ಹೆಬ್ಬಾಳ್ಕರ್ ಮಾಹಿತಿ

• ಉದಯವಾಹಿನಿ, ಬೆಂಗಳೂರು

ಪೂರ್ವ ಪ್ರಾಥಮಿಕ ಹಂತದಲ್ಲೇ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವ ನಿಟ್ಟಿನಲ್ಲಿ ಅಂಗನವಾಡಿ ಕೇಂದ್ರಗಳಲ್ಲಿ ಎಲ್ ಕೆಜಿ, ಯುಕೆಜಿ ಆರಂಭದ ಬಗ್ಗೆ ಇತ್ತಿಚಿಗೆ ಮಾಹಿತಿ ನೀಡಿದ್ದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಳ್ಕರ್, ಇದೀಗ ಶೀಘ್ರವೇ ಅಂಗನವಾಡಿ ಶಿಕ್ಷಕಿಯರ ನೇಮಕಾತಿ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು ಎಂದು ತಿಳಿಸಿದ್ದಾರೆ. ವಿಧಾನಪರಿಷತ್ ನಲ್ಲಿ ಮಾತನಾಡಿದ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ಈಗಾಗಲೇ ಆನ್‌ಲೈನ್ ಮೂಲಕ ಅರ್ಜಿ ಕರೆದಿದ್ದು, ಜಿಲ್ಲಾಧಿಕಾರಿಗಳ, ಜಿಲ್ಲಾ ಪಂಚಾಯಿತಿಯ ಮುಖ್ಯಕಾರ್ಯನಿರ್ವಹಣಾಧಿಕಾರಿ ಒಳಗೊಂಡ ಜಿಲ್ಲಾ ಮಟ್ಟದ ಸಮಿತಿಯಲ್ಲಿ ನೇಮಕಾತಿ ನಡೆಯಲಿದೆ ಎಂದರು.

1 ವಾಲ್ಮೀಕಿ ನಿಗಮದ ಹಣವನ್ನು ಗ್ಯಾರಂಟಿ ಕಾರ್ಡ್ ತಯಾರಿಕಾ ಕಂಪನಿಗೆ ಪಾವತಿಸಲಾಗಿದೆ ಎಂಬ ಇಡಿ ಮಾಹಿತಿ

2 ಈ ವಿಚಾರವಾಗಿ ಡಿಸಿಎಂ ಡಿಕೆ ಶಿವಕುಮಾರ್ ಮತ್ತು ಸಿಎಂ ಸಿದ್ದರಾಮಯ್ಯ ವಿರುದ್ಧ ಆರ್ ಅಶೋಕ ವಾಗ್ದಾಳಿ

3 ನಿಗಮದ ಹಣವೇನು ನಿಮ್ಮ ಪಕ್ಷದ ಪಾರ್ಟಿ ಫಂಡ್ ಅಂತ ಅಂದುಕೊಂಡಿದ್ದೀರಾ ಎಂದು ಎಕ್ಸ್ ನಲ್ಲಿ ಖಾರವಾಗಿ ಪೋಸ್ಟ್

● ಸಿದ್ದರಾಮಯ್ಯ, ಪ್ರತಿಪಕ್ಷಗಳನ್ನು ಹಿಗ್ಗಾಮುಗ್ಗಾ ತರಾಟೆಗೆ ● ಬಿಜೆಪಿ ಧರಣಿ ಕಲಾಪ ಬಲಿ ● ತನಿಖೆಗೆ ಆಗ್ರಹಿಸಿದ ಬಿಜೆಪಿ , ಸದನದಲ್ಲಿ ಗದ್ದಲ ಕೋಲಾಹಲದ ವಾತಾವರಣ ● ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ ಸಿಬಿಐ ತನಿಖೆಗೆ ಒಪ್ಪಿಸಬೇಕು. ● ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ಪ್ರತಿಪಕ್ಷಗಳು ಧರಣಿ

# ಹೋರಾಟದ ಪ್ರಲಾಪ ನಡೆಯದ ಕಲಾಪ

**ಹೋರಾಟ ನಿಲ್ಲದು**

ಸಿ.ಟಿ. ರವಿ ಪ್ರತಿಭಟನೆ ಸಂದರ್ಭದಲ್ಲಿ ಮಾತನಾಡಿದ ಬಿಜೆಪಿಯ ಸಿ.ಟಿ. ರವಿ, ವಾಲ್ಮೀಕಿ ಹಗರಣದಲ್ಲಿ ನೂರಾರು ಕೋಟಿ ರೂ. ಭ್ರಷ್ಟಾಚಾರ ನಡೆದಿದೆ. ಈ ಭ್ರಷ್ಟಾಚಾದ ತನಿಖೆಯನ್ನು ಸಿಬಿಐಗೆ ವಹಿಸಬೇಕು ಹಾಗೂ ಮುಖ್ಯಮಂತ್ರಿ ಸಿದ್ಧರಾಮಯ್ಯ ರಾಜೀನಾಮೆ ನೀಡಬೇಕು ಎಂಬುದು ನಮ್ಮ ಒತ್ತಾಯ. ಮುಖ್ಯಮಂತ್ರಿಗಳು ರಾಜೀನಾಮೆ ನೀಡುವವರೆಗೂ ಸದನದ ಹೊರಗೂ ಒಳಗೂ ಹೋರಾಟ ನಡೆಸುತ್ತೇವೆ ಎಂದರು.



ಸರ್ಕಾರ ನಮ್ಮ ಬೇಡಿಕೆಯನ್ನು ಒಪ್ಪಬೇಕು ಅಲ್ಲಿಯವರೆಗೂ ನಾವು ಹೋರಾಟ ನಿಲ್ಲಿಸುವುದಿಲ್ಲ. ಕಾಂಗ್ರೆಸ್‌ನ ಬಹುತೇಕ ಸದಸ್ಯರು ಎದ್ದು ನಿಂತು ಬಿಜೆಪಿ ವಿರುದ್ಧ ಘೋಷಣೆಗಳನ್ನು ಕೂಗಲಾರಂಭಿಸಿದರು. ಇದರಿಂದ ಸದನದಲ್ಲಿ ಗದ್ದಲ ತಾರಕಕ್ಕೇರಿತು. ಕಾಂಗ್ರೆಸ್ ಸದಸ್ಯರೂ ಸಹ ಎದ್ದು ನಿಂತು ವಾಲ್ಮೀಕಿ ನಿಗಮದ ಹಗರಣಕ್ಕೆ ಸಂಬಂಧಿಸಿದಂತೆ ನಮಗೆ ಬೆಂಬಲ ನೀಡುತ್ತಿದ್ದಾರೆ.

-ಆರ್. ಅಶೋಕ್ ಪ್ರತಿಪಕ್ಷ ನಾಯಕ

**ಪರಿಷತ್ ಸದಸ್ಯರ ಪ್ರತಿಭಟನೆ**

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣವನ್ನು ಸಿಬಿಐ ತನಿಖೆಗೆ ವಹಿಸಬೇಕು, ಮುಖ್ಯಮಂತ್ರಿ ಸಿದ್ಧರಾಮಯ್ಯ ರಾಜೀನಾಮೆ ನೀಡಬೇಕು. ಬಿಜೆಪಿಯ ವಿಧಾನಪರಿಷತ್ ಸದಸ್ಯರು ವಿಧಾನಸೌಧದ ಆವರಣದಲ್ಲಿರುವ ಗಾಂಧಿ ಪ್ರತಿಮೆ ಮುಂದೆ ಪ್ರತಿಭಟನೆ ನಡೆಸಿದರು. ವಿಧಾನಪರಿಷತ್‌ನ ಕಲಾಪ ಆರಂಭಕ್ಕೂ ಮುನ್ನವೆ ಬಿಜೆಪಿ-ಜೆಡಿಎಸ್‌ನ ಬಹುತೇಕ ವಿಧಾನಪರಿಷತ್ ಸದಸ್ಯರು ವಾಲ್ಮೀಕಿ ನಿಗಮದ ಅಕ್ರಮ ಹಣ ವರ್ಗಾವಣೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿಗಳ ರಾಜೀನಾಮೆಗೆ ಆಗ್ರಹಿಸಿ ಗಾಂಧಿ ಪ್ರತಿಮೆ ಮುಂದೆ ಧರಣಿ ನಡೆಸಿದರು. ಸರ್ಕಾರದ ವಿರುದ್ಧ ರೇಟ್‌ಕಾರ್ಡ್ ಭಿತ್ತಿಪತ್ರವನ್ನು ಪ್ರದರ್ಶಿಸಿ ಭ್ರಷ್ಟ ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ ಎಂಬ ಘೋಷಣೆಗಳನ್ನು ಕೂಗಿದರು.




ಈ ಪ್ರತಿಭಟನಾ ಧರಣಿಯಲ್ಲಿ ಸದಸ್ಯರುಗಳಾದ ಸಿ.ಟಿ. ರವಿ, ಎನ್.ರವಿಕುಮಾರ್, ಭಾರತಿಶೆಟ್ಟಿ , ಪ್ರತಾಪ್ ಸಿಂಹನಾಯಕ್, ಚಲವಾದಿ ನಾರಾಯಣಸ್ವಾಮಿ, ಪ್ರದೀಪ್ ಶೆಟ್ಟರ್, ಡಿ.ಎಸ್. ಅರುಣ್‌ಕುಮಾರ್, ಭೋಜೇಗೌಡ, ಶಾಂತರಾಮಸಿದ್ಧಿ ಸೇರಿದಂತೆ ಬಿಜೆಪಿ-ಜೆಡಿಎಸ್‌ನ ಹಲವು ವಿಧಾನಪರಿಷತ್ ಸದಸ್ಯರು ಭಾಗವಹಿಸಿದ್ದರು.

• ಉದಯವಾಹಿನಿ, ಬೆಂಗಳೂರು

ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆ, ಸಿಬಿಐ ತನಿಖೆಗೆ ಆಗ್ರಹಿಸಿ ಬಿಜೆಪಿ ವಿಧಾನಸಭೆಯಲ್ಲಿ ಧರಣಿ ನಡೆಸಿದ್ದರಿಂದ ಸುಗಮ ಕಲಾಪ ಸಾಧ್ಯವಾಗಲಿಲ್ಲ. ಒಂದು ಬಾರಿ ಸದನವನ್ನು ಮುಂದೂಡಿ ನಂತರ ಬಿಜೆಪಿಯ ಧರಣಿ ನಡುವೆಯೇ ವಿಧೇಯಕಕ್ಕೆ ಮಂಡನೆ ವಾಲ್ಮೀಕಿ ಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿಗಳಿಂದ ಉತ್ತರ ಮಂಡನೆ ಕಲಾಪಗಳನ್ನು ನಡೆಸಿ ಸದನವನ್ನು ಸೋಮವಾರಕ್ಕೆ ಮುಂದೂಡಲಾಯಿತು. ಸದನ ಆರಂಭವಾಗುತ್ತಿದ್ದಂತೆಯೇ ಬಿಜೆಪಿ ಸದಸ್ಯರು ಆರಂಭಿಸಿದ್ದ ಧರಣಿ ಮುಂದುವರೆಸಿದ್ದರಿಂದ ಸದನದಲ್ಲಿ ಗದ್ದಲದ ವಾತಾವರಣ ರೂಪುಗೊಂಡಿತ್ತು. ಧರಣಿ ವಾಪಸ್ಸಾತಿಗೆ ಸಭಾಧ್ಯಕ್ಷರು ಮಾಡಿದ ಮನವಿಗೂ ಸ್ಪಂದಿಸದ ಕಾರಣ ಸಭಾಧ್ಯಕ್ಷ ಯು.ಟಿ. ಖಾದರ್ ಸದನವನ್ನು 10 ನಿಮಿಷಗಳ ಕಾಲ ಮುಂದೂಡಿದರು. ಮತ್ತೆ ಸದನ ಸಮಾವೇಶಗೊಂಡಾಗ ಬಿಜೆಪಿ ಸದಸ್ಯರು ತಮ್ಮ ಪಟ್ಟು ಸಡಿಲಿಸದೆ ಧರಣಿ ಮುಂದುವರೆಸಿದರು. ಇದರಿಂದ ಸದನದಲ್ಲಿ ಗದ್ದಲ, ಕೋಲಾಹಲದ ವಾತಾವರಣ ರೂಪುಗೊಂಡಿತ್ತು. ಇದರ ನಡುವೆಯೇ ಸಭಾಧ್ಯಕ್ಷರು ವಿವಿಧ ವಿಧೇಯಕಗಳ ಮಂಡನೆ, ಮಳೆಹಾನಿ ಬಗ್ಗೆ ಚರ್ಚೆ, ಕಂದಾಯ ಸಚಿವರಿಂದ ಉತ್ತರ ಕಲಾಪ ನಡೆಸಿದರು. ಇದಾದ ಬಳಿಕ ಬಿಜೆಪಿ ಸದಸ್ಯರ ಧರಣಿ, ಘೋಷಣೆ ನಡುವೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯರವರು ಅಪೂರ್ಣಗೊಳಿಸಿದ್ದ ವಾಲ್ಮೀಕಿ ಹಗರಣದ ಉತ್ತರ ಮುಂದುವರೆಸಿ ಬಿಜೆಪಿ ಸದಸ್ಯರ ವಿರುದ್ಧ ಹರಿಹಾಯ್ದು ಬಿಜೆಪಿ ಸದಸ್ಯರಿಗೆ ಉತ್ತರ ಬೇಕಿಲ್ಲ, ರಾಜಕಾರಣಕಷ್ಟೇ ಮುಖ್ಯ ಎಂದು ವಾಗ್ದಾಳಿ ನಡೆಸಿ ಹಗರಣದಲ್ಲಿ ಭಾಗಿಯಾದವರ ವಿರುದ್ಧ ಸರ್ಕಾರ ಕ್ರಮಕೈಗೊಳ್ಳುತ್ತದೆ ಎಂದರು. ಎಸ್‌ಐಟಿ ತನಿಖೆ ನಡೆದಿದೆ ಎಂದು ಹೇಳಿದ ಸಿದ್ದರಾಮಯ್ಯ, ಪ್ರತಿಪಕ್ಷಗಳನ್ನು ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಂಡರು.

ಬಿಜೆಪಿ ಕಾಲದ ಹಗರಣಗಳನ್ನು ಪ್ರಸ್ತಾಪಿಸಿ, ಮೌಖಿಕ ಉತ್ತರ ನೀಡಲ್ಲ ಉತ್ತರವನ್ನು ಮಂಡಿಸುತ್ತೇನೆ ಎಂದು ಲಿಖಿತ ಉತ್ತರವನ್ನು ಮಂಡಿಸಿದರು. ಕಲಾಪ , ಆಡಳಿತ ಪಕ್ಷಗಳ ಸದಸ್ಯರಿಗೆ ವಾಲ್ಮೀಕಿ ಅಕ್ರಮ ಹಣ ವರ್ಗಾವಣೆ ವಿಚಾರ ಬಗ್ಗೆ ಮಾತನಾಡಲು ಅವಕಾಶ ನೀಡಿದರು. ಆಡಳಿತ ಪಕ್ಷದ ಸದಸ್ಯರು ಗದ್ದಲದಲ್ಲೇ ಮಾತನಾಡಿದರಾದರೂ ಅವರ ಮಾತುಗಳು ಸರಿಯಾಗಿ ಕೇಳಿಸಲಿಲ್ಲ.

ಸದನ ಸುವ್ಯವಸ್ಥೆಯಲ್ಲಿ ಇಲ್ಲದಿರುವಾಗ ಕಲಾಪ ನಡೆಸುವುದು ಸರಿಯಲ್ಲ ಎಂದು ಪ್ರತಿಪಕ್ಷ ನಾಯಕರ ಮಾತಿಗೆ ಸಭಾಧ್ಯಕ್ಷರು ಕಿವಿಗೊಡದೆ ಆಡಳಿತ ಪಕ್ಷದ ಸದಸ್ಯರು ಮಾತನಾಡಲು ಅವಕಾಶ ಮಾಡಿಕೊಟ್ಟರು. ಹಗರಣದ ಬಗ್ಗೆ ಮಾತನಾಡಿದ ಆಡಳಿತ ಪಕ್ಷದ ಸದಸ್ಯರು ಸರ್ಕಾರ ಸಮರ್ಥಿಸಿಕೊಂಡು ಪ್ರತಿಪಕ್ಷವಾದ ಬಿಜೆಪಿ-ಜೆಡಿಎಸ್ ವಿರುದ್ಧ ವಾಗ್ದಾಳಿ ನಡೆಸಿದರು. ಬಿಜೆಪಿ ಸದಸ್ಯರು ಘೋಷಣೆಗಳನ್ನು ಕೂಗುತ್ತಲೇ ಇದ್ದುದ್ದರಿಂದ ಸದನ ಗೊಂದಲದ ಗೂಡಾಗಿತ್ತು.ಆಡಳಿತ ಪಕ್ಷದ ಸದಸ್ಯರು ಮಾತನಾಡುತ್ತಿರುವಾಗ ಬಿಜೆಪಿ ಸದಸ್ಯರು ಘೋಷಣೆಗಳನ್ನು ಕೂಗುತ್ತಲೆ ಇದ್ದು, ಆಡಳಿತ ಪಕ್ಷದ ಸದಸ್ಯರನ್ನು ಕಿಚಾಯಿಸಿದರು. ಸದನದಲ್ಲಿ ಗದ್ದಲ ತಾರಕಕ್ಕೇರುವಂತಾಯಿತು.

ಬಿಜೆಪಿ ಸದಸ್ಯರ ಧರಣಿಯಿಂದ ಸುಗಮ ಕಲಾಪಗಳು ಸಾಧ್ಯವಾಗದೆ ಸದನ ಕಲಾಪ ಹಗರಣ ಆದಂತಾಯಿತು. ಇದಕ್ಕೂ ಮೊದಲು ಬೆಳಗ್ಗೆ ಸದನ ಆರಂಭವಾಗುತ್ತಿದ್ದಂತೆಯೇ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರುಗಳು ಸಭಾಧ್ಯಕ್ಷರ ಮುಂದಿನ ಬಾವಿಗೆ ತೆರಳಿ ನಿನ್ನೆಯಿಂದ ನಡೆಸಿದ್ದ ಧರಣಿಯನ್ನು ಮುಂದುವರೆಸಿದರು.

ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರು ಧರಣಿ ಕೈಬಿಡಿ ನಿಮ್ಮ ಸ್ಥಾನಗಳಿಗೆ ಹೋಗಿ ನಿಯಮಾವಳಿ ಪ್ರಕಾರ ಸದನ ನಡೆಸೋಣ. ಹಳೆಯದನ್ನೆಲ್ಲಾ ಮರೆತು ಸುಗಮ ಕಲಾಪಕ್ಕೆ ಅವಕಾಶ ಮಾಡಿಕೊಡಿ ಎಂದು ಮನವಿ ಮಾಡಿದರಾದರೂ ಅದಕ್ಕೆ ಬಿಜೆಪಿ-ಜೆಡಿಎಸ್ ಸದಸ್ಯರುಗಳು ಒಪ್ಪದೆ, ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಲಾರಂಭಿಸಿದರು.

ಇದರಿಂದ ಸದನದಲ್ಲಿ ಗದ್ದಲದ ವಾತಾವರಣ ರೂಪುಗೊಂಡಿತು.ತಮ್ಮ ಮಾತು ಮುಂದು ಸಭಾಧ್ಯಕ್ಷರು, ಸದನದಲ್ಲಿ ಯಾರೂ ಭಿತ್ತಿಪತ್ರಗಳನ್ನು ಪ್ರದರ್ಶಿಸಬಾರದು. ಯಾರೇ ಭಿತ್ತಿಪತ್ರ ಪ್ರದರ್ಶಿಸಿದರೂ ಕಠಿಣ ಕ್ರಮ ಕೈಗೊಳ್ಳುತ್ತೇನೆ ಎಂದು ಎಚ್ಚರಿಕೆ ನೀಡಿದರು.ಆಗ ವಿಪಕ್ಷ ನಾಯಕ ಆರ್. ಅಶೋಕ್ ಎದ್ದು ನಿಂತು, ಕಾಂಗ್ರೆಸ್‌ನವರೇ ಭಿತ್ತಿ ಪತ್ರಪ್ರದರ್ಶಿಸಿದ್ದು ಎಂದು ಹೇಳಿದರು. ಆಗ ಕಾಂಗ್ರೆಸ್ ಸದಸ್ಯರುಗಳಾದ ಪೊನ್ನಣ್ಣ, ಅಶೋಕ್ ಪಟ್ಟಣ್, ಪ್ರದೀಪ್ ಈಶ್ವರ್ ಇವರೆಲ್ಲಾ ಎದ್ದು ನಿಂತು ನೀವು ಪ್ರದರ್ಶನ ಮಾಡಿದರಿ ನಾವು ಮಾಡಿದ್ದೇವೆ ಎಂದು ತಿರುಗೇಟು ನೀಡಿದರು.

## ಸಿಎಂ ಸಿದ್ಧರಾಮಯ್ಯ ರಾಜೀನಾಮೆ ಕೊಡುವ ದಿನ ಹತ್ತಿರ ಬಂದಿದೆ

• ಉದಯವಾಹಿನಿ, ಬೆಂಗಳೂರು

ಮುಖ್ಯಮಂತ್ರಿ ಸಿದ್ದರಾಮಯ್ಯನವರು ರಾಜೀನಾಮೆ ಕೊಡುವ ದಿನ ಹತ್ತಿರ ಬಂದಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಅವರು ತಿಳಿಸಿದರು.

ಮಾಧ್ಯಮ ಪ್ರತಿನಿಧಿಗಳ ಜೊತೆ ಇಂದು ಮಾತನಾಡಿದ ಅವರು, ಬೇಲಿಯೇ ಎದ್ದು ಹೊಲ ಮೇಯ್ದ ಪರಿಸ್ಥಿತಿ ಇವತ್ತು ರಾಜ್ಯದಲ್ಲಿ ಉದ್ಭವವಾಗಿದೆ. ವಾಲ್ಮೀಕಿ ಅಭಿವೃದ್ಧಿ ನಿಗಮಕ್ಕೆ ಹಣಕಾಸು ಇಲಾಖೆ ಸಚಿವರೂ ಆದ ಮುಖ್ಯಮಂತ್ರಿಗಳ ಸಮ್ಮತಿ ಇಲ್ಲದೇ, ಅವರ ಗಮನಕ್ಕೆ ಬಾರದೆ ಹಣ ವರ್ಗಾವಣೆ ಆಗಲು ಸಾಧ್ಯವೇ ಇರಲಿಲ್ಲ ಎಂದು ನುಡಿದರು.



ಕೇವಲ ಮಾಜಿ ಸಚಿವ ನಾಗೇಂದ್ರ, ದದ್ದಲ್ ಅವರಷ್ಟೇ ಅಲ್ಲ; ಇನ್ನೂ ದೊಡ್ಡ ದೊಡ್ಡವರ ಹೆಸರು ಮುಂದೆ ಬರಲಿದೆ. ಹಾಗಾಗಿ ಆತಂಕದಿಂದಲೇ ನಿನ್ನೆ ರಾಜ್ಯದ 5 ಸಚಿವರು ಇ.ಡಿ. ಮೇಲೆ ಆಪಾದನೆ ಮಾಡುವ ಪ್ರಯತ್ನ ಮಾಡಿದ್ದಾರೆ ಎಂದು ತಿಳಿಸಿದರು. ಮುಖ್ಯಮಂತ್ರಿಗಳು ಸದನದಲ್ಲಿ ಉತ್ತರ ಕೊಡುವ ಪ್ರಯತ್ನ ಮಾಡಿದ್ದು, ಸತ್ಯಸಂಗತಿಗಳನ್ನು ಮರೆಮಾಚಿ, ಸದನಕ್ಕೆ ಮತ್ತು ರಾಜ್ಯದ ಜನತೆಗೆ ತಪ್ಪು ಮಾಹಿತಿ, ತಪ್ಪು ಸಂದೇಶ ಕೊಡುವ ಪ್ರಯತ್ನ ಮಾಡಿದ್ದಾರೆ ಎಂದು ಟೀಕಿಸಿದರು.

ಮಾನ್ಯ ಮುಖ್ಯಮಂತ್ರಿಗಳು ಈ ಹಗರಣದಿಂದ ತಪ್ಪಿಸಿಕೊಂಡು ಹೋಗಲು ಸಾಧ್ಯ ಇಲ್ಲ ಎಂಬುದಂತೂ ಸತ್ಯ. ಮಾನ್ಯ ಸಿದ್ದರಾಮಯ್ಯನವರೇ, ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಹಗರಣದಿಂದ ಪರಿಶಿಷ್ಟ ಜಾತಿ, ಪಂಗಡಗಳ ಶಾಪ ನಿಮಗೆ ತಟ್ಟದೇ ಬಿಡುವುದಿಲ್ಲ ಎಂದು ಎಚ್ಚರಿಸಿದರು. ಈಗಾಗಲೇ ಇ.ಡಿ, ಸಿಬಿಐ ತನಿಖೆ ನಡೆಯುತ್ತಿದ್ದು, ತಾವು ಉತ್ತರ ಕೊಡಲೇಬೇಕಾಗುತ್ತದೆ ಎಂದು ತಿಳಿಸಿದರು.

## ಮುಖ್ಯಮಂತ್ರಿ ಬದಲಾವಣೆ ಇಲ್ಲ ;ಕೆಎಚ್‌ಎಂ

• ಉದಯವಾಹಿನಿ, ಕೋಲಾರ

ರಾಜ್ಯದ ಮುಖ್ಯ ಮಂತ್ರಿ ಬದಲಾವಣೆ ಇಲ್ಲ. ಕಾನೂನು ಪ್ರಕಾರ ಏನು ಕ್ರಮ ಜರುಗಿಸ ಬೇಕು. ಅದನ್ನು ಸರ್ಕಾರ ಮಾಡುತ್ತಿದೆ ಎಂದು ರಾಜ್ಯ ಆಹಾರ ಖಾತೆ ಸಚಿವ ಕೆ.ಹೆಚ್.ಮುನಿಯಪ್ಪ ತಿಳಿಸಿದರು.



ಮಾದ್ಯಮದವರೊಂದಿಗೆ ಅವರು ಮಾತನಾಡುತ್ತಾ ಎಲ್ಲಾ ಪ್ರಕರಣಗಳ ವಿಚಾರಣೆ ನಡೆಯುತ್ತಿದೆ ಈಗಾಲೇ ನಾವು ಅಂತಿಮ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ ಎಂದರು.

ಮುಖ್ಯ ಮಂತ್ರೀಗಳೇ ಹಣಕಾಸು ಸಚಿವರು ಅಗಿದ್ದರೂ ಸಹ ಇದರಲ್ಲಿ ಅವರ ಯಾವ ಪಾತ್ರವೂ ಇಲ್ಲ ಎಂಬುವುದು ನಮ್ಮ ಅಭಿಪ್ರಾಯವಾಗಿದೆ. ಏನು ನಡೆದಿದೆ ಎಂಬುವುದನ್ನು ಇ.ಡಿ. ಅಧಿಕಾರಿಗಳ ಮೂಲಕ ವಿಚಾರಣೆ ನಡೆಸಲಾಗುತ್ತಿದೆ. ಅವರ ವಿಚಾರಣೆಯ ನಂತರ ಸತ್ಯಾಂಶ ಬೆಳಕಿಗೆ ಬರಲಿದೆ ಎಂದು ಹೇಳಿದರು, ಮುಡಾ ಹಗರಣ ಮತ್ತು ವಾಲ್ಮೀಕಿ ಹಗರಣದ ಆರೋಪಗಳು ವಿಚಾರಣೆಯ ಹಂತದಲ್ಲಿದೆ. ವಿಚಾರಣೆಯ ಫಲಿತಾಂಶ ಏನು ಬರುತ್ತದೆ ಎಂಬುವುದನ್ನು ಕಾದು ನೋಡುವಂತ ತಾಳ್ಮೇ ಬೇಕು, ಅದರೆ ವಿರೋಧ ಪಕ್ಷಗಳು ಬಾಯಿಗೆ ಬಂದಂತೆ ಹೇಳಿಕೆಗಳು ನೀಡುತ್ತಿರುವುದು ಸಮಂಜಸವಲ್ಲ ಎಂದರು,

ರಚನಾತ್ಮಕ ವಿಷಯಗಳಲ್ಲಿ ದೇಶದ ಅಭಿವೃದ್ಧಿ ವಿಚಾರಗಳಲ್ಲಿ ಸತ್ಯವನ್ನು ಮುಂದಿಟ್ಟು ಕೊಂಡು ವಿಪಕ್ಷಗಳು ಮಾತನಾಡು ಬೇಕು, ರಾಜ್ಯದ 4.5 ಕೋಟಿ ಜನತೆ ನೆಮ್ಮದಿಯಿಂದ ಜೀವನದ ದಾರಿಯನ್ನು ಮಾಡಿ ಕೊಟ್ಟಿರುವ ರಾಜ್ಯ ಭಾರತದಲ್ಲಿ ಕರ್ನಾಟಕ ರಾಜ್ಯವಾಗಿದೆ ಇಂಥಹ ಪವಿತ್ರವಾದ ಕೆಲಸಗಳನ್ನು ರಾಜ್ಯದ ಮುಖ್ಯ ಮಂತ್ರಿ ಸಿದ್ದರಾಮಯ್ಯನವರು ಮಾಡಿ ಕೊಟ್ಟಿರುವಾಗ ಮುಖ್ಯ ಮಂತ್ರಿ ಸ್ಥಾನವನ್ನು ಬದಲಾವಣೆ ಮಾಡುವ ಪ್ರಶ್ನೆಯೇ ಇಲ್ಲ ಎಂದು ಸಚಿವ ಮುನಿಯಪ್ಪ ಪ್ರತಿಪಾದಿಸಿದರು,

## ಲೋಕಾಯುಕ್ತ ಪೊಲೀಸರ ದಾಳಿ

• ಉದಯವಾಹಿನಿ, ಶಿವಮೊಗ್ಗ

ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ ಆರೋಪಗಳ ಹಿನ್ನೆಲೆಯಲ್ಲಿ ಇಲ್ಲಿನ ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಎಸ್. ಪ್ರಕಾಶ್ ಹಾಗೂ ಭದ್ರಾವತಿ ತಾಲ್ಲೂಕಿನ ಅಂತರಗಂಗೆ ಗ್ರಾಮ ಪಂಚಾಯ್ತಿ ಅಧ್ಯಕ್ಷ ಬಿ.ನಾಗೇಶ್ ಅವರ ಮನೆಗಳ ಮೇಲೆ ಶುಕ್ರವಾರ ಮುಂಜಾನೆ ಲೋಕಾಯುಕ್ತ ಪೊಲೀಸರ ದಾಳಿ ನಡೆಸಿದ್ದಾರೆ. ಶಿವಮೊಗ್ಗ ಲೋಕಾಯುಕ್ತ ಎಸ್ಪಿ ಮಂಜುನಾಥ ಚೌಧರಿ ನೇತೃತ್ವದಲ್ಲಿ ಅಧಿಕಾರಿಗಳ ತಂಡ ಕೃಷಿ ನಗರದಲ್ಲಿರುವ ಪ್ರಕಾಶ್ ನಿವಾಸ ಹಾಗೂ ಅಂತರ ಗಂಗೆಯಲ್ಲಿರುವ ನಾಗೇಶ್ ಮನೆ ಮೇಲೆ ದಾಳಿ ನಡೆಸಿ ಪರಿಶೀಲನೆ ನಡೆಸುತ್ತಿದೆ. ನಾಗೇಶ್ ಭದ್ರಾವತಿ ತಾಲ್ಲೂಕಿನ ಕಾಂಗ್ರೆಸ್ ಪಕ್ಷದ ಮುಖಂಡ ಆಗಿದ್ದಾರೆ.

ಶಾಸಕ ಬಿ.ಕೆ.ಸಂಗಮೇಶ ಆಪ್ತ ಬಳಗದಲ್ಲಿದ್ದಾರೆ. ಈ ಹಿಂದೆ ಭದ್ರಾವತಿ ತಾಲ್ಲೂಕಿನ ಬಗರ್ ಹುಕುಂ ಸಮಿತಿ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ.

# ಬಿಬಿಎಂಪಿ ವ್ಯಾಪ್ತಿಯಲ್ಲಿ ಸ್ಥಗಿತಗೊಂಡಿದ್ದ 11 ಇಂದಿರಾ ಕ್ಯಾಂಟೀನ್‌ಗಳು ಪುನರಾರಂಭ

## ಗುತ್ತಿಗೆ ಪಡೆದಿರುವ ಸಂಸ್ಥೆಯು ಸಲ್ಲಿಸಿರುವ ಬಿಲ್ಲುಗಳಲ್ಲಿ ಬಾಕಿ ಮೊತ್ತ ಅಂದಾಜು 40.00 ಕೋಟಿ ರೂ.ಗಳನ್ನು ಪಾವತಿಸದೇ ಇರುವ ಹಿನ್ನೆಲೆ ಕ್ಯಾಂಟೀನ್ ಸ್ಥಗಿತ

• ಉದಯವಾಹಿನಿ, ಬೆಂಗಳೂರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ದಕ್ಷಿಣ ವಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದ 11 ಇಂದಿರಾ ಕ್ಯಾಂಟೀನ್‌ಗಳು ಬಿಲ್ ಪಾವತಿಯಾಗದೆ ಸ್ಥಗಿತಗೊಂಡಿರುವ ಬಗ್ಗೆ ಕೆಲ ದಿನ ಪತ್ರಿಕೆಗಳಲ್ಲಿ ಪ್ರಕಟಗೊಂಡಿದ್ದು, ವಿದ್ಯುನ್ಮಾಧ್ಯಮಗಳಲ್ಲಿ ವರದಿಯಾಗಿರುತ್ತದೆ. ಈ ಕುರಿತು ಕೆಳಕಂಡಂತೆ ಸ್ಪಷ್ಟೀಕರಣ ನೀಡಲಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಎಲ್ಲಾ ವಲಯಗಳಲ್ಲಿ 2017 ರಿಂದ ಇಂದಿರಾ ಕ್ಯಾಂಟೀನ್‌ಗಳನ್ನು ಸ್ಥಾಪಿಸಿದ್ದು, ಯಶಸ್ವಿಯಾಗಿ ಕಾರ್ಯನಿರ್ವಹಿಸಲಾಗುತ್ತಿದೆ. ಈ ಸಂಬಂಧ ದಕ್ಷಿಣ ವಲಯದ 11 ಇಂದಿರಾ ಕ್ಯಾಂಟೀನ್‌ಗಳನ್ನು ಸಂಬಂಧಪಟ್ಟ ಸಂಸ್ಥೆಯವರು ಇಂದಿರಾ ಕ್ಯಾಂಟೀನ್‌ಗಳಲ್ಲಿ ಉಪಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿ ಊಟವನ್ನು ರಿಯಾಯಿತಿ ದರಗಳಲ್ಲಿ ಒದಗಿಸುತ್ತಿದೆ.

ಮುಂದುವರಿದು, ಗುತ್ತಿಗೆ ಪಡೆದಿರುವ ಸಂಸ್ಥೆಯು ಸಲ್ಲಿಸಿರುವ ಬಿಲ್ಲುಗಳಲ್ಲಿ ಬಾಕಿ ಮೊತ್ತ ಅಂದಾಜು 40.00 ಕೋಟಿ ರೂ.ಗಳನ್ನು ಪಾವತಿಸದೇ ಇರುವ ಹಿನ್ನೆಲೆಯಲ್ಲಿ ಇಂದಿರಾ ಕ್ಯಾಂಟೀನ್ ಅಡುಗೆ ಕೋಣೆಯಲ್ಲಿ ನೀರಿನ ಮತ್ತು ವಿದ್ಯುತ್ ಬಿಲ್‌ಗಳನ್ನು ಪಾವತಿಸದೇ ಇರುವುದರಿಂದ ದಿನಾಂಕ: 18-07-2024ರಂದು ಸ್ಥಗಿತಗೊಳಿಸಿರುತ್ತಾರೆ.




■ ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಮರಗಳ ಗಣತಿ ಪ್ರಕ್ರಿಯೆ ಆರಂಭವಾಗಿ ಆರು ತಿಂಗಳು ಕಳೆದಿವೆ

■ 198 ವಾರ್ಡ್‌ಗಳ ಪೈಕಿ 80 ವಾರ್ಡ್‌ಗಳಲ್ಲಿ ಮಾತ್ರ 2.5 ಲಕ್ಷ ಮರಗಳ ಎಣಿಕೆ ಪೂರ್ಣಗೊಂಡಿದೆ

■ ತಾಂತ್ರಿಕ ನೆಪವೊಡ್ಡಿ ಗಡುವಿನ ಅವಧಿ ಮತ್ತಷ್ಟು ವಿಸ್ತರಿಸುವ ಸಾಧ್ಯ

ಈ ಬಗ್ಗೆ ಕೂಲಂಕುಶವಾಗಿ ಪರಿಶೀಲಿಸಲಾಗಿದ್ದು, ಪಾಲಿಕೆಯ ವ್ಯಾಪ್ತಿಯಲ್ಲಿ ಆಹಾರದ ಗುಣಮಟ್ಟ, ಪ್ರಮಾಣವನ್ನು ಪರಿಶೀಲಿಸಲು ಪ್ರತಿ ಇಂದಿರಾ ಕ್ಯಾಂಟೀನ್‌ಗಳಲ್ಲಿ ಮಾರ್ಷ್‌ಲ್‌ಗಳನ್ನು ನಿಯೋಜಿಸಲಾಗಿದೆ. ಸದರಿ ಮಾರ್ಷಲ್‌ಗಳು ಪ್ರತಿ ನಿತ್ಯ ಖರ್ಚಾಗುವ ಊಟದ ಪ್ರಮಾಣದ ವರದಿ ಅನ್ವಯ ನವೆಂಬರ್-2021 ರಿಂದ ತಹಲ್‌ವರೆಗೆ ಸಂಬಂಧಪಟ್ಟ ಸಂಸ್ಥೆಯವರಿಗೆ ಅನುದಾನವನ್ನು ಪಾವತಿ ಮಾಡಲಾಗಿರುತ್ತದೆ. ಆದರೆ, ದಕ್ಷಿಣ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಯವರು ಇಂದಿರಾ ಕ್ಯಾಂಟೀನ್‌ಗಳಲ್ಲಿ ನಾಗರೀಕರಿಗೆ ಒದಗಿಸಿರುವ ಆಹಾರಕ್ಕಿಂತ ಹೆಚ್ಚಿನ ಮಟ್ಟದ ಬಿಲ್‌ನ್ನು ಸಲ್ಲಿಸಿರುವುದರಿಂದ ಅನುದಾನವನ್ನು ಕಡಿತಗೊಳಿಸಲಾಗಿರುತ್ತದೆ.ಗುತ್ತಿಗೆದಾರರ ಜೊತೆ ಮಾಡಿಕೊಂಡಿರುವ ಒಡಂಬಡಿಕೆಯ ಪ್ರಕಾರ ನೀರು ಮತ್ತು ವಿದ್ಯುತ್ ಬಿಲ್‌ನ್ನು ಸಂಬಂಧಪಟ್ಟ ಸಂಸ್ಥೆಯವರೇ ಪಾವತಿಸಬೇಕಾಗಿರುತ್ತದೆ. ಈ ಬಗ್ಗೆ ದಿನಾಂಕ: 18-07-2024ರಂದು ಮುಖ್ಯ ಆರೋಗ್ಯಾಧಿಕಾರಿ(ಸಾ.ಆ) ರವರ ಅಧ್ಯಕ್ಷತೆಯಲ್ಲಿ ಸಂಬಂಧಪಟ್ಟ ಸಂಸ್ಥೆಯವರ ಪ್ರತಿನಿಧಿ, ದಕ್ಷಿಣ ವಲಯ ಆರೋಗ್ಯಾಧಿಕಾರಿಗಳೊಂದಿಗೆ ಸಭೆ ನಡೆಸಲಾಗಿರುತ್ತದೆ. ಸದರಿ ಸಭೆಯಲ್ಲಿ ಎಲ್ಲಾ ವಿಷಯಗಳ ಕುರಿತು ಸಂಸ್ಥೆಯ ಪ್ರತಿನಿಧಿಗಳಿಗೆ ವಿವರಿಸಿ, ತುರ್ತಾಗಿ ಸ್ಥಗಿತಗೊಂಡಿರುವ 11 ಇಂದಿರಾ ಕ್ಯಾಂಟೀನ್‌ಗಳನ್ನು ಪುನಾರಂಭಿಸುವಂತೆ ಸೂಚಿಸಲಾಗಿರುತ್ತದೆ.

ದಕ್ಷಿಣ ವಲಯದಲ್ಲಿ ಮುಚ್ಚಿದ್ದ 11 ಇಂದಿರಾ ಕ್ಯಾಂಟೀನ್‌ಗಳನ್ನು ದಿನಾಂಕ: 19-07-2024 ರಿಂದ ಅಂದರೆ ಇಂದಿನಿಂದ ಗುತ್ತಿದಾರರು ಪುನರಾರಂಭ ಮಾಡಿರುತ್ತಾರೆ.

ಮುಂದಿನ ದಿನಗಳಲ್ಲಿ ಈ ರೀತಿ ಪುನರಾವರ್ತನೆಗೊಂಡಲ್ಲಿ ಕಾನೂನು ರೀತಿ ಕ್ರಮಕೈಗೊಂಡು ಪರ್ಯಾಯ ವ್ಯವಸ್ಥೆ ಕೈಗೊಳ್ಳಲಾಗುವುದೆಂದು ಸಂಬಂಧಪಟ್ಟ ಸಂಸ್ಥೆಯವರಿಗೆ ಎಚ್ಚರಿಕೆ ನೀಡಲಾಗಿದೆ ಎಂದು ಆರೋಗ್ಯ ವಿಭಾಗದ ವಿಶೇಷ ಆಯುಕ್ತರಾದ ಸುರಳ್ಕರ್ ವಿಕಾಸ್ ಕಿಶೋರ್ ರವರು ತಿಳಿಸಿರುತ್ತಾರೆ.




### ಬಿಬಿಎಂಪಿ ವ್ಯಾಪ್ತಿಯಲ್ಲಿ ಮರಗಳ ಗಣತಿ

ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಮರಗಳ ಗಣತಿ ಪ್ರಕ್ರಿಯೆ ಆರಂಭವಾಗಿ ಆರು ತಿಂಗಳು ಕಳೆದರೂ 198 ವಾರ್ಡ್‌ಗಳ ಪೈಕಿ 80 ವಾರ್ಡ್‌ಗಳಲ್ಲಿ ಮಾತ್ರ 2.5 ಲಕ್ಷ ಮರಗಳ ಎಣಿಕೆ ಪೂರ್ಣಗೊಂಡಿದೆ. ಆದ್ದರಿಂದ ಆ.ತಿಂಗಳಿಗೆ ಮುಗಿಯಲಿರುವ ಗಡುವಿನ ಅವಧಿಯನ್ನು ತಾಂತ್ರಿಕ ನೆಪವೊಡ್ಡಿ ಮತ್ತಷ್ಟು ವಿಸ್ತರಿಸುವ ಸಾಧ್ಯತೆ ದಟ್ಟವಾಗಿದೆ. ಸುಮಾರು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಮರಗಳ ಗಣತಿ ಕಾರ್ಯಕ್ಕೆ ಕಳೆದ ಜನವರಿಯಲ್ಲಿ ಚಾಲನೆ ನೀಡಲಾಗಿದೆ. ಅದರಂತೆ, ರಾಸ್ತಾ ಇನ್‌ಫ್ರಾ ಪ್ರಾಜೆಕ್ಟ್ ಕಂಪನಿಯು 80 ಜನರನ್ನು 16 ತಂಡಗಳಲ್ಲಿ ಹಂಚಿಕೆ ಮಾಡಿ, ಗಣತಿ ಪ್ರಾರಂಭಿಸಿದೆ. ಈಗಾಗಲೇ ಹನುಮಂತನಗರ, ಶ್ರೀನಗರ, ಗಾಳಿ ಆಂಜನೇಯ ದೇವಸ್ಥಾನ, ಗಿರಿನಗರ, ಕತ್ರಿಗುಪ್ಪೆ, ವಿದ್ಯಾಪೀಠ ಮತ್ತು ಅದರ ಪಕ್ಕದ ಎರಡು ವಾರ್ಡ್‌ಗಳಲ್ಲಿ ಗಣತಿ ಪೂರ್ಣಗೊಂಡಿದೆ. ಇಲ್ಲಿಒಟ್ಟು 30 ಸಾವಿರ ಮರಗಳಿರುವುದು ಗಣತಿಯಿಂದ ಪತ್ತೆಯಾಗಿದೆ.

ಕರ್ನಾಟಕ ಸ್ಟೇಟ್ ರಿಮೋಟ್ ಸೆನ್ಸಿಂಗ್ ಸೆಂಟರ್ ಮೊಬೈಲ್ ಆ್ಯಪ್ ಸಿದ್ಧಪಡಿಸಿದೆ. 5.5 ಸೆಂ.ಮೀ. ಸುತ್ತಳತೆ, 1 ಮೀಟರ್ ಎತ್ತರವಿರುವ ಮರಗಳನ್ನು ಮಾತ್ರ ಗಣತಿಗೆ ಪರಿಗಣಿಸಲಾಗಿದೆ. ಗುತ್ತಿಗೆದಾರರು ಇಂತಹ ಗಾತ್ರ ಹೊಂದಿರುವ ಪ್ರತಿ ಮರದ ಮೇಲೆ ಸಂಖ್ಯೆಯನ್ನು ದಾಖಲಿಸುತ್ತಿದ್ದು, ಚಿತ್ರ ಸಮೇತ ಮರದ ಹೆಸರು, ಪ್ರಭೇದ ಸೇರಿದಂತೆ ಇತರೆ ವಿವರವುಳ್ಳ ಮಾಹಿತಿಯನ್ನು ಆ್ಯಪ್‌ನಲ್ಲಿ ದಾಖಲಿಸಲಾಗುತ್ತಿದೆ. ಇದರಿಂದ ನಗರದಲ್ಲಿರುವ ಮರಗಳ ಸಂಖ್ಯೆ ಎಷ್ಟು ಎಂಬ ನಿಖರ ಮಾಹಿತಿ ತಿಳಿಯಲಿದೆ. ಇದನ್ನಾಧರಿಸಿ, ಎಲ್ಲಿಹೆಚ್ಚು ಗಿಡಗಳನ್ನು ನೆಡಬೇಕು ಎಂಬುದನ್ನು ಬಿಬಿಎಂಪಿ ನಿರ್ಧರಿಸಲಿದೆ.



## ಸಿದ್ಧಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

### ತನುಧರ್ಮವನ್ನು ಮೂಢಜನವೈದೆ ತನ್ನದೆಂದು

ನಿಜಗುಣರ ಪರಮಾನುಭವ ಬೋಧೆಯ ಮಾತು. ತೋರುವ ಶರೀರವೇ ತಾನೆನ್ನುವುದು ತಪ್ಪು. ನೀರಿನಿಂದುಂಟಾದ ಗುಳ್ಳೆ ನೀರೇ ಹೊರತು ಗುಳ್ಳೆಯಲ್ಲ. ತೋರಿದ ಕಾಲದಲ್ಲಿ ಮಾತ್ರ ಗುಳ್ಳೆ ಎನಿಸಬಹುದಾದರೂ ಆಗಲೂ ಅದು ನೀರಿಗೆ ಭಿನ್ನವಲ್ಲ. ಅದರಂತೆ ತೋರುವ ದೇಹ ಚೈತನ್ಯಕ್ಕೆ ಹೊರತಾದುದಲ್ಲವಾದ್ದರಿಂದ ತಾನು ಚೈತನ್ಯವೇ ಹೊರತು ದೇಹವಲ್ಲ. ತಾನು ದೇಹವಲ್ಲವೆಂದ ಬಳಿಕ ಹುಟ್ಟುವ ಸಾಯುವ ಮುಂತಾದ ದೇಹದ ಧರ್ಮ ಸ್ವಭಾವಗಳು ತನ್ನವು ಹೇಗಾದಾವು? ತಾನಲ್ಲದ ಕೀಟಾದಿಗಳ ಧರ್ಮ ತನ್ನವಾಗದಂತೆ ತಾನಲ್ಲದ ದೇಹದ ಧರ್ಮಗಳೂ ತನ್ನವಲ್ಲ. ಆದಾಗ್ಯೂ ದೇಹ ಧರ್ಮಗಳು ತನ್ನವೆಂದು ಜನ ತಿಳಿಯುವರು. ಇದಕ್ಕೆ ಕಾರಣ ತನ್ನ ನಿಜ ಸ್ವರೂಪದ ಅರಿವಿಲ್ಲದಿರುವುದು. ಇಂಥವರನ್ನು ಮೂಢರು ಎನ್ನಲಾಗಿದೆ. ವ್ಯಾವಹಾರಿಕ ಪ್ರಪಂಚದಲ್ಲಿ ದೇಹ ತಾನು ತನ್ನದೆಂಬುದನ್ನು ಅಲ್ಲಗಳೆಯಲಾಗದಿದ್ದರೂ ಶಾಶ್ವತ ಸತ್ಯದ ದೃಷ್ಟಿಯಿಂದ ದೇಹ ತಾನಲ್ಲ ತನ್ನದಲ್ಲ. ಈ ಹಿನ್ನೆಲೆಯಲ್ಲಿ ದೇಹ ಧರ್ಮ ತನಗಿಲ್ಲ. ಈ ತತ್ತ್ವ ಅರಿತವನು ಸಾವಿಗೆ ಎಂದೂ ಹೆದರಲಾರ. ಏಕೆಂದರೆ ಹುಟ್ಟುವುದು ಸಾಯುವುದು ದೇಹದ ಧರ್ಮ. ತಾನು ಸತ್ ಚಿತ್ ನಿತ್ಯ ಆನಂದ ಪರಿಪೂರ್ಣ ಚೈತನ್ಯ ಸ್ವರೂಪನಾದ್ದರಿಂದ ತಾನು ಹುಟ್ಟು ಸಾಯುವವನಲ್ಲ. ಅಥವಾ ಪ್ರತಿದಿನದ ನಿದ್ರೆ ಒಂದು ಸಾವು. ಎಚ್ಚರ ಒಂದು ಹುಟ್ಟು. ನಿತ್ಯ ಹುಟ್ಟಿ ಸಾಯುವವನಿಗೆ ಸಾವಿನ ಭಯವೆಲ್ಲಿ? ಸಾವು ಅಪಶಕುನ ಎಂಬಿತ್ಯಾದಿ ಅನ್ನುವವರು, ಸಾವಿಗೆ ಹೆದರುವವರು ತಿಳಿಗೇಡಿಗಳು.

## ಸರ್ಕಾರದಿಂದ ಬೆಂಗಳೂರಲ್ಲಿ ಡೆಂಗ್ಯೂ ನಿಯಂತ್ರಣಕ್ಕೆ ಮಹತ್ವದ ಕ್ರಮ

• ಉದಯವಾಹಿನಿ, ಬೆಂಗಳೂರು

ನಗರದಲ್ಲಿ ದಿನೇ ದಿನೇ ಡೆಂಗ್ಯೂ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿವೆ. ನಿನ್ನೆಯಷ್ಟೇ ಬಿಬಿಎಂಪಿ ವ್ಯಾಪ್ತಿಯಲ್ಲಿ 265 ಕೇಸ್ ದಾಖಲಾಗಿ, 4305ಕ್ಕೆ ಪ್ರಕರಣಗಳ ಸಂಖ್ಯೆ ಏರಿಕೆಯಾಗಿತ್ತು. ಈ ಹಿನ್ನಲೆಯಲ್ಲಿ ರಾಜ್ಯ ಸರ್ಕಾರದಿಂದ ನಿಯಂತ್ರಣ ಕ್ರಮಕ್ಕಾಗಿ ನೋಡಲ್ ಅಧಿಕಾರಿಗಳನ್ನು ನೇಮಿಸಿದೆ. ಈ ಕುರಿತಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಎಕ್ಸ್ ಮಾಡಿ ಮಾಹಿತಿ ಹಂಚಿಕೊಂಡಿದ್ದು, ಬೆಂಗಳೂರಿನ ಸರ್ಕಾರಿ ಆಸ್ಪತ್ರೆಗಳಲ್ಲಿ ಡೆಂಗ್ಯೂ ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಈ ಚಿಕಿತ್ಸೆಯ ಬಗ್ಗೆ ಗಮನ ಹರಿಸೋದಕ್ಕಾಗಿ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ ಅಂತ ತಿಳಿಸಿದೆ. ಬೆಂಗಳೂರಲ್ಲಿ ಡೆಂಗ್ಯೂ ರೋಗಿಗಳ ಚಿಕಿತ್ಸೆಗಾಗಿ ಕೆಸಿ ಜನರಲ್ ಆಸ್ಪತ್ರೆಗೆ ಡಾ.ಸುರೇಶ್-9986121101, ಸಿವಿ ರಾಮನ್ ಜನರಲ್ ಆಸ್ಪತ್ರೆಗೆ ಡಾ.ಕವಿತ ಗೌತಮ್ -9008594651, ಜಯನಗರ ಜನರಲ್ ಆಸ್ಪತ್ರೆಗೆ ಡಾ.ದೇವೇಂದ್ರಪ್ಪ ಕೆ ಆರ್-9880571367, ಯಲಹಂಕ ಜನರಲ್ ಆಸ್ಪತ್ರೆಗೆ ಡಾ.ಗಣೇಶ್ -9980025323, ಕೆ ಆರ್ ಪುರಂ ಜನರಲ್ ಆಸ್ಪತ್ರೆಗೆ ಡಾ.ಅಶೋಕ್ ರೆಡ್ಡಿ -7022329578 ಹಾಗೂ ವಾಣಿವಿಲಾಸ ಆಸ್ಪತ್ರೆಗೆ ಡಾ.ರವಿಶಂಕರ್ -9449487592 ಅವರನ್ನು ನೋಡಲ್ ಅಧಿಕಾರಿಯಾಗಿ ನೇಮಕ ಮಾಡಿದೆ.

## ಬೆಂಗಳೂರಲ್ಲಿ ಸರ್ಕಾರಿ ಆಸ್ಪತ್ರೆಯ ಕಟ್ಟಡದಿಂದ ಹಾರಿ ರೋಗಿ ಆತ್ಮಹತ್ಯೆ

• ಉದಯವಾಹಿನಿ, ಬೆಂಗಳೂರು

ರೋಗಿಯೊಬ್ಬ ಸರ್ಕಾರಿ ಆಸ್ಪತ್ರೆ ಎರಡನೇ ಮಹಡಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆನೇಕಲ್ ತಾಲ್ಲೂಕಿನ ಸರ್ಕಾರಿ ಆಸ್ಪತ್ರೆಯಲ್ಲಿ ನಡೆದಿದೆ.ಆತ್ಮಹತ್ಯೆ ಮಾಡಿಕೊಂಡ ರೋಗಿಯನ್ನ ಮುನಿಯಲ್ಲಪ್ಪ (45) ಎಂದು ತಿಳಿದುಬಂದಿದೆ. ಕಳೆದ ಜುಲೈ 16ರಂದು ಆಸ್ಪತ್ರೆಗೆ ದಾಖಲಾಗಿದ್ದ ಮುನಿಯಲ್ಲಪ್ಪ ಆಸ್ಪತ್ರೆಗೆ ದಾಖಲಾಗಿದ್ದ.ಅಸ್ತಮಾ ಹೊಟ್ಟೆನೋವು, ಜ್ವರ ಎಂದು ಮುನಿಯಲ್ಲಪ್ಪ ದಾಖಲಾಗಿದ್ದ. ಕೆಳ ದಿನಗಳಿಂದ ಆರೋಗ್ಯ ಸಮಸ್ಯೆಯಿಂದ ಮುನಿಯಪ್ಪ ಬಳಲುತ್ತಿದ್ದ. ಆಸ್ಪತ್ರೆಗೆ ದಾಖಲಾಗಿ ಒಂದೇ ದಿನಕ್ಕೆ ಡಿಸ್ಚಾರ್ಜ್ ಆಗಿದ್ದ. ಇಂದು ಮತ್ತೆ ಆನೇಕಲ್ ತಾಲ್ಲೂಕು, ಆಸ್ಪತ್ರೆಗೆ ಮುನಿಯಪ್ಪ ಬಂದಿದ್ದ. ಆಸ್ಪತ್ರೆಯ 2ನೇ ಮಹದಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.ಆಸ್ಪತ್ರೆಯ ಬಿಲ್ಡಿಂಗ್‌ನ ಸಜ್ಜಾದ ಮೇಲೆ ಮುನಿಯಲ್ಲಪ್ಪನ ಶವ ಬಿದ್ದಿತ್ತು. ಘಟನ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದಾರೆ. ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಸ್ಥಳಾಂತರಿಸಲಾಗಿದೆ.

## ಬೆಂಗಳೂರಿನಲ್ಲಿ ಮತ್ತೊಂದು ಮರ್ಡರ್ ತಮ್ಮನನ್ನೇ ಕೊಲೆ ಮಾಡಿದ ಪಾಪಿ ಅಣ್ಣ!

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನಲ್ಲಿ ಮತ್ತೊಂದು ಮರ್ಡರ್ ಆಗಿದ್ದು, ಸ್ವಂತ ಅಣ್ಣನೇ ತಮ್ಮನನ್ನು ಚಾಕುವಿನಿಂದ ಕೊಲೆ ಮಾಡಿರುವ ಘಟನೆ ನಡೆದಿದೆ.ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನ ಎಲೆಕ್ಯಾನಹಳ್ಳಿ ಗ್ರಾಮದಲ್ಲಿ ಘಟನೆ ನಡೆದಿದೆ. ಮಹಿಳೆ ಜೊತೆಗೆ ಸಂಬಂಧ ಬೆಳೆಸುವ ವಿಚಾರಕ್ಕೆ ಗಲಾಟೆ ನಡೆದಿದ್ದು, ಚಿಕ್ಕಪ್ಪನ ಮಗ ನವೀನ್ ಎಂಬಾತ್ ನಾಗೇಶ್ ನನ್ನು ಚಾಕುವಿನಿಂದ ಚುಚ್ಚಿ ಕೊಲೆ ಮಾಡಿದ್ದಾನೆ. ಘಟನೆ ಸಂಬಂಧ ಪ್ರಕರಣ ದಾಖಲಿಸಿಕೊಂಡ ದಾಬಸ್ ಪೇಟೆ ಪೊಲೀಸರು ಆರೋಪಿ ನವೀನ್ ನನ್ನು ಬಂಧಿಸಿದ್ದು, ವಿಚಾರಣೆ ನಡೆಸುತ್ತಿದೆ.

## 6 ತಿಂಗಳಲ್ಲಿ 1,791 ಡ್ರಗ್ಸ್ ಪ್ರಕರಣಗಳು ದಾಖಲು : ಸಚಿವ ಡಾ.ಜಿ.ಪರಮೇಶ್ವರ್

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಈ ವರ್ಷದ 6 ತಿಂಗಳಲ್ಲಿ 1,791 ಡ್ರಗ್ಸ್ ಪ್ರಕರಣಗಳು ದಾಖಲಾಗಿವೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದ್ದಾರೆ. ಈ ಕುರಿತು ವಿಧಾನ ಮಂಡಲದ ಕಲಾಪದಲ್ಲಿ ಮಾಹಿತಿ ನೀಡಿರುವ ಗೃಹ ಸಚಿವ ಡಾ.ಜಿ. ಪರಮೇಶ್ವರ್ ಅವರು, ಡ್ರಗ್ಸ್ ಮುಕ್ತ ಕರ್ನಾಟಕಕ್ಕೆ ಎಲ್ಲಾ ರೀತಿಯ ಕ್ರಮ ಕೈಗೊಳ್ಳಲಾಗುತ್ತಿದೆ. ಈ ವರ್ಷದ 6 ತಿಂಗಳಲ್ಲಿ 1,791 ಡ್ರಗ್ಸ್ ಪ್ರಕರಣಗಳು ದಾಖಲಾಗಿವೆ. ಈ ಪೈಕಿ 884 ಪ್ರಕರಣಗಳು ನ್ಯಾಯಾಲಯದ ವಿಚಾರಣೆಯಲ್ಲಿದ್ದು, 1,179 ವ್ಯಸನಿಗಳನ್ನು ಬಂಧಿಸಲಾಗಿದೆ. 189 ವ್ಯಸನಿಗಳಿಗೆ ಶಿಕ್ಷೆಯಾಗಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ ವಿಧಾನಮಂಡಲ ಕಲಾಪದಲ್ಲಿ ತಿಳಿಸಿದ್ದಾರೆ.

## ಶಾಲೆಯಿಂದ ಹೊರಗುಳಿದ ಮಕ್ಕಳ ಕರೆತರಲು ಮನೆ ಮನೆ ಸಮೀಕ್ಷೆ

• ಉದಯವಾಹಿನಿ, ಬೆಂಗಳೂರು

ಪ್ರಸಕ್ತ ಶಾಲಿನಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಿ ಅವರನ್ನು ಮುಖ್ಯವಾಹಿನಿಗೆ ಕರೆತರುವ ಉದ್ದೇಶದಿಂದ ಮನೆ ಮನೆ ಸಮೀಕ್ಷೆ ನಡೆಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಆದೇಶಿಸಿದೆ. ಮಕ್ಕಳನ್ನು ಗುರುತಿಸುವ ಮನೆ ಮನೆ ಸಮೀಕ್ಷೆ ನಡೆಸಲು ಸ್ವಸಹಾಯ ಗುಂಪುಗಳ ಸದಸ್ಯ ಮಹಿಳೆಯರನ್ನು ಗುರುತಿಸುವ ಕೆಲಸವನ್ನು ಜುಲೈ 19ರಂದೇ ನಡೆಸಬೇಕು. ಇದೇ 20, 22ರ ನಡುವೆ ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿ ಮಟ್ಟದ ಅಧಿಕಾರಿಗಳು ಸಭೆ ನಡೆಸಿ ಜುಲೈ 31ರೊಳಗೆ ಸಮೀಕ್ಷೆಯನ್ನು ಪೂರ್ಣಗೊಳಿಸಬೇಕು ಎಂದು ಸೂಚನೆ ನೀಡಲಾಗಿದೆ. ಶಿಕ್ಷಣ ವಂಚಿತ ಮತ್ತು ಶಾಲೆ ಬಿಟ್ಟ ಮಕ್ಕಳನ್ನು ಶಾಲೆಗೆ ಕರೆತರಲು ಮತ್ತು ಆ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣದ ವ್ಯಾಪ್ತಿಗೆ ಒಳಪಡಿಸಲು ಕ್ರಮ ವಹಿಸಲಾಗಿದೆ.

# ಉಚಿತ ಡಯಾಲಿಸಿಸ್ ಕೇಂದ್ರ ಆರಂಭಿಸಲು ಸಚಿವರ ಸೂಚನೆ

## ದಿನೇಶ್ ಗುಂಡೂರಾವ್ ಅಧಿಕಾರಿಗಳಿಗೆ ಸೂಚನೆ, ಉಚಿತ ಡಯಾಲಿಸಿಸ್ ಸೇವೆ ಪ್ರಾರಂಭಿಸಿ

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನ ವಸಂತನಗರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಶೀಘ್ರ ಉಚಿತ ಡಯಾಲಿಸಿಸ್ ಕೇಂದ್ರ ಪ್ರಾರಂಭಿಸಲು ಆರೋಗ್ಯ ಸಚಿವರಾದ ದಿನೇಶ್ ಗುಂಡೂರಾವ್ ರವರು ಅಧಿಕಾರಿಗಳಿಗೆ ಸೂಚನೆ ನೀಡಿದರು.ಬೆಂಗಳೂರಿನ ಪೂರ್ವ ವಲಯ ವ್ಯಾಪ್ತಿಯಲ್ಲಿ ಇಂದು ವಿವಿಧ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ವಸಂತನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ಡಯಾಲಿಸಿಸ್ ಕೇಂದ್ರಕ್ಕೆಂದು ಸ್ಥಾಪಿಸಿರುವ ಕಟ್ಟಡದಲ್ಲಿ ಇನ್ನೂ ಡಯಾಲಿಸಿಸ್ ಕೇಂದ್ರ ಸ್ಥಾಪನೆಯಾಗಿಲ್ಲ.

ಈ ಸಂಬಂಧ ಸರ್ಕಾರಿ ಉಚಿತ ಡಯಾಲಿಸಿಸ್ ಸೇವೆ ಯೋಜನೆಯಡಿ, ಸದರಿ ಸ್ಥಳದಲ್ಲಿ ಡಯಾಲಿಸಿಸ್ ಸೇವೆ ಪ್ರಾರಂಭಿಸಬೇಕು. ಉಚಿತ ಡಯಾಲಿಸಿಸ್ ಸೇವೆ ಪ್ರಾರಂಭಿಸುವುದರಿಂದ ಇಲ್ಲಿನ ಸುತ್ತಮುತ್ತಲಿನ ಬಡವರ್ಗದ ಜನರಿಗೆ ಸಾಕಷ್ಟು ಅನುಕೂಲವಾಗಲಿದೆ. ಅದಕ್ಕಾಗಿ ಅಗತ್ಯ ಉಪಕರಣಗಳ ವ್ಯವಸ್ಥೆ ಮಾಡಿಕೊಂಡು ತ್ವರಿತಗತಿಯಲ್ಲಿ ಕೇಂದ್ರವನ್ನು ಪ್ರಾರಂಭಿಸಬೇಕೆಂದು ಅವರು ಸೂಚಿಸಿದರು.ವಸಂತನಗರ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಆರೋಗ್ಯ ಕೇಂದ್ರದ ಕಾರ್ಯವೈಖರಿಯನ್ನು ಪರಿಶೀಲಿಸಿದರು. ಪ್ರತಿನಿತ್ಯ



ಉದಯವಾಹಿನಿ ಚಿತ್ರ

**ಅಗತ್ಯ ಉಪಕರಣಗಳ ವ್ಯವಸ್ಥೆ**

ಎಷ್ಟು ಮಂದಿ ಆಸ್ಪತ್ರೆಗೆ ಭೇಟಿ ನೀಡುತ್ತಾರೆ, ಎಷ್ಟು ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂಬಿತ್ಯಾದಿ ಮಾಹಿತಿ ಪಡೆದರು. ಪೂರ್ವ ವಲಯದ ರಾಮಸ್ವಾಮಿ ಪಾಳ್ಯದ ಕೊಳಗೇರಿ ಪ್ರದೇಶದಲ್ಲಿ ಸ್ಥಾಪಿಸಿರುವ ಫೀವರ್ ಕ್ಲಿನಿಕ್ ಗೆ ಚಾಲನೆ ನೀಡಲಾಯಿತು. ಡೆಂಗ್ಯೂ ಪ್ರಕರಣಗಳನ್ನು ನಿಯಂತ್ರಣ ಮಾಡುವ ನಿಟ್ಟಿನಲ್ಲಿ ಹೆಚ್ಚು ಪ್ರಕರಣಗಳು ಕಂಡುಬರುವ ಕೊಳಗೇರಿ ಪ್ರದೇಶಗಳಲ್ಲಿ ಫೀವರ್ ಕ್ಲಿನಿಕ್ ಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸಚಿವರು ನಿರ್ದೇಶಿಸಿದರು. ರಾಮಸ್ವಾಮಿ ಪಾಳ್ಯದ ಕೊಳಗೇರಿ ಪ್ರದೇಶದ ರಸ್ತೆಗಳಲ್ಲಿ ಸೊಳ್ಳೆ ನಿಯಂತ್ರಣಕ್ಕಾಗಿ, ಆರೋಗ್ಯ **ಸಚಿವರೇ ಸ್ವತ:** ಫಾಗಿಂಗ್ ಮಾಡಿದರು. ಇದೇ ವೇಳೆ ಮನೆ ಮನೆ ಭೇಟಿ ನೀಡಿ ಬಿತ್ತಿ ಪತ್ರಗಳನ್ನು ವಿತರಿಸಿ, ನಾಗರೀಕರಲ್ಲಿ ಸೊಳ್ಳೆ

> **ಜೊತೆಗೆ 100 ಮೀಟರ್ ವ್ಯಾಪ್ತಿಯಲ್ಲಿ ಬರುವ ಮನೆಗಳಿಗೆ ಭೇಟಿ ನೀಡಿ ಫೀವರ್ ಪರೀಕ್ಷೆ, ಲಾರ್ವಾ ಸರ್ವೆ, ಫಾಗಿಂಗ್, ಸ್ಪ್ರೇ ಹಾಗೂ ಡೆಂಘೀ ಹರಡದಂತೆ ಮುಂಜಾಗ್ರತಾ ವಹಿಸಲು ಬಿತ್ತಿ ಪತ್ರಗಳನ್ನು ವಿತರಿಸಿ ಅರಿವು ಮೂಡಿಸಬೇಕು. ಇದಲ್ಲದೆ ಸೊಳ್ಳೆಗಳು ಕಚ್ಚದಂತೆ ಡೀಟ್ ಕ್ರೀಮ್ ವಿತರಿಸಿ ಕೈ ಮತ್ತು ಕಾಲುಗಳಿಗೆ ಹಚ್ಚಿಕೊಳ್ಳಲು ತಿಳಿಸಬೇಕೆಂದು ಹೇಳಿದರು.ನಗರದಲ್ಲಿ ಡೆಂಘೀ ತಡೆಗಟ್ಟಲು ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಸುಮಾರು 3161 ತಂಡಗಳಿಂದ 25 ಲಕ್ಷ ಮನೆಗಳಿಗೆ ಭೇಟಿ ನೀಡಿ ಸಮೀಕ್ಷೆ ನಡೆಸಲಾಗುತ್ತಿದೆ. ನಗರದಲ್ಲಿ ಪ್ರತಿನಿತ್ಯ ಸರಾಸರಿ 130 ರಿಂದ 150 ಪ್ರಕರಣಗಳು ಕಂಡು ಬರುತ್ತಿವೆ.**

ಉತ್ಪತ್ತಿಯಾಗದಂತೆ ನೋಡಿಕೊಳ್ಳಲು ಸೂಚನೆ ನೀಡಿದರು. ಸ್ವಚ್ಛ ನೀರಿನಿಂದ ಸೊಳ್ಳೆಗಳು ಉತ್ಪತ್ತಿಯಾಗಲಿದ್ದು, ನೀರನ್ನು ಶೇಖರಿಸಿಟ್ಟುಕೊಳ್ಳದೆ ಬದಲಾವಣೆ ಮಾಡುತ್ತಿರಬೇಕೆಂದು ಅರಿವು ಮೂಡಿಸಿದರು.

> **ಈ ವೇಳೆ ಶಿವಾಜಿನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ರಿಜ್ವಾನ್ ಹರ್ಷದ್, ಆರೋಗ್ಯ ಇಲಾಖೆಯ ಆಯುಕ್ತರಾದ ಡಿ. ರಂದೀಪ್, ರಾಷ್ಟ್ರೀಯ ಆರೋಗ್ಯ ಮಿಷನ್ ನಿರ್ದೇಶಕರಾದ ಡಾ. ನವೀನ್ ಭಟ್, ಮುಖ್ಯ ಆರೋಗ್ಯಾಧಿಕಾರಿಗಳಾದ ಡಾ. ಸೈಯದ್ ಸಿರಾಜುದ್ದೀನ್ ಮದನಿ, ಡಾ. ನಿರ್ಮಲಾ ಬುಗ್ಗಿ, ಪಶ್ಚಿಮ ವಲಯ ಆರೋಗ್ಯಾಧಿಕಾರಿಯಾದ ಡಾ. ಭಾಗ್ಯಲಕ್ಷ್ಮೀ, ಇನ್ನಿತರೆ ಅಧಿಕಾರಿಗಳು ಪಾಲ್ಗೊಂಡಿದ್ದರು.**

ಈ ಕೊಳಗೇರಿ ಪ್ರದೇಶದಲ್ಲಿರುವ ಸರ್ಕಾರಿ ಶಾಲೆಗೆ ಭೇಟಿ ನೀಡಿ ಮಕ್ಕಳಿಗೆ ಡೀಟ್ ಕ್ರೀಮ್ ವಿತರಿಸಿ ಕೈ ಮತ್ತು ಕಾಲುಗಳಿಗೆ ಹಚ್ಚಿಕೊಳ್ಳಲು ತಿಳಿಸಿದರು.

ಅಲ್ಲದೆ ಡೆಂಗ್ಯೂ ನಿಯಂತ್ರಣಕ್ಕಾಗಿ ಸೊಳ್ಳೆ ಉತ್ಪತ್ತಿ ತಾಣಗಳನ್ನು ನಾಶಪಡಿಸಲು ನಿಮ್ಮ ಮನೆಯಲ್ಲಿ ಪೋಷಕರು ಹಾಗೂ ಸುತ್ತಮುತ್ತಲಿನ ಮನೆಯವರಲ್ಲಿ ಅರಿವು ಮೂಡಿಸಲು ವಿದ್ಯಾರ್ಥಿಗಳಲ್ಲಿ ತಿಳಿಸಿದರು. ಬೆಂಗಳೂರಿನಲ್ಲಿ 100 ಮೀಟರ್ ಪ್ರದೇಶದ ವ್ಯಾಪ್ತಿಯಲ್ಲಿ 2 ಕ್ಕಿಂತ ಹೆಚ್ಚು ಡೆಂಗ್ಯೂ ಪ್ರಕರಣಗಳು ಕಂಡು ಬಂದರೆ ಅದನ್ನು ಹಾಟ್ ಸ್ಪಾಟ್ ಎಂದು ಗುರುತಿಸಬೇಕು.

## ಆಪ್ತ ಸಹಾಯಕರನ್ನು ಕರೆತರದಂತೆ ಸ್ಪೀಕರ್ ಸೂಚನೆ

• ಉದಯವಾಹಿನಿ, ಬೆಂಗಳೂರು

ವಿಧಾನಸಭೆಯ ಮೊಗಸಾಲೆಗೆ (ಲಾಂಜ್) ಆಪ್ತ ಸಹಾಯಕರನ್ನು ಕರೆತರಬಾರದು ಎಂದು ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಶಾಸಕರಿಗೆ ಸೂಚನೆ ನೀಡಿದರು.ಬೆಳಿಗ್ಗೆ ಸದನ ಸಮಾವೇಶಗೊಂಡ ಕೂಡಲೆ ನಿನ್ನೆ ಸದನಕ್ಕೆ ಬೇಗ ಆಗಮಿಸಿದ ಶಾಸಕರ ಹೆಸರನ್ನು ವಾಚಿಸಿದ ನಂತರ ಸಭಾಧ್ಯಕ್ಷರು ಈ ಸೂಚನೆ ನೀಡಿದರು. ಲಾಂಜ್‌ನಲ್ಲಿ ಆಪ್ತ ಸಹಾಯಕರು ಕೂರುವುದರಿಂದ ಅನಗತ್ಯ ಗದ್ದಲದ ವಾತಾವರಣವಾಗಲಿದೆ. ಹೀಗಾಗಿ ಶಾಸಕರು ತಮ ಆಪ್ತ ಸಹಾಯಕರನ್ನ ಕರೆತರಬಾರದು.

ಮೊಗಸಾಲೆಗೆ ಆಪ್ತ ಸಹಾಯಕರು ಬಂದರೆ ಗದ್ದಲದ ವಾತಾವರಣ ನಿರ್ಮಾಣವಾಗುತ್ತಿದೆ. ಎಷ್ಟೋ ಬಾರಿ ಶಾಸಕರು ಮತ್ತು ಸಚಿವರಿಗೆ ಕೂರಲು ಲಾಂಜ್‌ನಲ್ಲಿ ಜಾಗ ಸಿಗುತ್ತಿಲ್ಲ. ಮಾಜಿ ಶಾಸಕರೊಬ್ಬರು ಲಾಂಜ್‌ನಲ್ಲಿ ಹೋಟೆಲ್ ಮಾಡಿದ್ದೀರಾ ಎಂದು ಕೇಳಿದರು ಎಂದು ಹೇಳಿದರು. ಆದ್ದರಿಂದ ಅನಗತ್ಯವಾಗಿ ಶಾಸಕರು ತಮ ಸಹಾಯಕರನ್ನು ಕರೆತರಬೇಡಿ. ವಯಸ್ಸಾದ ಹಿರಿಯ ಶಾಸಕರು ಅಥವಾ ಮಾಜಿ ಶಾಸಕರು ನೆರವಿಗಾಗಿ ಒಬ್ಬರನ್ನು ಕರೆತಂದರೆ ಅಡ್ಡಿಯಿಲ್ಲ. ಆದರೆ ಉಳಿದವರು ಈ ರೂಢಿಯನ್ನು ಕೈಬಿಡಿ. ಮೊಗಸಾಲೆಯ ಗೌರವ ಕಾಪಾಡಿ ಎಂದು ಮನವಿ ಮಾಡಿದರು. ವಿಧಾನಸಭೆಯ ಮೊಗಸಾಲೆಯಲ್ಲಿ ಮಧ್ಯಾಹ್ನದ ಊಟದ ನಂತರ ಶಾಸಕರ ಅಲ್ಪಕಾಲದ ವಿಶ್ರಾಂತಿಗೆ ಒರಗು (ರಿಕ್ಲೈನಿಂಗ್) ಕುರ್ಚಿಯ ವ್ಯವಸ್ಥೆ ಮಾಡಲಾಗಿದೆ. ಇದನ್ನು ಪ್ರಾಯೋಗಿಕವಾಗಿ ಮಾಡಿದ್ದು, ಒಂದು ಕುರ್ಚಿಯನ್ನು ಇರಿಸಲಾಗಿದೆ. ಮುಂದಿನ ಅಧಿವೇಶನದ ಹೊತ್ತಿಗೆ ಈ ಕುರ್ಚಿಗಳ ಸಂಖ್ಯೆಯನ್ನು ಹೆಚ್ಚಿಸಲಾಗುವುದು ಎಂದು ಪ್ರಕಟಿಸಿದರುಬಜೆಟ್ ಅಧಿವೇಶನದಿಂದ ವಿಧಾನಸಭೆಯ ಮೊಗಸಾಲೆಯಲ್ಲೇ ಎಲ್ಲಾ ಶಾಸಕರಿಗೆ ಬೆಳಗಿನ ಉಪಾಹಾರ, ಮಧ್ಯಾಹ್ನ ಊಟದ ವ್ಯವಸ್ಥೆಯನ್ನು ಪೀಠ ಕಲ್ಪಿಸಿದೆ.



ಉದಯವಾಹಿನಿ ಚಿತ್ರ

> **ಊಟಕ್ಕಾಗಿ ಹೊರಗೆ ಹೋಗಿ ಬರುವುದು ತಡವಾಗದಿರಲಿ ಎನ್ನುವ ಕಾರಣಕ್ಕೆ ಈ ಕ್ರಮವನ್ನು ತೆಗೆದುಕೊಂಡಿದೆ. ಆದರೂ ಕೆಲವರು ಊಟವಾದ ನಂತರ ವಿಶ್ರಾಂತಿಗೆ ಶಾಸಕರ ಭವನಕ್ಕೆ ಹೋಗಿ ಬರುವುದಾಗಿ ಹೇಳುತ್ತಾರೆ. ಅದನ್ನು ತಪ್ಪಿಸಲು ಈಗ ಅಲ್ಪಕಾಲದ ವಿಶ್ರಾಂತಿಗೆ (ನ್ಯಾಪ್) ವ್ಯವಸ್ಥೆ ಮಾಡಲಾಗಿದೆ ಎಂದು ಅವರು ತಿಳಿಸಿದರು.**

> **ಹಾಗೆಯೇ ಬೇರೆಯವರನ್ನು ಮೊಗಸಾಲೆಗೆ ಬರಲು ಒಳಬಿಡಲು ಮಾರ್ಷಲ್‌ಗಳ ಮೇಲೆ ಒತ್ತಡ ಹಾಕಬೇಡಿ. ನಾವೇ ಮಾಡಿದ ಕಾನೂನುಗಳನ್ನು, ನಿಯಮಗಳನ್ನು ಅವರು ಪಾಲಿಸುತ್ತಾರೆ. ಅವರ ಮೇಲೆ ಒತ್ತಡ ಹಾಕಿ ಬೇರೆಯವರನ್ನು ಒಳಗೆ ಕರೆತರುವುದರಲ್ಲಿ ಯಾವ ಹೆಚ್ಚುಗಾರಿಕೆಯೂ ಇಲ್ಲ ಎಂದು ಅವರು ಹೇಳಿದರು.**

## ಮನೆಗೆ ಬೀಗ ಹಾಕಿ ಕೀ ಅಡಗಿಸಿಡುವ ಅಭ್ಯಾಸವಿದೆಯಾ.. ಹಾಗಾದ್ರೆ ಹುಷಾರ್

• ಉದಯವಾಹಿನಿ, ಬೆಂಗಳೂರು

ನಗರದಲ್ಲಿ ಅಪರಾಧ ಕೃತ್ಯಗಳು ನಡೆಯದಂತೆ ನೋಡಿಕೊಳ್ಳಲು ಸಾರ್ವಜನಿಕರು ಎಚ್ಚರಿಕೆ ವಹಿಸಬೇಕು ಎಂದು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ್ ಇಂದಿಲ್ಲಿ ಮನವಿ ಮಾಡಿಕೊಂಡರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾರ್ವಜನಿಕರು ತಮ ಮನೆಗಳಿಗೆ ಬೀಗ ಹಾಕಿ ಹೊರಹೋಗುವ ಸಂದರ್ಭದಲ್ಲಿ ಕೀಗಳನ್ನು ಮನೆಯ ಆವರಣದಲ್ಲಿ ಬಿಟ್ಟು ಹೋಗಬಾರದು ಎಂದು ಸಲಹೆ ನೀಡಿದರು. ಕೆಲವರು ಮನೆಗೆ ಬೀಗ ಹಾಕಿ ಕೀಯನ್ನು ಚಪ್ಪಲಿ ಸ್ಟ್ಯಾಂಡ್, ಹೂಕುಂಡ, ಕಿಟಕಿ ಮತ್ತಿತರ ಜಾಗಗಳಲ್ಲಿ ಇಟ್ಟು ಹೋಗುವುದು ಮಾಮೂಲು. ಇದರಿಂದಾಗಿ ಮನೆಗಳ್ಳತನಗಳು ಹೆಚ್ಚಾಗುತ್ತಿವೆ. ಹೀಗಾಗಿ ಸಾರ್ವಜನಿಕರು ಇನ್ನುಮುಂದೆ ಎಚ್ಚರಿಕೆ ವಹಿಸಬೇಕು ಎಂದರು.

ನಗರದಲ್ಲಿ ಚಪ್ಪಲಿ, ಶೂಗಳ್ಳರು ಹೆಚ್ಚಾಗಿದ್ದಾರೆ. ಹೀಗಾಗಿ ಸಾರ್ವಜನಿಕರು ತಮ ಬೆಲೆ ಬಾಳುವ ಚಪ್ಪಲಿ, ಶೂಗಳನ್ನು ಮನೆ ಮುಂದೆ ಜೋಪಾನವಾಗಿ ಇಟ್ಟುಕೊಳ್ಳಬೇಕು ಎಂದು ಆಯುಕ್ತರು ಸೂಚಿಸಿದರು.

ಹಿಂದೂ-ಮುಸ್ಲಿಂ ಐಕ್ಯತೆಗಾಗಿ ಸರ್ಕಾರದಿಂದ



ಉದಯವಾಹಿನಿ ಚಿತ್ರ

> **ಬಸ್‌ಗಳಲ್ಲಿ ಸಹಪ್ರಯಾಣಿಕರಂತೆ ವರ್ತಿಸಿ ಕೆಲವರು ಮಹಿಳೆಯರ ಹಣ ಮತ್ತಿತರ ವಸ್ತುಗಳನ್ನು ದೋಚುತ್ತಿರುವುದರಿಂದ ಬಸ್‌ಗಳಲ್ಲಿ ಸಂಚರಿಸುವ ಮಹಿಳೆಯರು ತಮ ಬ್ಯಾಗ್‌ಗಳಲ್ಲಿ ಭಾರೀ ಬೆಲೆ ಬಾಳುವ ಚಿನ್ನಾಭರಣ ಹಾಗೂ ಹಣವನ್ನು ಕೊಂಡೊಯ್ಯಬಾರದು. ಒಂದು ವೇಳೆ ಕೊಂಡೊಯ್ದರೆ ಜೋಪಾನವಾಗಿರಬೇಕು ಎಂದು ಆಯುಕ್ತರು ಕಿವಿಮಾತು ಹೇಳಿದರು.**

ನವರಸ ಉತ್ಸವ ಕಾರ್ಯಕ್ರಮ

## ಡಾ. ಪ್ರಭಾ ಮಲ್ಲಿಕಾರ್ಜುನ್, ಶ್ರೇಯಸ್ ಪಟೇಲ್ ಆಯ್ಕೆ ಅಸಿಂಧು ಕೋರಿ ಹೈಕೋರ್ಟ್‌ಗೆ ಅರ್ಜಿ

• ಉದಯವಾಹಿನಿ, ಬೆಂಗಳೂರು

ಲೋಕಸಭೆ ಚುನಾವಣೆಯಲ್ಲಿ ದಾವಣಗೆರೆ ಕ್ಷೇತ್ರದಿಂದ ಆಯ್ಕೆಯಾದ ಡಾ. ಪ್ರಭಾ ಮಲ್ಲಿಕಾರ್ಜುನ್, ಹಾಸನ ಕ್ಷೇತ್ರದಿಂದ ಚುನಾಯಿತರಾಗಿರುವ ಶ್ರೇಯಸ್ ಪಟೇಲ್ ಅವರ ಆಯ್ಕೆಯ ಸಿಂಧುತ್ವ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಪ್ರತ್ಯೇಕ ಚುನಾವಣಾ ತಕರಾರು ಅರ್ಜಿ ಸಲ್ಲಿಸಲಾಗಿದೆ. ಶ್ರೇಯಸ್ ಪಟೇಲ್ ಆಯ್ಕೆಯ ಅಸಿಂಧು ಕೋರಿ ವಕೀಲ ಜಿ. ದೇವರಾಜೇಗೌಡ ಪುತ್ರ ಡಿ. ಚರಣ್ ಗೌಡ ಅರ್ಜಿ ಸಲ್ಲಿಸಿದ್ದಾರೆ. ಶ್ರೇಯಸ್ ಪಟೇಲ್ ಚುನಾವಣೆ ವೇಳೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ತಮ್ಮ ಆಸ್ತಿಗಳನ್ನು ವಿವರಗಳನ್ನು ಪ್ರಾಮಾಣಿಕವಾಗಿ ನಮೂದಿಸಿಲ್ಲ. 5 ವರ್ಷಗಳ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಿಲ್ಲ ಎಂದು ತಕರಾರು ಎತ್ತಲಾಗಿದೆ. ಡಾ. ಪ್ರಭಾ ಮಲ್ಲಿಕಾರ್ಜುನ ಆಯ್ಕೆ ಅಸಿಂಧು ಕೋರಿ ಬಿಜೆಪಿಯ ಪರಾಜಿತ ಅಭ್ಯರ್ಥಿ ಜಿ.ಎಸ್. ಗಾಯತ್ರಿ ಸಿದ್ದೇಶ್ವರ ಅರ್ಜಿ ಸಲ್ಲಿಸಿದ್ದಾರೆ. ಮತದಾರರಿಗೆ ಕಾಂಗ್ರೆಸ್ ಗ್ಯಾರಂಟಿ ಕಾರ್ಡುಗಳನ್ನು ವಿತರಿಸುವ ಮೂಲಕ ವರ್ಷಕ್ಕೆ 1 ಲಕ್ಷ ರೂ. ಕೊಡುವ ಭರವಸೆ ನೀಡಿದ್ದಾರೆ. ಇದು ಪ್ರಚಾರ ಪ್ರತಿನಿಧಿ ಕಾಯ್ದೆಯ ವಿರುದ್ಧವಾಗಿದೆ. ಅವರ ಆಯ್ಕೆಯನ್ನು ಅಸಿಂಧುವೆಂದು ಘೋಷಿಸಬೇಕೆಂದು ಅರ್ಜಿಯಲ್ಲಿ ಮನವಿ ಮಾಡಲಾ ಗಿದೆ.

## ಕಲಾಪ: ವೀಕ್ಷಣೆಗೆ ಬಂದ ವಿದ್ಯಾರ್ಥಿಗಳು

• ಉದಯವಾಹಿನಿ, ಬೆಂಗಳೂರು

ಕಲಾಪ ವೀಕ್ಷಣೆಗೆಂದು ವಿವಿಧ ಶಾಲೆಯ ವಿದ್ಯಾರ್ಥಿಗಳು ವಿಧಾನಸೌಧಕ್ಕೆ ಖುಷಿ-ಖುಷಿಯಿಂದ ಬಂದಿದ್ದರು. ತಮ್ಮ ಶಾಲಾ ಬ್ಯಾಗುಗಳ ಸಮೇತ ಆಗಮಿಸಿದ್ದ ವಿದ್ಯಾರ್ಥಿಗಳ ಬ್ಯಾಗುಗಳನ್ನು ಒಳಗೆ ಬಿಡದೆ ವಿಧಾನಸೌಧ ಮುಂದಿನ ಬೃಹತ್ ಮೆಟ್ಟಿಲುಗಳ ಕೆಳಗಡೆ ಇರಿಸಲಾಯಿತು.ಪಾಪ ವಿದ್ಯಾರ್ಥಿಗಳು ವಿಧಾನ ಮಂಡಲದ ಕಾರ್ಯ-ಕಲಾಪಗಳನ್ನು ವೀಕ್ಷಿಸಲು ಒಳಗೆ ಹೋದರೆ, ಇತ್ತ ಹೊರಗಡೆ ಮಳೆ ಸುರಿದು ಮೆಟ್ಟಿಲು ಕೆಳಗೆ ಇಟ್ಟಿದ್ದ ಬ್ಯಾಗುಗಳು ನೆಂದು ಒಳಗಿದ್ದ ಪುಸ್ತಕಗಳು ಹಾಳಾಯಿತು. ಬ್ಯಾಗುಗಳನ್ನು ಒಳಗೆ ಬಿಡದಿದ್ದರೂ ಪರವಾಗಿಲ್ಲ, ಸುರಕ್ಷಿತ ಜಾಗದಲ್ಲಾದರೂ ಇರಿಸಬಹುದಿತ್ತು.

## ಹೊಸ ಬಾಂಬ್ ಸಿಡಿಸಿದ ಡಿಸಿಎಂ ಡಿ.ಕೆ.ಶಿವಕುಮಾರ್

• ಉದಯವಾಹಿನಿ, ಬೆಂಗಳೂರು

ಬಿಜೆಪಿಗರು ಭ್ರಷ್ಟಾಚಾರದ ಪಿತಾಮಹರು. ಯಡಿಯೂರಪ್ಪ ಅವರು ಹಾಗೂ ಬೊಮ್ಮಾಯಿ ಅವರ ಕಾಲದಲ್ಲಿ ಹಲವಾರು ನಿಗಮಗಳ ಸುಮಾರು ರೂ. 300 ಕೋಟಿಗೂ ಹೆಚ್ಚು ಅಕ್ರಮ ನಡೆದಿದೆ. ಇದನ್ನು ನಾವು ಸದನದ ಮೂಲಕ ಜನರಿಗೆ ತಿಳಿಸುತ್ತೇವೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಹೇಳಿದರು.

ವಿಧಾನಸೌಧದ ಬಳಿ ಮಾಧ್ಯಮದವರ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ಬಿಜೆಪಿ ಸರ್ಕಾರದ ಅವಧಿಯಲ್ಲಿ ಭೋವಿ ನಿಗಮದ ರೂ.87 ಕೋಟಿ. ಎಪಿಎಂಸಿಯ ರೂ.47 ಕೋಟಿ, 2019 ರಲ್ಲಿ ಅಂಗವಿಕಲ ಕಲ್ಯಾಣ ಇಲಾಖೆಯ ರೂ.22 ಕೋಟಿ, ಅಂಬೇಡ್ಕರ್ ನಿಗಮದ ಕೆನರಾ ಬ್ಯಾಂಕ್ ಅಲ್ಲಿನ ಹಣ ಜೂನ್ 2018 ರಲ್ಲಿ ರೂ.5 ಕೋಟಿ, ದೇವರಾಜ್ ಅರಸು ನಿಗಮದ ರೂ.47 ಕೋಟಿ, ಮಾಲಿನ್ಯ ನಿಯಂತ್ರಣ ಮಂಡಲಿಯ ರೂ.10 ಕೋಟಿ ಹಾಗೂ ಕೆಐಡಿಬಿಯ ಹಣ ಸೇಲಂಗೆ ಅಕ್ರಮವಾಗಿ ವರ್ಗಾವಣೆಯಾಗಿದೆ ಎಂದು ತಿಳಿಸಿದರು. ಬಿಜೆಪಿಯ ಅಕ್ರಮಗಳನ್ನು ತನಿಖೆ ನಡೆಸುವಿರಾ ಎಂದು ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದ ಅವರು, ಖಂಡಿತವಾಗಿಯೂ ತನಿಖೆ ನಡೆಸುತ್ತೇವೆ. ಆದರೆ ಎಲ್ಲವೂ ದಾಖಲೆಯಲ್ಲಿ ಇರಬೇಕು ಎನ್ನುವ ಕಾರಣಕ್ಕೆ ಸದನದಲ್ಲಿ ಎಲ್ಲಾ ದಾಖಲೆಗಳನ್ನು ಬಯಲು ಮಾಡುತ್ತೇವೆ. ಅಕ್ರಮಗಳ ಹಿಂದೆ ಇರುವ ಯಾವ ಮಂತ್ರಿ, ಅಧ್ಯಕ್ಷರು, ಮುಖ್ಯಮಂತ್ರಿಗಳು ಇದ್ದರು ಎಂದು ಜನರಿಗೆ ತಿಳಿಸುತ್ತೇವೆ ಎಂದು ಹೇಳಿದರು.

ಮುಖ್ಯಮಂತ್ರಿ ಹುದ್ದೆಗೆ ರೂ.2500 ಕೋಟಿ, ಮಂತ್ರಿ ಸ್ಥಾನಕ್ಕೆ ರೂ.100 ಕೋಟಿ ನೀಡಬೇಕು ಎನ್ನುವ ಬಸನಗೌಡ ಪಾಟೀಲ ಯತ್ನಾಳ ಅವರ ಆರೋಪ ಹಾಗೂ ಭೋವಿ ನಿಗಮದ ಅಕ್ರಮದ ಬಗ್ಗೆ ಗೂಳಿಹಟ್ಟಿ ಶೇಖರ್ ಮಾಡಿದ ಆರೋಪಗಳ ಮೇಲೆ ಏಕೆ ಬಿಜೆಪಿ ತನಿಖೆ ನಡೆಸಲಿಲ್ಲ ಎಂದು ಮರುಪ್ರಶ್ನಿಸಿದರು.

ಯಾವುದೇ ಭ್ರಷ್ಟಾಚಾರದ ಮೇಲೆ ತನಿಖೆ ನಡೆಯುತ್ತಿದ್ದರೆ ಆ ವಿಚಾರದಲ್ಲಿ ವಿಧಾನಸಭೆಯಲ್ಲಿ ಚರ್ಚೆ ನಡೆಸಲು ಅವಕಾಶವಿಲ್ಲ. ಆದರೆ ನಾವು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಬೆಲೆಕೊಟ್ಟು ಸದನದಲ್ಲಿ ಚರ್ಚೆ ಅವಕಾಶ ಮಾಡಿಕೊಟ್ಟಿದ್ದೇವೆ. ಅಕ್ರಮ ಎಸಗಿದ್ದರೆ ಯಾವುದೇ ಅಧಿಕಾರಿ, ಮಂತ್ರಿ, ಶಾಸಕ, ಯಾರೇ ಆಗಿರಲಿ ಅವರನ್ನು ರಕ್ಷಿಸುವ ಉದ್ದೇಶ ನಮಗಿಲ್ಲ ಎಂದು ಹೇಳಿದರು.



ಉದಯವಾಹಿನಿ ಚಿತ್ರ

> **ವಾಲ್ಮೀಕಿ ನಿಗಮದ 86 ಕೋಟಿ ಹಣ ತೆಲಂಗಾಣಕ್ಕೆ ಅಕ್ರಮವಾಗಿ ವರ್ಗಾವಣೆಯಾದ ತನಿಖೆ ನಡೆಸಲು ಎಸ್ ಐಟಿ ರಚನೆ ಮಾಡಿದ್ದೇವೆ. ತನಿಖಾ ತಂಡವು ಸುಮಾರು 36 ಕೋಟಿಗಳಷ್ಟು ಹಣವನ್ನು ವಶಕ್ಕೆ ಪಡೆದುಕೊಂಡಿದೆ. ಬ್ಯಾಂಕ್ ಅಧಿಕಾರಿ ಒಂದೇ ದಿನದಲ್ಲಿ ಕೋಟ್ಯಂತರ ರೂಪಾಯಿ ಸಾಲ ಮಂಜೂರು ಮಾಡಿದ್ದಾನೆ. ಇದಕ್ಕೆ ಕೇಂದ್ರ ಹಣಕಾಸು ಸಚಿವರನ್ನು ಹೊಣೆಗಾರರನ್ನಾಗಿ ಮಾಡಲು ಆಗುತ್ತದೆಯೇ ನಾವು ಪ್ರತಿಪಕ್ಷಗಳಿಗೆ ಈ ವಿಚಾರವಾಗಿ ಉತ್ತರ ಕೊಡಬೇಕಾಗಿದೆ ಎಂದು ಖಾರವಾಗಿ ತಿಳಿಸಿದರು.**

# ಆರ್.ಅಶೋಕ್, ವಿಜಯೇಂದ್ರ ನನ್ನ ರಾಜೀನಾಮೆ ಕೇಳಿದ್ದಾರೆ

## ಸದನದಲ್ಲಿ ನಿಯಮ 69ರ ಅಡಿಯಲ್ಲಿ ನಡೆದ ವಾಲ್ಮೀಕಿ ಅಭಿವೃದ್ಧಿ ನಿಗಮ ಕುರಿತಾದ ಚರ್ಚೆ

• ಉದಯವಾಹಿನಿ, ಬೆಂಗಳೂರು

ವಾಲ್ಮೀಕಿ ನಿಗಮದ ಹಗರಣ ಪ್ರಕರಣದಲ್ಲಿ ಆತ್ಮಹತ್ಯೆ ಮಾಡಿಕೊಂಡ ಅಧಿಕಾರಿ ಚಂದ್ರಶೇಖರ್ ಎಂಬುವರ ಡೆತ್ ನೋಟ್ ಓದುವಾಗ ಸಿಎಂ ಸಿದ್ದರಾಮಯ್ಯ ಅವರು ತಮ್ಮ ಹೆಸರನ್ನೇ ಬಿಟ್ಟಿದ್ದಾರೆ ಎಂದು ಸದನದ ಬಾವಿಗಿಳಿದು ವಿಪಕ್ಷಗಳು ಪ್ರತಿಭಟನೆ ನಡೆಸಿದ್ದು, ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉತ್ತರಿಸಿದ್ದಾರೆ.

ಸದನದಲ್ಲಿ ನಿಯಮ 69ರ ಅಡಿಯಲ್ಲಿ ನಡೆದ ವಾಲ್ಮೀಕಿ ಅಭಿವೃದ್ಧಿ ನಿಗಮ ಕುರಿತಾದ ಚರ್ಚೆಗೆ ಸದನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾತನಾಡಿದ್ದು, ಆರ್.ಅಶೋಕ್, ವಿಜಯೇಂದ್ರ ನನ್ನ ರಾಜೀನಾಮೆ ಕೇಳಿದ್ದಾರೆ. ಆರಗ ಜ್ಞಾನೇಂದ್ರ ಮಾಜಿ ಗೃಹ ಸಚಿವರು. ಇವರು ಹಿಂದಕ್ಕೆ ಪಡೆಯಿರಿ ಎಂದು ಹೇಳಿದ್ದಾರೆ. ನೀವು ಗೃಹ ಮಂತ್ರಿ ಆಗಿದ್ದಾಗಲೂ SIT ಬಗ್ಗೆ ಹೀಗೆ ಹೇಳಿದ್ದೀರಾ ಎಂದು ಪ್ರಶ್ನಿಸಿದ್ದಾರೆ.

26-5-2024 ರಂದು ಚಂದ್ರಶೇಖರ್ ಅವರು ಆತ್ಮಹತ್ಯೆ ಮಾಡಿಕೊಂಡರು. ಇವರು ತಮಿಳುನಾಡಿನ ಬೋವಿ ಸಮುದಾಯದವರು. ವಿರೋಧ ಪಕ್ಷದವರು ಸಾವಿರ ಸಾರಿ ದಲಿತ, ದಲಿತ ಅಂತ ಮಾತಾಡಿದಾರೆ. ಸಂವಿಧಾನದಲ್ಲಿ ಪರಿಶಿಷ್ಟ ಜಾತಿ/ವರ್ಗ ಎನ್ನುವ ಉಲ್ಲೇಖ ಇದೆ. ಇಬ್ಬರೂ ಸೇರಿ 24.1% ಜನಸಂಖ್ಯೆ ಇದ್ದಾರೆ. ಇವರ ಅಭಿವೃದ್ಧಿ ಆದರೆ ಮಾತ್ರ ಸಮಾಜದ ಆಶಯ ಈಡೇರುತ್ತದೆ. ಈ ಸಮುದಾಯಗಳಿಗೆ ಆರ್ಥಿಕ, ಸಾಮಾಜಿಕ ಶಕ್ತಿ ಬರುತ್ತದೆ. ಅಸಮಾನತೆ ಇರುವವರೆಗೂ ಸಮಾನತೆ ಸಾಧ್ಯವಿಲ್ಲ. ಸಂವಿಧಾನ ಬಂದು 70 ವರ್ಷ ಆದರೂ ಸಮಾನತೆ ಸಿಕ್ಕಿಲ್ಲ. ಇದನ್ನು ಸರಿಪಡಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಹೀಗಾಗಿ ವಾಲ್ಮೀಕಿ, ಬೋವಿ, ಆದಿಜಾಂಭವ, ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮ ಸೇರಿ ಹಲವು ಅಭಿವೃದ್ಧಿ ನಿಗಮಗಳು ಆರಂಭಿಸಲಾಗಿದೆ. ಈ ಎಲ್ಲಾ ನಿಗಮಗಳ ಉದ್ದೇಶ ಆಯಾ ಸಮುದಾಯಗಳನ್ನು ಆರ್ಥಿಕವಾಗಿ ಬಲಿಷ್ಠರನ್ನಾಗಿಸುವುದೇ ಆಗಿದೆ. 2013 ಡಿಸೆಂಬರ್‌ನಲ್ಲಿ SCP/TSP ಕಾಯ್ದೆ ಜಾರಿ ಮಾಡಿದೆ. ನಾನು ಮುಖ್ಯಮಂತ್ರಿಯಾಗಿ ಜಾರಿ ಮಾಡಿದೆ. 24.1% ಅಭಿವೃದ್ಧಿ ಹಣ ಈ ಸಮುದಾಯದ ಅಭಿವೃದ್ಧಿಗೆ ಮೀಸಲಿಡಬೇಕು ಎಂದು ಕಡ್ಡಾಯ ಮಾಡಿದ್ದು ನಾನು. ನೀವು ಬರಿ ಮೊಸಳೆ ಕಣ್ಣೀರು ಹರಿಸುತ್ತೀರಿ. ನಾನು ಹಿಂದಿನ ಸಿದ್ದರಾಮಯ್ಯ ಅಲ್ಲ ಅಂತ ಯತ್ನಾಳ್ ಅವರು ಹೇಳಿದರು. ಯತ್ನಾಳ್ ಅವರು ಕೂಡ ವಾಜಪೇಯಿ ಅವರ ಸಂಪುಟದಲ್ಲಿದ್ದ ಯತ್ನಾಳ್ ಆಗಿ ಉಳಿದಿಲ್ಲ ಈಗ. ಆರ್.ಅಶೋಕ್ ಮೂರು ಗಂಟೆ ನಾಲ್ಕು ನಿಮಿಷ ಸದನದಲ್ಲಿ ಆರೋಪಿಸಿದ್ದೆಲ್ಲಾ ಪತ್ರಿಕಾ ಸುದ್ದಿಗಳ ಆಧಾರದಲ್ಲಿ ಮಾತ್ರ. ಇದು ಖಖ ವರ್ಗದ ಅಭಿವೃದ್ಧಿಗೆ ಮೀಸಲಾದ ನಿಗಮ. ನಮ್ಮ ಸರ್ಕಾರ ಬಂದ ಮೇಲೆ ಇಡೀ ದೇಶದಲ್ಲಿ ಖಛಿ/ಣಿ ಕಾಯ್ದೆ ತಂದವರು ನಾವು. ಪರಿಶಿಷ್ಟ ಸಮುದಾಯಗಳ ಬಗ್ಗೆ ಪ್ರಾಮಾಣಿಕ ಕಾಳಜಿ ಇದ್ದಿದ್ದರೆ ಕೇಂದ್ರದ ಬಿಜೆಪಿಯಾಗಲಿ, ಅವರು ಅಧಿಕಾರದಲ್ಲಿರುವ ರಾಜ್ಯಗಳಲ್ಲಾಗಲಿ scsp/tsp ಕಾಯ್ದೆಯನ್ನು ಏಕೆ ಜಾರಿಗೆ ತಂದಿಲ್ಲ ಎಂದು ಪ್ರಶ್ನಿಸಿದರು.

ಇಡೀ ದೇಶದಲ್ಲಿ ಕರ್ನಾಟಕ ಮಾತ್ರ ಇಂಥಾ ಪರಿಣಾಮಕಾರಿ ಕಾಯ್ದೆಯನ್ನು ಸಮುದಾಯಗಳಿಗಾಗಿ ಜಾರಿ ಮಾಡಿದ್ದೇವೆ.

ಗುತ್ತಿಗೆಯಲ್ಲೂ ಸಮುದಾಯಗಳಿಗೆ ಮೀಸಲಾತಿ ಜಾರಿ ಮಾಡಿರುವುದು ನಾವು ಮಾತ್ರ. ಇಂಥಾದ್ದನ್ನು ಬಿಜೆಪಿಯವರು ಇದುವರೆಗೂ ಏಕೆ ಜಾರಿ ಮಾಡಿಲ್ಲ. ಖಅ-ಖಖ ಉದ್ದಿಮೆಗಳಿಗೆ / ಉದ್ಯಮಗಳಿಗೆ ವಿಶೇಷ ಸಾಲದ ಸವಲತ್ತು KIAD ಆಭೂಮಿ ವಿಚಾರದಲ್ಲಿ ಈ ಸಮುದಾಯಗಳಿಗೆ ಅನುಕೂಲ ಮಾಡಿ ಕಾನೂನು ತಂದವರು ನಾವು. ನಾವು ಸಮುದಾಯದವರ ವಿರೋಧಿಯಾಗಿದ್ದರೆ ಇಷ್ಟೆಲ್ಲವನ್ನೂ ಜಾರಿ ಮಾಡಲು ಆಗುತ್ತಿತ್ತಾ ಎಂದು ಪ್ರಶ್ನಿಸಿದರು.



ಉದಯವಾಹಿನಿ ಚಿತ್ರ

**ಸಿಎಂ ರಾಜೀನಾಮೆಗೆ ಆಗ್ರಹ**

> **1949 ರ ನವೆಂಬರ್ 25 ರಂದು ಸಂವಿಧಾನ ಸಭೆಯಲ್ಲಿ ಮಾಡಿದ ಭಾಷಣದಲ್ಲಿ, ಜನವರಿ 26-1950 ಕ್ಕೆ ಸಂವಿಧಾನ ಜಾರಿಗೆ ಬಂದಿದೆ. ನಾವೆಲ್ಲರೂ ವೈರುಧ್ಯತೆ ಇರುವ ಸಮಾಜಕ್ಕೆ ಕಾಲಿಡುತ್ತಿದ್ದೇವೆ ಎಂದು ಚರಿತ್ರಾರ್ಹವಾದ ಭಾಷಣದಲ್ಲಿ ಹೇಳಿದರು. ನಾವು ಪ್ರಜಾಪ್ರಭುತ್ವ ಒಪ್ಪಿಕೊಂಡಿದ್ದೇವೆ. ಇಂಥಾ ಸಮಾಜಕ್ಕೆ ಕಾಲಿಟ್ಟಾಗ ಆರ್ಥಿಕವಾಗಿ, ಸಾಮಾಜಿಕವಾಗಿ ಇನ್ನೂ ಅಸಮಾನತೆ ಉಳಿದುಕೊಂಡಿದೆ ಎಂದು ಸಿದ್ದರಾಮಯ್ಯ ಅವರು ತಿಳಿಸಿದ್ದಾರೆ.**

> **ಕಾಂಗ್ರೆಸ್ ಇರುವವರೆಗೂ, ನಾನು ಇರುವವರೆಗೂ ಸಾಮಾಜಿಕ ನ್ಯಾಯಕ್ಕೆ ನಾವು ಬದ್ಧರು. ನಿಮ್ಮಿಂದ ಸಾಮಾಜಿಕ ನ್ಯಾಯದ ಪಾಠ ಹೇಳಿಸಿಕೊಳ್ಳುವ ಅಗತ್ಯವಿಲ್ಲ. ನಾವು ಚಂದ್ರಶೇಖರ್ ಅವರು ಆತ್ಮಹತ್ಯೆ ಮಾಡಿಕೊಂಡ ಬಳಿಕ ಅವರ ಪತ್ನಿ ಕೊಟ್ಟ ದೂರಿನ ಆಧಾರದಲ್ಲಿ FIR ದಾಖಲಿಸಿ ತನಿಖೆ ಶುರು ಮಾಡಿದೆವು. ನಿಗಮದ ಜನರಲ್ ಮ್ಯಾನೇಜರ್ ರಾಜಶೇಖರ್ ಕೊಟ್ಟ ಆರು ಮಂದಿ ವಿರುದ್ಧ ನೀಡಿದ ದೂರಿನ ಆಧಾರದಲ್ಲೂ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದರು.**

# ಮೈತ್ರಿಯಲ್ಲಿ ಅಪಸ್ವರ: ಫ್ರೆಂಡ್ಲಿ ಫೈಟ್ ಸವಾಲು

## ರಾಜ್ಯ ನಾಯಕರು ಈ ಬಗ್ಗೆ ಮೌನ ವಹಿಸಿದ್ದು, ಸ್ಥಳೀಯ ಮುಖಂಡರು ಮತ್ತು ಕಾರ್ಯಕರ್ತರು ಬಹಿರಂಗವಾಗಿ ಪರಸ್ಪರ ಪೈಪೋಟಿ

• **ಉದಯವಾಹಿನಿ, ರಾಮನಗರ**

ಚನ್ನಪಟ್ಟಣ ಉಪ ಚುನಾವಣೆ ಅಖಾಡಕ್ಕೆ ಯಾರು ಇಳಿಯಬೇಕು ಎನ್ನುವ ಕುರಿತು ಬಿಜೆಪಿ-ಜೆಡಿಎಸ್ ಮೈತ್ರಿಕೂಟದಲ್ಲಿ ಅದಾಗಲೇ ಭಿನ್ನ ರಾಗ ಶುರುವಾಗಿದೆ. ಇಲ್ಲಿಯವರೆಗೂ ಎರಡೂ ಪಕ್ಷಗಳ ಒಳಗೆ ನಡೆಯುತ್ತಿದ್ದ ರಾಜಕೀಯ ಮೇಲಾಟ ಇದೀಗ ಬೀದಿಗೆ ಬಂದಿದೆ. ಎರಡೂ ಪಕ್ಷಗಳ ರಾಜ್ಯ ನಾಯಕರು ಈ ಬಗ್ಗೆ ಮೌನ ವಹಿಸಿದ್ದು, ಸ್ಥಳೀಯ ಮುಖಂಡರು ಮತ್ತು ಕಾರ್ಯಕರ್ತರು ಬಹಿರಂಗವಾಗಿ ಪರಸ್ಪರ ಪೈಪೋಟಿಗೆ ಇಳಿದಿದ್ದಾರೆ.

ಲೋಕಸಭಾ ಚುನಾವಣೆಯಲ್ಲಿ ಭಾರಿ ಒಗ್ಗಟ್ಟು ಪ್ರದರ್ಶಿಸಿದ್ದ ಎರಡೂ ಪಕ್ಷಗಳ ಸ್ಥಳೀಯ ಮುಖಂಡರು ಮತ್ತು ಕಾರ್ಯಕರ್ತರು ಚನ್ನಪಟ್ಟಣ ಉಪ ಚುನಾವಣೆ ಘೋಷಣೆಗೂ ಮೊದಲೇ 'ಮೈತ್ರಿ ಬದಿಗಿಟ್ಟು ಫ್ರೆಂಡ್ಲಿ ಫೈಟ್ ಮಾಡೋಣ' ಎಂದು ಪರಸ್ಪರ ತೊಡೆ ತಟ್ಟುತ್ತಿದ್ದಾರೆ. ಎಚ್.ಡಿ.ಕುಮಾರಸ್ವಾಮಿ ಪುತ್ರ ನಿಖಿಲ್ ಕುಮಾರಸ್ವಾಮಿ ಹೆಸರನ್ನು ಜೆಡಿಎಸ್ ಮುನ್ನೆಲೆಗೆ ತಂದಿದೆ. ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಒಬ್ಬರೇ ಚುನಾವಣೆ ಗೆಲ್ಲಬಲ್ಲ ಸಮರ್ಥ ಅಭ್ಯರ್ಥಿ' ಎಂದು ಅವರ ಬೆಂಬಲಿಗರು ವಾದ ಮಂಡಿಸುತ್ತಿದ್ದಾರೆ. ಯೋಗೇಶ್ವರ್ ಅವರ ವಿಧಾನ ಪರಿಷತ್ ಸದಸ್ಯತ್ವ ಅವಧಿ ಇನ್ನೂ ಒಂದೂವರೆ ವರ್ಷ ಬಾಕಿ ಇದೆ' ಎಂಬ ವಾದವನ್ನು ಮುಂದಿಟ್ಟುಕೊಂಡು ಜೆಡಿಎಸ್ ಅಡ್ಡಗಾಲು ಹಾಕುತ್ತಿದೆ. ಅಭ್ಯರ್ಥಿ ಅಂತಿಮವಾಗುವ ಮೊದಲೇ ಎರಡೂ ಪಕ್ಷಗಳ ಸ್ಥಳೀಯ ಮುಖಂಡರು ಮಾಧ್ಯಮಗಳ ಮುಂದೆ ಬಹಿರಂಗ ಹೇಳಿಕೆ ನೀಡತೊಡಗಿದ್ದಾರೆ. ಚನ್ನಪಟ್ಟಣದಲ್ಲಿ ರಾಜಕೀಯ ಅಸ್ತಿತ್ವ ಉಳಿಸಿಕೊಳ್ಳುವ ಪ್ರಶ್ನೆ ಎದುರಾದಾಗ ಗೆಳೆತನ ಮರೆತು ಹಗೆತನದ ಮಾತು ಕೇಳಿ ಬರುತ್ತಿವೆ. ಡಿ.ಕೆ. ಶಿವಕುಮಾರ್ ಅಬ್ಬರದ ಬೆನ್ನಲೇ ಮೈತ್ರಿಕೂಟದಲ್ಲೂ ಅಭ್ಯರ್ಥಿ ಚರ್ಚೆ ಬಿರುಸುಗೊಂಡಿದೆ. ಜೆಡಿಎಸ್‌ನಿಂದ ನಿಖಿಲ್ ಕುಮಾರಸ್ವಾಮಿ, ಸಂಸದ ಡಾ. ಸಿ.ಎನ್. ಮಂಜುನಾಥ್ ಅವರ ಪತ್ನಿ ಅನಸೂಯ, ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಜಯಮುತ್ತು ಹೆಸರು ಕೇಳಿ ಬರುತ್ತಿವೆ.

ಜೆಡಿಎಸ್‌ನಿಂದ ಮೂರು ಹೆಸರು ಮುನ್ನೆಲೆಗೆ ಬರುತ್ತಿದ್ದಂತೆ ದೆಹಲಿಗೆ ತೆರಳಿದ ಯೋಗೇಶ್ವರ್ ಬಿಜೆಪಿ ಮುಖಂಡರು ಮತ್ತು ಕುಮಾರಸ್ವಾಮಿ ಅವರನ್ನು ಕಂಡು ಚರ್ಚಿಸಿ ಬಂದಿದ್ದಾರೆ. ಅಲ್ಲಿಂದ ಮರಳಿದ ಬಳಿಕ ಮಾಧ್ಯಮದವರ ಮುಂದೆ ಬಂದ ಯೋಗೇಶ್ವರ್, 'ನಾನೇ ಕ್ಷೇತ್ರದ ಅಭ್ಯರ್ಥಿ. ಕುಮಾರ ಸ್ವಾಮಿ ಸಹಮತ ವ್ಯಕ್ತಪಡಿಸಿದ್ದು, ಚುನಾವಣೆಗೆ ಸಿದ್ಧರಾಗುವಂತೆ ಸೂಚಿಸಿದ್ದಾರೆ. ಎರಡ್ಮೂರು ದಿನದಲ್ಲಿ ಅವರೇ ಅಧಿಕೃತವಾಗಿ ಹೆಸರು ಘೋಷಿಸಲಿದ್ದಾರೆ' ಎಂದು ಹೇಳಿಬಿಟ್ಟರು. ಎಲ್ಲಿಯೂ ಅಪ್ಪಿತಪ್ಪಿಯೂ ಯೋಗೇಶ್ವರ್ ಹೆಸರು ಹೇಳದ ಕುಮಾರಸ್ವಾಮಿ, ಸ್ಥಳೀಯ ಮುಖಂಡರ ಅಭಿಪ್ರಾಯ ಸಂಗ್ರಹಿಸಿ ತೀರ್ಮಾನಿಸುವೆ ಎಂದು ಉಲ್ಟಾ ಹೊಡೆದಿದ್ದಾರೆ. ಅದಕ್ಕೆ ಕೆರಳಿದ ಸಿಪಿವೈಗೆ ಬೆಂಬಲಿಗರು, 'ಮೈತ್ರಿ ಬದಿಗಿಟ್ಟು ಫ್ರೆಂಡ್ಲಿ ಫೈಟ್ ಮಾಡೋಣ' ಎಂದು ಸವಾಲು ಹಾಕಿದ್ದಾರೆ.



> 'ಚನ್ನಪಟ್ಟಣದಿಂದ ಹೊಸ ರಾಜಕೀಯ ಅಧ್ಯಾಯ ಶುರು' ಎಂದು ಈಗಾಗಲೇ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಚುನಾವಣಾ ಅಖಾಡ ಪ್ರವೇಶಿಸಿದ್ದಾರೆ. ಸಾರ್ವಜನಿಕರ ಸಮಸ್ಯೆ ಆಲಿಸಲು ಮೂರು ದಿನ ಜನಸ್ಪಂದನ ಕಾರ್ಯಕ್ರಮ ಮಾಡಿದ್ದಾರೆ. ಮೇಲಿಂದ ಮೇಲೆ ಚನ್ನಪಟ್ಟಣಕ್ಕೆ ಭೇಟಿ ಕೊಡುತ್ತಿದ್ದಾರೆ. ಅದಾಗಲೇ ಚುನಾವಣಾ ವಾತಾವರಣ ಸೃಷ್ಟಿಸಿದ್ದಾರೆ.

> ಚನ್ನಪಟ್ಟಣವನ್ನು ಬಿಜೆಪಿಗೆ ಬಿಟ್ಟುಕೊಟ್ಟರೆ ಜಿಲ್ಲೆಯಲ್ಲಿ ತಮ್ಮ ಕುಟುಂಬದ ಹಿಡಿತ ಕೈ ತಪ್ಪಲಿದೆ ಎಂಬ ಆತಂಕ ಕುಮಾರಸ್ವಾಮಿ ಅವರನ್ನು ಕಾಡುತ್ತಿದೆ. ಪುತ್ರ ನಿಖಿಲ್ ಅವರಿಗೆ ರಾಜಕೀಯ ನೆಲೆ ಕಲ್ಪಿಸುವ ಚಿಂತೆಯೂ ಕಾಡುತ್ತಿದೆ. ಹಾಗಾಗಿ ನಿಖಿಲ್ ಅಥವಾ ಪತ್ನಿ ಅನಿತಾ ಅವರನ್ನು ಕಣಕ್ಕಿಳಿಸಿ ಚನ್ನಪಟ್ಟಣದ ಮೇಲೆ ಹಿಡಿತ ಉಳಿಸಿಕೊಳ್ಳುವ ಆಲೋಚನೆ ಅವರದ್ದು. ಜಿಲ್ಲೆಯ ನಾಲ್ಕು ಕ್ಷೇತ್ರಗಳ ಪೈಕಿ ಕನಕಪುರ ಕಾಂಗ್ರೆಸ್ ಹಿಡಿತದಲ್ಲಿದ್ದರೆ ಉಳಿದ ಮೂರು ಕ್ಷೇತ್ರ ಜೆಡಿಎಸ್ ವಶದಲ್ಲಿ ಇರುತ್ತಿದ್ದವು. 2023ರ ಚುನಾವಣೆಯಲ್ಲಿ ಅದು ತಲೆ ಕೆಳಗಾಗಿದೆ. ಜೆಡಿಎಸ್ ತೆಕ್ಕೆಯಲ್ಲಿರುವ ಜಿಲ್ಲೆಯ ಏಕೈಕ ಕ್ಷೇತ್ರವಾಗಿರುವ ಚನ್ನಪಟ್ಟಣವನ್ನು ಉಳಿಸಿಕೊಳ್ಳಬೇಕಾದ ಅನಿವಾರ್ಯತೆ ಅವರಿಗಿದೆ ಎನ್ನುತ್ತವೆ ಜೆಡಿಎಸ್ ಮೂಲಗಳು.

# ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ

• **ಉದಯವಾಹಿನಿ, ಕನಕಪುರ**

ಮನುಷ್ಯನನ್ನು ಹೊರತು ಪಡಿಸಿ ಈ ಭೂಮಿಯ ಮೇಲೆ ಇರುವ ಪಶು ಪಕ್ಷಿಗಳು, ಗಿಡಮರಗಳು ಜಲಚರಗಳಿಂದ ಪರಿಸರಕ್ಕೆ ಯಾವುದೇ ಹಾನಿ ಇಲ್ಲ, ಮನುಷ್ಯಮಾತ್ರ ಪರಿಸರಕ್ಕೆ ಹಾನಿಯನ್ನು ಉಂಟು ಮಾಡುತ್ತಿದ್ದಾನೆ ಎಂದು ನಗರಸಭಾ ಆಯುಕ್ತಕರಾದ ಎಂ.ಎಸ್. ಮಹದೇವ್ ಹೇಳಿದ್ದಾರೆ.

ಕನಕಪುರ ನಗರದ ಮಳಗಾಳು ಗ್ರಾಮದಲ್ಲಿ ಲಯನ್ಸ್ ಲಿಯೋ ಕ್ಲಬ್ ವತಿಯಿಂದ ಹಮ್ಮಿಕೊಂಡಿದ್ದ ಸಸಿನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಮನುಷ್ಯ ತನ್ನ ಅಗತ್ಯಕ್ಕೆ ಅತಿಯಾಗಿ ಪ್ಲಾಸ್ಟಿಕ್ ಬಳಕೆಯನ್ನು ಮಾಡುತ್ತಿದ್ದು ಇದರಿಂದ ಮರ ಗಿಡ ನಾಶವಾಗುವುದರ ಜೊತೆ ಪರಿಸರದ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತಿದೆ ಇದರಿಂದ ನಾವು ಅತಿ ಬೇಗ ಎಚ್ಚೆತ್ತುಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಭಾರಿ ಬೆಲೆಯನ್ನು ತೆರಬೇಕಾಗುತ್ತದೆ ಎಂದು ತಿಳಿಸಿದರು. ಜಿಲ್ಲಾ ಗಿಡನೆಡುವ ಕಾರ್ಯಕ್ರಮದ ಅಧ್ಯಕ್ಷ ಮರಸಪ್ಪ ರವಿ ಮಾತನಾಡಿ ನಮ್ಮ ಹಿರಿಯರು ನಮಗೆ ಒಳ್ಳೆಯ ಗಿಡಮರಗಳನ್ನು ಬೆಳೆಸಿ ಒಳ್ಳೆಯ ಪರಿಸರವನ್ನು ಬಿಟ್ಟುಹೋಗಿದ್ದಾರೆ ನಾವೂ ಕೂಡ ನಮ್ಮ ಮುಂದಿನ ಪೀಳಿಗೆಗೆ ಒಳ್ಳೆಯ ಪರಿಸರವನ್ನು ಬಿಟ್ಟುಹೋಗಬೇಕಾದರೆ ಗಿಡಗಳನ್ನು ನೆಟ್ಟು ಅವುಗಳನ್ನು ಬೆಳೆಸುವ ಮೂಲಕ, ಮರಗಳನ್ನು ಕಡಿಯವತ್ತ ಮನಸ್ಸು ಮಾಡದೆ ಒಳ್ಳೆಯ ನಾಡುಕಟ್ಟೋಣವೆಂದು ಕರೆನೀಡಿದರು. ನಮ್ಮೊಟ್ಟಿಗೆ ಈ ಭೂಮಿಯಲ್ಲಿ ಪಶುಪಕ್ಷಿಗಳೂ ಕೂಡ ಇದ್ದಾಗ ಮಾನವ ಸುಖಿಯಾಗಿ ಇರಲು ಸಾಧ್ಯ ಅವುಗಳಿಗೆ ಆಶ್ರವನ್ನು ನೀಡುವ ಮರಗಳನ್ನು ಬೆಳೆಸುವತ್ತ ಎಲ್ಲರ ಆಲೋಚನೆ ಇರಬೇಕಾಗಿದೆ ಇಂದು ನಾವು 200ಕ್ಕೂ ಹೆಚ್ಚು ಸೀಬೆ, ಸೀತಾಫಲ, ರಾಮಫಲಒಳಗೊಂಡ ವಿವಿಧ ಜಾತಿಯ ಹಣ್ಣಿನ ಗಿಡಗಳನ್ನು ನೆಡುವುದರ ಜೊತೆ ವಿತರಣೆಯನ್ನು ಕೂಡ ಮಾಡಲಾಗುತ್ತಿದೆ ಎಂದರು.



ಉದಯವಾಹಿನಿ ಚಿತ್ರ

# ಸಮಯಕ್ಕೆ ಬಾರದ ಡಿ.ಸಿ: ಸಭೆ ಬಹಿಷ್ಕರಿಸಿ ಪ್ರತಿಭಟನೆ

• **ಉದಯವಾಹಿನಿ, ಶಿರಾ**

ರೈತರೊಂದಿಗಿನ ಸಮಾಲೋಚನಾ ಸಭೆಗೆ ಎರಡು ತಾಸು ತಡವಾಗಿ ಬಂದ ಜಿಲ್ಲಾಧಿಕಾರಿ ಶುಭಾ ಕಲ್ಯಾಣ್ ಅವರ ನಡೆಯನ್ನು ಖಂಡಿಸಿ ಶಿರಾ ತಾಲ್ಲೂಕು, ತುಮಕೂರು ತಾಲ್ಲೂಕಿನ ರೈತರು ಪ್ರತಿಭಟನೆ ನಡೆಸಿದರು.

ವಸಂತನರಸಾಪುರ ಕೈಗಾರಿಕಾ ಪ್ರದೇಶದ 5 ಮತ್ತು 6ನೇ ಹಂತದ ಭೂ ಸ್ವಾಧೀನಕ್ಕೆ ಒಳಪಡುವ ಶಿರಾ ತಾಲ್ಲೂಕಿನ ಕಳ್ಳಂಬೆಳ್ಳ ಹುಂಜನಾಳು, ತುಮಕೂರು ತಾಲ್ಲೂಕಿನ ಬೆಳ್ಳಾವಿ ಹೋಬಳಿಯ ಮಲ್ಲೇನಹಳ್ಳಿ, ಚಿಕ್ಕಸೀಬಿ ಗ್ರಾಮಗಳ ರೈತರ ಸಮಾಲೋಚನೆ ಸಭೆ ಗುರುವಾರ ಬೆಳಿಗ್ಗೆ 11 ಗಂಟೆಗೆ ನಿಗದಿಯಾಗಿತ್ತು. ಆದರೆ ಜಿಲ್ಲಾಧಿಕಾರಿ ಮಾಧ್ಯಾಹ್ನ 1 ಗಂಟೆಗೆ ಬಂದಿದ್ದರಿಂದ ರೈತರು ಆಕ್ಷೇಪ ವ್ಯಕ್ತಪಡಿಸಿದರು. ಕೆಐಎಡಿಬಿ ಅಧಿಕಾರಿಗಳೇ ಪ್ರತಿಯೊಬ್ಬ ಖಾತೆದಾರ ರೈತನಿಗೂ ನೋಟಿಸ್ ಮೂಲಕ ಮಾಹಿತಿ ನೀಡಿ ಸಭೆ ನಿಗದಿ ಪಡಿಸಿದ್ದರು. ಬುಧವಾರ ರೈತರು ಒಂದೆಡೆ ಸೇರಿ ಪೂರ್ವಭಾವಿ ಸಭೆ ನಡೆಸಿ ಮುಂದಿನ ತೀರ್ಮಾನಗಳ ಬಗ್ಗೆ ಚರ್ಚಿಸಿ ಎಲ್ಲಾ ಸಿದ್ಧತೆ ಮಾಡಿಕೊಂಡಿದ್ದೆವು. ಆದರೆ ಜಿಲ್ಲಾ ಅಧಿಕಾರಿಗಳಿಗೆ ರೈತರ ಮೇಲೆ ಕಾಳಜಿಯಿಲ್ಲ ಎಂದು ದೂರಿದರು. 5 ಮತ್ತು 6ನೇ ಹಂತಕ್ಕೆ ಭೂ ಸ್ವಾಧೀನಗೊಳ್ಳುವ ರೈತರೊಂದಿಗೆ ಸಮಾಲೋಚನಾ ಸಭೆ ನಡೆಯಬೇಕಿತ್ತು. ಆದರೆ ರೈತರು ಪ್ರತಿಭಟಿಸಿ ಸಭೆ ಬಹಿಷ್ಕರಿಸಿದ್ದರಿಂದ ಜಿಲ್ಲಾಧಿಕಾರಿ ಸೇರಿದಂತೆ ಅಧಿಕಾರಿಗಳು ಹಿಂತಿರುಗಿದರು. 'ಸರ್ಕಾರ ನಿಗದಿ ಪಡಿಸುವ ದರಕ್ಕೆ ಭೂಮಿ ನೀಡಲು ಸಾಧ್ಯವಿಲ್ಲ. ಮಾರುಕಟ್ಟೆ ದರಕ್ಕೆ ಅನುಗುಣವಾಗಿ ಭೂ ಪರಿಹಾರ ನೀಡಬೇಕು. ಪರ್ಯಾಯ ಭೂಮಿ ನೀಡಬೇಕು' ಎನ್ನುವುದು ರೈತರ ವಾದ. 'ಈಗಾಗಲೇ 1 ಕೋಟಿಯಿಂದ 1.50 ಕೋಟಿವರೆಗೆ ಈ ಭಾಗದ ಭೂಮಿಗೆ ಬೆಲೆಯಿದೆ. ಆದರೆ ಸರ್ಕಾರ 20 ಲಕ್ಷ ಪರಿಹಾರ ನೀಡಿ ರೈತರಿಗೆ ಅನ್ಯಾಯ ಮಾಡಲು ಹೊರಟಿದೆ. ಶಿರಾ ತಾಲ್ಲೂಕು ಶಾಶ್ವತ ಬರಪೀಡಿತ ತಾಲ್ಲೂಕು ಎಂದು ನೆಪ ಹೇಳುವುದು ಸರಿಯಲ್ಲ. ತಾಲ್ಲೂಕಿನ ಮಲ್ಲೇನಹಳ್ಳಿ ಗ್ರಾಮವನ್ನು ಗಡಿ ಗ್ರಾಮ ಅರಣ್ಯಕ್ಕೆ ಸಮೀಪವಿದೆ ಹೆಚ್ಚಿನ ಪರಿಹಾರ ನೀಡಲು ಅವಕಾಶವಿಲ್ಲ ಎಂದು ಸಾಬೂಬು ನೀಡುವುದನ್ನು ಸರ್ಕಾರ, ಜಿಲ್ಲಾಡಳಿತ ಮೊದಲು ನಿಲ್ಲಿಸಲಿ' ಎಂದು ರೈತರು ಕಿಡಿಕಾರಿದರು. ಸಭೆ 11 ಗಂಟೆಗೆ ನಿಗದಿಯಾಗಿದ್ದರೂ ಯಾವ ಅಧಿಕಾರಿಗಳು ಹಾಜರಿರಲಿಲ್ಲ. ಜಿಲ್ಲಾಧಿಕಾರಿಯೊಂದಿಗೆ ತುಮಕೂರು ಮಧುಗಿರಿ ಉಪವಿಭಾಗಾಧಿಕಾರಿ ಸೇರಿದಂತೆ ವಿವಿಧ ಅಧಿಕಾರಿಗಳು ಬಂದರು. ಇದಕ್ಕೂ ಮುನ್ನ ಈ ಅಧಿಕಾರಿಗಳು ಎಲ್ಲಿಗೆ ಹೋಗಿದ್ದರು ಎಂದು ರೈತರು ಪ್ರಶ್ನಿಸಿದರು. ರೈತರಾದ ಪರಮೇಶ್ವರಯ್ಯ, ನಾಗರಾಜು, ಕಾಮರಾಜು, ಮುದಿಮಡು ರಂಗಶಾಮಯ್ಯ, ವೀರಾಚಾರ್, ಶಂಕರ್, ಉಮೇಶ್, ರಮೇಶ್ ಗೌಡ, ನಾಟರಾಜು ಸೇರಿದಂತೆ ನೂರಾರು ರೈತರು ಹಾಜರಿದ್ದರು.

# ದುಶ್ಚಟಗಳಿಗೆ ಬಲಿಯಾಗದೆ ಸಮಾಜದಲ್ಲಿ ಉತ್ತಮವಾದ ಸ್ವಾವಲಂಬಿ ಜೀವನ ರೂಪಿಸಿಕೊಳ್ಳಿ

• **ಉದಯವಾಹಿನಿ, ಶಿಡ್ಲಘಟ್ಟ**

ತಂದೆ-ತಾಯಿಯನ್ನ ರಕ್ಷಣೆ ಮಾಡುವುದು ಮಕ್ಕಳ ಧರ್ಮ, ಪ್ರಜೆಗಳ ರಕ್ಷಣೆ ಮಾಡುವುದು ರಾಜನ ಧರ್ಮ, ಭಕ್ತರ ರಕ್ಷಣೆ ಮಾಡುವುದು ಗುರುಗಳ ಧರ್ಮ, ಆದರೆ ಬಡವರ, ದೀನ ದಲಿತರ ಹಾಗೂ ಇಂತಹ ಕುಡುಕರನ್ನು ಸರಿದಾರಿಗೆ ತರುವ ಕೆಲಸ ಮಾಡುವುದಿದ್ದರೆ ಅದು ಶ್ರೀ ಕ್ಷೇತ್ರ ಧರ್ಮಸ್ಥಳ ಸಂಘದಿಂದ ಮಾತ್ರ ಸಾಧ್ಯ ಎಂದು ಬಸವ ಕಲ್ಯಾಣ ಮಠದ ಶ್ರೀ ಮಹದೇವ ಸ್ವಾಮಿ ಹೇಳಿದರು.

ನಗರದ ಹೊರಹೊಲಯದ ಹಂಡಿಗನಾಳದ ಶ್ರೀ ಕೆಂಪಣ್ಣ ವೀರಣ್ಣ ಭವನದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಶಿಡ್ಲಘಟ್ಟ ಹಾಗೂ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಟ್ರಸ್ಟ್ ಚಿಕ್ಕಬಳ್ಳಾಪುರ ವತಿಯಿಂದ ಆಯೋಜಿಸಿದ್ದ 1819ನೇ ಮದ್ಯವರ್ಜನ ಶಿಬಿರದ ಸಮಾರೋಪ ಸಮಾರಂಭದಲ್ಲಿ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಅಂಧಕಾರದಲ್ಲಿದ್ದ ಬಾಳಿಗೆ ಹೊಸ ಬೆಳಕು ನೀಡಿ ಇಡೀ ಕುಟುಂಬವನ್ನು ಬೆಳಗಿಸಿದ ಈ ಮದ್ಯವರ್ಜನ ಶಿಬಿರವು ಸಮಾಜಕ್ಕೆ ಮಾದರಿ ಮತ್ತು ಆದರ್ಶಪ್ರಾಯವಾಗಿದೆ ಎಂದು ಅವರು ಆಶೀರ್ವಚನ ನೀಡಿದರು.

ಏಳು ದಿನಗಳ ಕಾಲ ಹಮ್ಮಿಕೊಂಡಿದ್ದ ಮದ್ಯವರ್ಜನ ಶಿಬಿರದಲ್ಲಿ ಒಟ್ಟು 50 ವ್ಯಸನಿಗಳು ಪಾಲ್ಗೊಂಡಿದ್ದರು. ಶಿಬಿರದಲ್ಲಿ ಶಿಬಿರಾರ್ಥಿಗಳಿಂದ ನಡೆಸಿದ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದ ಶಿಬಿರಾರ್ಥಿಗಳಿಗೆ ಬಹುಮಾನ ವಿತರಣೆ ನಡೆಯಿತು. ಶಿಬಿರವನ್ನು ಯಶಸ್ವಿಯಾಗಿ ನಿರ್ವಹಿಸಲು ಕಾರಣೀಕರ್ತರಾದ ದಾನಿಗಳಿಗೆ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ನಿವೃತ್ತ ಐಪಿಎಸ್ ಅಧಿಕಾರಿ ನಾಗರಾಜ್, ಪ್ರಾದೇಶಿಕ ನಿರ್ದೇಶಕ ಶೀನಪ್ಪ ಎಂ, ಒಕ್ಕಲಿಗರ ಸಂಘದ ಅಧ್ಯಕ್ಷ ಬಿ.ನಾರಾಯಣಸ್ವಾಮಿ, ಜಿಲ್ಲಾ ನಿರ್ದೇಶಕ ಪ್ರಶಾಂತ್ ಸಿ.ಎಸ್, ಯೋಜನಾಧಿಕಾರಿ ಸುರೇಶ್ ಗೌಡ ಎಸ್, ಮೇಲ್ವಿಚಾರಕ ಮಂಜುನಾಥ್, ಪಿ.ವಿಜಯೇಂದ್ರ, ತ್ಯಾಗರಾಜ್, ವೆಂಕಟಸ್ವಾಮಿ, ಹಿತ್ತಲಹಳ್ಳಿ ಸುರೇಶ್, ಜೆ.ವಿ ಸುರೇಶ್, ಎಸ್.ಬಿ ನಾಗರಾಜ್, ಮತ್ತಿತರರು ಇದ್ದರು.

ಉದಯವಾಹಿನಿ ಚಿತ್ರ



> ಕುಡಿತದಿಂದ ನಿಮ್ಮ ಜೀವನವನ್ನು ಹಾಳು ಮಾಡಿಕೊಳ್ಳಬೇಡಿ. ಇದರಿಂದ ನಿಮ್ಮ ಆರೋಗ್ಯ, ದುಡ್ಡು, ಸಮಾಜ ಹಾಗೂ ನಿಮ್ಮ ಕುಟುಂಬವೇ ಹಾಳಾಗಿ ನೀವು ಬೀದಿಗೆ ಬರುತ್ತೀರಿ. ಈ ಕುಡಿತದಿಂದ ಮುಕ್ತರಾಗಿ ಸುಖ ಜೀವನ ನಡೆಸಿ, ದುಶ್ಚಟಗಳಿಗೆ ಬಲಿಯಾಗದೆ ಸಮಾಜದಲ್ಲಿ ಉತ್ತಮವಾದ ಸ್ವಾವಲಂಬಿ ಜೀವನ ರೂಪಿಸಿಕೊಂಡು ಸಮಾಜದಲ್ಲಿ ಬದುಕುವುದನ್ನ ಕಲಿಯಿರಿ ಎಂದು ಸಲಹೆ ನೀಡಿದರು.
>
> ಎಲುವಳ್ಳಿ ರಮೇಶ್

> ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಕೆ.ಎನ್ ಸುಬ್ಬಾರೆಡ್ಡಿ ಮಾತನಾಡಿ, ಡಾ। ಡಿ. ವಿರೇಂದ್ರ ಹೆಗ್ಗಡೆ, ಅನೇಕ ಸಮಾಜಮುಖಿ ಕೆಲಸ ಕಾರ್ಯಗಳಂತೆ ಮಾರ್ಗದರ್ಶನದ ಮದ್ಯವರ್ಜನ ಶಿಬಿರವು ಅನೇಕ ಜನರ ಜೀವನವನ್ನು ಉತ್ತಮ ಕೌಶಲ್ಯಯುತ ಜೀವನವನ್ನಾಗಿ ರೂಪಿಸಿದೆ. ಅವರ ಉತ್ತಮ ಕಾರ್ಯಗಳಿಂದ ಜನಜೀವನ ಸ್ವರ್ಗ ಸದೃಶವಾಗಿದೆ. ಮದ್ಯ ಮುಕ್ತರಿಗೆ ಸಮಾಜದಲ್ಲಿ ಒಂದು ಗೌರವವಿದೆ. ದುಶ್ಚಟಗಳಿಂದ ದೂರವಾದಾಗ ಮಾತ್ರ ಕುಟುಂಬ, ಸಮಾಜದಲ್ಲಿ ನೆಮ್ಮದಿ ಇರಲು ಸಾಧ್ಯ ಎಂದು ಹೇಳಿದರು.

# ಚುರುಕುಗೊಂಡ ಮುಂಗಾರು ಬಿತ್ತನೆ

• **ಉದಯವಾಹಿನಿ, ರಾಮನಗರ**

ಜಿಲ್ಲೆಯಲ್ಲಿ ಆಗಾಗ ಸಾಧಾರಣ ಮಳೆ ಸುರಿಯುತ್ತಿರುವ ಬೆನ್ನಲ್ಲೇ, ಮುಂಗಾರು ಬೆಳೆಗಳ ಬಿತ್ತನೆ ಚಟುವಟಿಕೆಯೂ ಚುರುಕು ಗೊಂಡಿದೆ. ಜಿಲ್ಲೆಯ ಬಿತ್ತನೆ ಗುರಿ 91,108 ಹೆಕ್ಟೇರ್ ಪ್ರದೇಶದ ಇದುವರೆಗೆ ಪೈಕಿ 5,906 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಕಾರ್ಯ ನಡೆದಿದೆ. ಪ್ರಮುಖ ಬೆಳೆಯಾದ ರಾಗಿಯನ್ನು 4,200 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತಲಾಗಿದೆ. ಉಳಿದಂತೆ ಎಳ್ಳು 900 ಹೆಕ್ಟೇರ್, ಅಲಸಂದೆ 364 ಹೆಕ್ಟೇರ್, ತೊಗರಿ 162 ಹೆಕ್ಟೇರ್ ಹಾಗೂ ಅವರೆಯನ್ನು 280 ಹೆಕ್ಟೇರ್‌ನಲ್ಲಿ ಬಿತ್ತನೆ ಮಾಡಲಾಗಿದೆ. ರಾಗಿ ಬಿತ್ತನೆ ಜುಲೈನಿಂದ ಶುರುವಾಗಿ, ಆಗಸ್ಟ್‌ವರೆಗೆ ನಡೆಯಲಿದೆ. ಸದ್ಯ ರೈತರು ಬಿತ್ತನೆಗೆ ಸಂಬಂಧಿಸಿದ ಚಟುವಟಿಕೆಗಳ ತಯಾರಿ ನಡೆಸುತ್ತಿದ್ದಾರೆ.

'ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ಬಿತ್ತನೆಯಾಗಿರುವ ಎಳ್ಳು ಬೆಳೆಯ ಹೂ ಮತ್ತು ಕಾಯಿ ಬಲಿಯುವ ಹಂತದಲ್ಲಿದೆ. ಅಲಸಂದೆ ಮತ್ತು ಅವರೆ ಹೂ ಕಾಯಿ ಬಿಡುವ ಹಂತದಲ್ಲಿದೆ. ತೊಗರಿ ಬೆಳೆಯು ಬೆಳವಣಿಗೆ ಹಂತದಲ್ಲಿದೆ. ರಾಗಿ ಬಿತ್ತನೆಗಾಗಿ ರೈತರು ಭೂಮಿ ಹದಗೊಳಿಸುತ್ತಿದ್ದಾರೆ' ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕಿ ಅಂಬಿಕಾ ತಿಳಿಸಿದರು. 'ಸಹಾಯಧನದಡಿ ಬಿತ್ತನೆ ಬೀಜ ವಿತರಣೆಯು ಚುರುಕುಗೊಂಡಿದೆ. ಜಿಲ್ಲೆಯಲ್ಲಿ ವಿವಿಧ ಬೆಳೆಗಳ ಒಟ್ಟು 2.30 ಟನ್ ಬಿತ್ತನೆ ಬೀಜ ವಿತರಣೆಯ ಗುರಿ ನಿಗದಿಪಡಿಸಲಾಗಿದೆ. ಸದ್ಯ ತೊಗರಿ, ಅಲಸಂದೆ, ರಾಗಿ, ಭತ್ತ, ಮುಸುಕಿನ ಜೋಳ ಹಾಗೂ ನೆಲಗಡಲೆ ಬೆಳೆಗಳ 1.35 ಟನ್ ಬಿತ್ತನೆ ಬೀಜವನ್ನು ರೈತ ಸಂಪರ್ಕ ಕೇಂದ್ರಗಳಲ್ಲಿ ದಾಸ್ತಾನು ಮಾಡಲಾಗಿದೆ' ಎಂದು ಹೇಳಿದರು. 'ಸಂಗ್ರಹವಿರುವ ಬಿತ್ತನೆ ಬೀಜದ ಪೈಕಿ, ಇದುವರೆಗೂ 869 ಕ್ವಿಂಟಲ್ ವಿತರಿಸಿದ್ದು, 489 ಕ್ವಿಂಟಲ್ ದಾಸ್ತಾನು ಸಂಗ್ರಹವಿದೆ. ಬೆಳೆ ಬಿತ್ತನೆ ಸಂದರ್ಭಕ್ಕೆ ಹಾಗೂ ಬೇಡಿಕೆಗೆ ಅನುಗುಣವಾಗಿ ಮುಂದಿನ ದಿನಗಳಲ್ಲಿ ಅಗತ್ಯ ಬೀಜಗಳನ್ನು ದಾಸ್ತಾನು ಮಾಡಿಕೊಳ್ಳಲಾಗುವುದು. ಇದರ ಜೊತೆಗೆ ರಸಗೊಬ್ಬರ ವಿತರಣೆಗೂ ಕ್ರಮ ಕೈಗೊಳ್ಳಲಾಗಿದೆ' ಎಂದರು. 'ಜಿಲ್ಲೆಯಲ್ಲಿ 28,047 ಮೆಟ್ರಿಕ್ ಟನ್ ರಸಗೊಬ್ಬರ ವಿತರಣೆ ಗುರಿ ಇದೆ. ಸದ್ಯ ಮೂಲ ದಾಸ್ತಾನು ಸೇರಿ 16,135 ಮೆ.ಟನ್ ಗಳಷ್ಟು ಸರಬರಾಜು ಆಗಿದ್ದು, ರೈತರಿಗೆ 8,195 ಮೆ.ಟನ್ ವಿತರಣೆ ಮಾಡಲಾಗಿದೆ. ಸದ್ಯ 7,939 ಮೆ.ಟನ್‌ಗಳಷ್ಟು ದಾಸ್ತಾನು ಸಂಗ್ರಹವಿದೆ. ಸದ್ಯ ರಸಗೊಬ್ಬರದ ಕೊರತೆಯಿರುವುದಿಲ್ಲ' ಎಂದು ಮಾಹಿತಿ ನೀಡಿದರು.

ಉದಯವಾಹಿನಿ ಚಿತ್ರ



# ಕಾಡು ಪ್ರಾಣಿಗಳ ದಾಳಿಗೆ 43 ರಾಸು ಬಲಿ

• **ಉದಯವಾಹಿನಿ, ಚಿಕ್ಕಬಳ್ಳಾಪುರ**

ಬಯಲು ಸೀಮೆಯ ಚಿಕ್ಕಬಳ್ಳಾಪುರ ಜಿಲ್ಲೆಯ ಅಲ್ಲಲ್ಲಿ ಕಾಡು ಪ್ರಾಣಿಗಳ ಹಾವಳಿ ಹೆಚ್ಚುತ್ತಿದೆ. ವಿಶೇಷವಾಗಿ ಚಿರತೆ ದಾಳಿ ಪ್ರಕರಣಗಳು ವರದಿ ಆಗುತ್ತಿದೆ. ರಾಸುಗಳ ಮೇಲೆ, ಕೋಳಿ ಶೆಡ್‌ಗಳ ಮೇಲೆ ಚಿರತೆ ದಾಳಿ ನಡೆಸಿದ ಪ್ರಕರಣಗಳು ಇತ್ತೀಚೆಗೆ ವರದಿ ಆಗಿವೆ. ಹೀಗೆ ಜಿಲ್ಲೆಯಲ್ಲಿ 2023-24ನೇ ಸಾಲಿನಲ್ಲಿ ಮಾನವ ಮತ್ತು ವನ್ಯಜೀವಿ ಸಂಘರ್ಷದ 166 ಪ್ರಕರಣಗಳು ಜಿಲ್ಲೆಯಲ್ಲಿ ವರದಿಯಾಗಿವೆ. ದಾಳಿಯಿಂದ ಬೆಳೆ ಮತ್ತು ಜಾನುವಾರುಗಳನ್ನು ಕಳೆದು ಕೊಂಡ ರೈತರಿಗೆ ಅರಣ್ಯ ಇಲಾಖೆ 17.42 ಲಕ್ಷ ಪರಿಹಾರ ನೀಡಿದೆ. ಕಳೆದ ವರ್ಷದಲ್ಲಿ ಜಿಲ್ಲೆಯಲ್ಲಿ 43 ರಾಸುಗಳ ಕಾಡುಪ್ರಾಣಿಗಳ ದಾಳಿಗೆ ಬಲಿಯಾಗಿವೆ. ಮಾನವ, ವನ್ಯಜೀವಿ ಸಂಘರ್ಷದ ಪರಿಣಾಮ 123 ಬೆಳೆಹಾನಿ ಪ್ರಕರಣಗಳು ವರದಿಯಾಗಿವೆ. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 55 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಅರಣ್ಯವಿದೆ. ಕುರುಚಲು ಕಾಡು ಪ್ರಧಾನವಾಗಿರುವ ಜಿಲ್ಲೆಯಲ್ಲಿ ಚಿರತೆ, ಕರಡಿ, ನವಿಲು, ಜಿಂಕೆ, ಕಾಡು ಹಂದಿ ಸೇರಿದಂತೆ ಹಲವು ಪ್ರಾಣಿಗಳಿವೆ.

ಇತ್ತೀಚಿನ ದಿನಗಳಲ್ಲಿ ಚಿರತೆ ದಾಳಿ ಪ್ರಕರಣಗಳು ಹೆಚ್ಚು ವರದಿಯಾಗುತ್ತಿವೆ. ಚಿಕ್ಕಬಳ್ಳಾಪುರ ತಾಲ್ಲೂಕಿನ ನಂದಿ ಗ್ರಾಮದ ಬಳಿ ಇತ್ತೀಚೆಗೆ ಚಿರತೆ ದಾಳಿ ನಡೆಸಿ ಕೋಳಿಗಳನ್ನು ಕೊಂದಿತು. ಮಂಡಿಕಲ್ಲು ಭಾಗದಲ್ಲಿ ಆಗಾಗ್ಗೆ ರಾಸುಗಳ ಮೇಲೆ ದಾಳಿ ನಡೆಯುತ್ತಿರುತ್ತವೆ. ಗೌರಿಬಿದನೂರು, ಚಿಂತಾಮಣಿ ತಾಲ್ಲೂಕಿನಲ್ಲಿಯೂ ಜಾನುವಾರುಗಳು, ಕುರಿ ಮೇಕೆಗಳ ಮೇಲೆ ವನ್ಯಜೀವಿ ದಾಳಿ ನಡೆಯುತ್ತಿವೆ.

ಹೀಗೆ 2023-24ನೇ ಸಾಲಿನಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕಾಡು ಪ್ರಾಣಿಗಳ ದಾಳಿಯಿಂದ 43 ರಾಸುಗಳ ಹಸುನೀಗಿವೆ. ಗೌರಿಬಿದನೂರು ತಾಲ್ಲೂಕಿನಲ್ಲಿಯೇ ಗರಿಷ್ಠ ಪ್ರಕರಣಗಳು ದಾಖಲಾಗಿವೆ. ಅರಣ್ಯ ಇಲಾಖೆಯು ಮೃತಪಟ್ಟ ರಾಸುಗಳಿಗೆ ಪರಿಹಾರ ನೀಡುತ್ತದೆ. ಜಿಲ್ಲೆಯಲ್ಲಿ 2023-24ನೇ ಸಾಲಿನಲ್ಲಿ ವನ್ಯಜೀವಿಗಳ ದಾಳಿಯಿಂದ ಮೃತಪಟ್ಟ ರಾಸುಗಳಿಗೆ ಪರಿಹಾರ ರೂಪವಾಗಿ 4.91 ಲಕ್ಷ ನೀಡಿದೆ. ಈ ಹಿಂದೆ ಕಾಡಂಚಿನ ಗ್ರಾಮಗಳ ಜನ ಜಾನುವಾರುಗಳ ಮೇಲೆ ವನ್ಯಜೀವಿಗಳು ದಾಳಿ ನಡೆಸುತ್ತಿದ್ದವು. ಆದರೆ ಈಗ ಎಲ್ಲಾ ಕಡೆಗಳಲ್ಲಿಯೂ ದಾಳಿಗಳು ನಡೆಯುತ್ತಿವೆ.

# ಬೀಳುವ ಸ್ಥಿತಿಯಲ್ಲಿ ಪಾಲಿಟೆಕ್ನಿಕ್ ಕಾಲೇಜು ಕಟ್ಟಡ

## 7 ದಶಕ ಪೂರ್ಣಗೊಳಿಸಿದ ಕಾಲೇಜಿಗೆ ಅಗತ್ಯ ಕಟ್ಟಡವೇ ಇಲ್ಲ, ಹಲವು ಕೊಠಡಿಗಳಲ್ಲಿ ಸೋರುತ್ತಿದ್ದು, ಕಲಿಕೆಗೆ ಅಡ್ಡಿ

• **ಉದಯವಾಹಿನಿ, ತುಮಕೂರು**

ಮಳೆ ಬಂದರೆ ತೊಟ್ಟಿಕ್ಕುವ ಕೊಠಡಿ, ಶಿಥಿಲಾವಸ್ಥೆಗೆ ತಲುಪಿದ ಕಟ್ಟಡ, ಮುರಿದು ಬಿದ್ದ ಬೆಂಚ್, ಕಿಟಕಿಗಳು, ಪಾಠಕ್ಕಾಗಿ ವಿದ್ಯಾರ್ಥಿಗಳ ಅಲೆದಾಟ...ಇದು ನಗರದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಅವ್ಯವಸ್ಥೆ. 1958ರಲ್ಲಿ ಆರಂಭವಾದ ಕಾಲೇಜಿನಲ್ಲಿ ಇದುವರೆಗೆ ಸಾವಿರಾರು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡಿದ್ದಾರೆ.

ಇಲ್ಲಿ ಕಲಿತು ಉತ್ತಮ ಬದುಕು ಕಟ್ಟಿಕೊಂಡಿದ್ದಾರೆ. ಆದರೆ ಇಂದಿನ ಪೀಳಿಗೆಗೆ ಕಾಲೇಜಿನಲ್ಲಿ ಅಗತ್ಯ ಸೌಲಭ್ಯಗಳೇ ಸಿಗುತ್ತಿಲ್ಲ. ಹಲವಾರು ಸಮಸ್ಯೆಗಳ ಮಧ್ಯೆ ಶಿಕ್ಷಣ ಮುಂದುವರಿಸಿದ್ದಾರೆ. 7 ದಶಕ ಪೂರ್ಣ ಗೊಳಿಸಿದ ಕಾಲೇಜಿಗೆ ಅಗತ್ಯ ಕಟ್ಟಡವೇ ಇಲ್ಲ. ಬಿರುಕು ಬಿಟ್ಟ ಮೇಲ್ಛಾವಣಿ, ನೀರು ಹರಿದು ಪಾಚಿ ಕಟ್ಟಿದ ಗೋಡೆಗಳು ಕಟ್ಟಡದ ಗುಣಮಟ್ಟಕ್ಕೆ ಕನ್ನಡಿ ಹಿಡಿದಿದೆ. ವಿದ್ಯಾರ್ಥಿಗಳು ಭಯದಲ್ಲಿಯೇ ತರಗತಿಗಳಲ್ಲಿ ಕೂರುತ್ತಿದ್ದಾರೆ. ಪ್ರತಿ ವರ್ಷ 360 ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯುತ್ತಾರೆ. ಪ್ರಥಮ, ದ್ವಿತೀಯ ಮತ್ತು ಅಂತಿಮ ವರ್ಷ ಸೇರಿ ಪ್ರತಿ ದಿನ 1 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಾಲೇಜಿಗೆ ಬರುತ್ತಾರೆ. ಇಷ್ಟು ಜನರಿಗೆ ಬೇಕಾದ ಕೊಠಡಿಗಳು ಲಭ್ಯವಿಲ್ಲ. ಇರುವ ಕೊಠಡಿಗಳಲ್ಲಿ ಹಲವು ಸೋರುತ್ತಿದ್ದು, ಕಲಿಕೆಗೆ ಅಡ್ಡಿಯಾಗಿದೆ.

ಸಿವಿಲ್ ಎಂಜಿನಿಯರಿಂಗ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್, ಮೆಕಾನಿಕಲ್ ಎಂಜಿನಿಯರಿಂಗ್, ಆಟೊಮೊಬೈಲ್ ಎಂಜಿನಿಯರಿಂಗ್, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಷನ್ ಎಂಜಿನಿಯರಿಂಗ್, ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್ ಒಳಗೊಂಡಂತೆ ಆರು ಕೋರ್ಸ್‌ಗಳಿವೆ. ಪ್ರಥಮ ವರ್ಷದಲ್ಲಿ ಪ್ರತಿ ವಿಭಾಗಕ್ಕೆ 60 ಜನರನ್ನು ದಾಖಲು ಮಾಡಿಕೊಳ್ಳಲಾಗುತ್ತಿದೆ.

ಈ ಎಲ್ಲಾ ವಿಭಾಗಗಳಿಗೆ ಕಡ್ಡಾಯವಾಗಿ ಪ್ರಯೋಗಾಲಯದ ಸೌಲಭ್ಯ ಕಲ್ಪಿಸಬೇಕು. ಆದರೆ, ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಲ್ಯಾಬ್ ಇಲ್ಲ. ಪಾಲಿಟೆಕ್ನಿಕ್ ವಿದ್ಯಾರ್ಥಿಗಳಿಗೆ ಪ್ರಯೋಗಾಲಯ ಅತ್ಯಂತ ಅಗತ್ಯ. ತರಗತಿಗಿಂತ ಹೆಚ್ಚಾಗಿ ಪ್ರಯೋಗಾಲಯದಲ್ಲಿ ಕಲಿಯುವುದು ಹೆಚ್ಚಿರುತ್ತದೆ. ಲ್ಯಾಬ್ ಸೌಲಭ್ಯ ಕಲ್ಪಿಸುವಲ್ಲಿ ಕಾಲೇಜಿನ ಆಡಳಿತ ಮಂಡಳಿ ಹಿಂದೆ ಬಿದ್ದಿದೆ ಎಂಬ ಆರೋಪ ಸಾಮಾನ್ಯವಾಗಿದೆ. 'ಕಂಪ್ಯೂಟರ್ ಇದ್ದರೂ ಎಲ್ಲವನ್ನೂ ಬಳಸಲು ಸಾಧ್ಯವಾಗುತ್ತಿಲ್ಲ. ಕೇವಲ ನೋಡಲಷ್ಟೇ ಇವೆ. ಬೆರಳೆಣಿಕೆಯಷ್ಟು ಮಾತ್ರ ಬಳಸಲು ಯೋಗ್ಯವಾಗಿವೆ. ಹಲವು ಕಂಪ್ಯೂಟರ್‌ಗೆ ವಿದ್ಯುತ್ ಸಂಪರ್ಕ ಕಲ್ಪಿಸಿಲ್ಲ. ಇದರಿಂದ ಲ್ಯಾಬ್ ಉಪಯೋಗಿಸುವುದು ಕಷ್ಟವಾಗುತ್ತಿದೆ' ಎಂದು ಕಾಲೇಜಿನ ವಿದ್ಯಾರ್ಥಿಗಳು ದೂರುತ್ತಿದ್ದಾರೆ.

ಕಾಲೇಜಿನ ಆವರಣದಲ್ಲಿರುವ ಬ್ಯಾಸ್ಕೆಟ್‌ಬಾಲ್ ಅಂಕಣ ಕೆರೆಯಂತಾಗಿದೆ. ಮಳೆ ಬಂದರೆ ನೀರು ನಿಲ್ಲುತ್ತಿದ್ದು, ಅಂಕಣದ ಬಳಕೆಯೂ ಸಾಧ್ಯವಾಗುತ್ತಿಲ್ಲ. ಹಾಳಾಗಿ ಹಲವು ವರ್ಷ ಕಳೆದರೂ ಸರಿಪಡಿಸುವ ಕೆಲಸವಾಗಿಲ್ಲ. ಆವರಣದಲ್ಲಿ ಸ್ವಚ್ಛತೆಯೂ ಮರೀಚಿಕೆಯಾಗಿದೆ. ಎಲ್ಲೆಂದರಲ್ಲಿ ಕಸ, ತ್ಯಾಜ್ಯವೇ ತುಂಬಿಕೊಂಡಿದೆ.

'ನಗರದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿಗೆ 'ಪ್ರತಿಷ್ಠಿತ' ಎಂಬ ಬಿರುದು ಇತ್ತು. ಆದರೆ ನಂತರದ ದಿನಗಳಲ್ಲಿ ಅಂತಹ 'ಪ್ರತಿಷ್ಠೆ' ಕಾಣುತ್ತಿಲ್ಲ. ಒಂದು ಕಡೆ ಕಟ್ಟಡದ ಸಮಸ್ಯೆಯಾದರೆ ಮತ್ತೊಂದೆಡೆ ಬೋಧನೆಯ ಗುಣಮಟ್ಟವೂ ಸುಧಾರಿಸುತ್ತಿಲ್ಲ. ತಾಂತ್ರಿಕ ಕಾಲೇಜಿನಲ್ಲಿ ಬೋಧಿಸಬೇಕಾದವರು ಕಾಲಕ್ಕೆ ತಕ್ಕಕ್ಕೆ ಅಪ್‌ಡೇಟ್ ಆಗುತ್ತಿಲ್ಲ. ಈಗಿನ ಕಾಲದ ವಿದ್ಯಾರ್ಥಿಗಳಿಗೆ ಏನು ಬೇಕು ಉದ್ಯೋಗ ಪಡೆದುಕೊಳ್ಳಲು ಎಂತಹ ತಾಂತ್ರಿಕ ನೈಪುಣ್ಯತೆ ಕಲಿಸಬೇಕು ಎಂಬ ಬಗ್ಗೆ ಚಿಂತಿಸುವುದಿಲ್ಲ. ಪಠ್ಯದಷ್ಟು ಬೋಧಿಸಿ ಸುಮ್ಮನಾಗುತ್ತಾರೆ. ಇದರಿಂದ ಡಿಪ್ಲೊಮಾ ಕೋರ್ಸ್ ಮುಗಿಸಿ ಹೊರಗೆ ಬಂದರೆ ಉದ್ಯೋಗ ಪಡೆದುಕೊಳ್ಳಲು ಪರದಾಡಬೇಕಿದೆ' ಎಂದು ಅಂತಿಮ ವರ್ಷದ ವಿದ್ಯಾರ್ಥಿಯೊಬ್ಬರು ಪ್ರತಿಕ್ರಿಯಿಸಿದರು.

ಉದಯವಾಹಿನಿ ಚಿತ್ರ



**ಕಾಲೇಜಿನ ವಿದ್ಯಾರ್ಥಿಗಳು ದೂರು**

> 'ಕಾಲೇಜಿನಲ್ಲಿ ಎಷ್ಟು ಪ್ರಯೋಗಾಲಯ ಇದೆ ಕೊಠಡಿಗಳ ಸ್ಥಿತಿ ಹೇಗಿದೆ ದಾಖಲಾತಿ ಹೇಗೆ ನಡೆಯುತ್ತಿದೆ ವಿದ್ಯಾರ್ಥಿಗಳಿಗೆ ಅಗತ್ಯ ಸೌಲಭ್ಯ ಸಿಗುತ್ತಿದೆಯೇ' ಎಂದು ಕೇಳಿದರೆ ಪಾಲಿಟೆಕ್ನಿಕ್ ಕಾಲೇಜು ಪ್ರಾಂಶುಪಾಲ ಚಂದ್ರಶೇಖರ್ ಉತ್ತರಿಸುವುದೇ ಇಲ್ಲ. 'ನಮ್ಮನ್ನೇನು ಕೇಳಬೇಡಿ. ನಮಗೆ ಹೇಳುವ ಅಧಿಕಾರ ಇಲ್ಲ. ಕಾಲೇಜಿನ ಸ್ಥಿತಿಗತಿಯ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ' ಎಂದು ಜಾರಿಕೊಂಡರು.

> 'ತಿಂಗಳಿಗೆ ಲಕ್ಷಾಂತರ ರೂಪಾಯಿ ಸಂಬಳ ತೆಗೆದುಕೊಳ್ಳುವ ಪ್ರಾಧ್ಯಾಪಕರು ಪ್ರಾಂಶುಪಾಲರಿಗೆ ವಿದ್ಯಾರ್ಥಿಗಳ ತೊಂದರೆ ಅರ್ಥವಾಗುತ್ತಿಲ್ಲ. ದಿನ ಹಲವು ಕಿಲೊ ಮೀಟರ್ ದೂರದಿಂದ ಕಾಲೇಜಿಗಾಗಿ ಬರುತ್ತೇವೆ. ಬೆಳಗ್ಗೆ ಸೂರ್ಯ ಉದಯಕ್ಕೂ ಮುನ್ನವೇ ಬಸ್ ಹತ್ತಿಕೊಂಡು ಬಂದರೆ ಮತ್ತೆ ಮನೆ ತಲುಪಲು ಸಂಜೆಯಾಗುತ್ತದೆ. ಆದರೆ ಕಾಲೇಜಿನಲ್ಲಿ ಸರಿಯಾದ ಶಿಕ್ಷಣ ಸಿಗುತ್ತಿಲ್ಲ' ಎಂದು ಪಾವಗಡ ಭಾಗದ ವಿದ್ಯಾರ್ಥಿ ಬೇಸರ ವ್ಯಕ್ತಪಡಿಸಿದರು.

## ಮಿನಿ ನ್ಯೂಸ್

### ಭಾರಿ ಮಳೆಗೆ ಮನೆಗೋಡೆ ಕುಸಿದು ಬಾಣಂತಿ ಬಲಿ

• **ಉದಯವಾಹಿನಿ, ಮೈಸೂರು**

ರಾಜ್ಯದಲ್ಲಿ ವರುಣನ ಅಬ್ಬರ ಮುಂದುವರೆದಿದ್ದು, ಹಲವೆಡೆ ಮಳೆಯ ಅಬ್ಬರಕ್ಕೆ ಜನಜೀವನ ಅಸ್ತವ್ಯಸ್ತವಾಗಿದೆ. ಅಲ್ಲದೆ ಪಶ್ಚಿಮ ಘಟ್ಟಗಳಲ್ಲಿ ಗುಡ್ಡಕುಸಿದು ಅನೇಕರು ಸಾವನ್ನಪ್ಪಿದ್ದಾರೆ. ಇದೀಗ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ಕಗ್ಗುಂಡಿ ಗ್ರಾಮದಲ್ಲಿ ಮಳೆಗೆ ಮನೆಗೋಡೆ ಬಾಣಂತಿ ಸಾವನ್ನಪ್ಪಿದ್ದಾಳೆ. ಘಟನೆಯು ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ಕಗ್ಗುಂಡಿ ಗ್ರಾಮದಲ್ಲಿ ನಡೆದಿದೆ. ಹೇಮಲತಾ(22) ಮೃತ ದುರ್ದೈವಿ. ಇತ್ತ ಅದೃಷ್ಟವಶಾತ್ ಮಗುವೊಂದು ಪಾರಾಗಿದೆ. ಕಳೆದ ಕೆಲ ದಿನಗಳಿಂದ ಮಳೆ ಅಬ್ಬರ ಜೋರಾಗಿದ್ದು, ಶಿಥಿಲಗೊಂಡಿದ್ದ ಮನೆಯ ಗೋಡೆ ಕುಸಿದು ದುರ್ಘಟನೆ ನಡೆದಿದೆ. ಘಟನಾ ಸ್ಥಳಕ್ಕೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದಾರೆ.

### ಗ್ಯಾಸ್ ಟ್ಯಾಂಕರ್ ಡಿಕ್ಕಿ ಹೊಡೆದು ಸ್ಥಳದಲ್ಲೇ ದಂಪತಿಗಳ ದುರ್ಮರಣ

• **ಉದಯವಾಹಿನಿ, ಮೈಸೂರು**

ಮೈಸೂರಿನಲ್ಲಿ ಭೀಕರ ಅಪಘಾತ ಸಂಭವಿಸಿದ್ದು ಗ್ಯಾಸ್ ಟ್ಯಾಂಕರ್ ಒಂದು ದಂಪತಿಗಳು ತೆರಳುತ್ತಿದ್ದ ಬೈಕ್ ಗೆ ರಭಸವಾಗಿ ಬಂದು ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲೇ ದಂಪತಿಗಳು ಸಾವನ್ನಪ್ಪಿರುವ ಘಟನೆ ನಡೆದಿದೆ. ಹೌದು ಈ ಒಂದು ಘಟನೆ ಮೈಸೂರಿನ ಕೂರ್ಗಳ್ಳಿ ಬಳಿ ರಿಂಗ್ ರಸ್ತೆಯಲ್ಲಿ ಈ ಒಂದು ದುರ್ಘಟನೆ ಸಂಭವಿಸಿದೆ. ಬೈಕನಲ್ಲಿ ತೆರಳುತ್ತಿದ್ದ ಪತಿ ಚಂದ್ರು, ಹಾಗೂ ಪತ್ನಿ ಪ್ರೇಮಾ ದುರ್ಮರಣ ಹೊಂದಿದ್ದಾರೆ. ಗ್ಯಾಸ್ ಟ್ಯಾಂಕರ್ ಡಿಕ್ಕಿ ಹೊಡೆದ ರಭಸಕ್ಕೆ ದಂಪತಿಗಳ ದೇಹಗಳು ಛಿದ್ರ ಛಿದ್ರವಾಗಿವೆ. ಸ್ಥಳಕ್ಕೆ ವಿವಿ ಪುರ ಠಾಣೆ ಪೊಲೀಸರು ಭೇಟಿ ನೀಡಿದ್ದು ಪರಿಶೀಲನೆ ನಡೆಸುತ್ತಿದ್ದಾರೆ.

### ರೈತ ವಿರೋಧಿ ನೀತಿಗೆ ಖಂಡನೆ

• **ಉದಯವಾಹಿನಿ, ಮೈಸೂರು**

ರಾಜ್ಯ ಸರ್ಕಾರದ ರೈತ ವಿರೋಧಿ ನೀತಿಗಳನ್ನು ಖಂಡಿಸಿ, ರೈತರ ಆತ್ಮಹತ್ಯೆ ತಡೆಗಟ್ಟುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಶಾಖೆ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಗುರುವಾರ ಪ್ರತಿಭಟನೆ ನಡೆಯಿತು. ಸರ್ಕಾರದ ಒಂದು ವರ್ಷದ ಆಡಳಿತದಲ್ಲಿ ಪರಿಶಿಷ್ಟ ವರ್ಗಕ್ಕೆ ಮೀಸಲಿಟ್ಟ 187 ಕೋಟಿ ಹಣ ದುರುಪಯೋಗ ಹಗರಣದ ಆರೋಪಕ್ಕೆ ಒಳಗಾಗಿದೆ. ಭೂ ಮಾಫಿಯಗಳ ಅಕ್ರಮಗಳು ನಿರಂತರವಾಗಿ ಸಾಗುತ್ತಲೇ ಇವೆ. ರೈತರ ಆತ್ಮಹತ್ಯೆಯೂ ಅಘಾತಕಾರಿಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. 2023ರ ಏಪ್ರಿಲ್ ತಿಂಗಳಿಂದ 2024ರ ಜೂನ್ ತಿಂಗಳವರೆಗೆ ರಾಜ್ಯದಲ್ಲಿ 1182 ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಯುವ ರೈತರ ಆತ್ಮಹತ್ಯೆ ಆತಂಕಕ್ಕೀಡು ಮಾಡಿದೆ. ಆತ್ಮಹತ್ಯೆ ತಡೆಗೆ ರೈತರನ್ನು ಒಳಗೊಂಡ ಸಮಿತಿಯನ್ನು ರಚಿಸಬೇಕು ಎಂದು ಆಗ್ರಹಿಸಿದರು. ಫಸಲು ಪಹಣಿ ದುರಸ್ತಿ, ಪಕ್ಕಾಪೋಡು ಹದ್ದುಬಸ್ತು ಶುಲ್ಕ ದುಬಾರಿಯಾಗಿದ್ದು, ಇಳಿಸಬೇಕು. ಖರೀದಿ ಕೇಂದ್ರದಿಂದ ಖರೀದಿಸಲಾದ ಉತ್ಪನ್ನಗಳಿಗೆ ಕೂಡಲೇ ಹಣ ಕೊಡಬೇಕು. ಬರ ಪರಿಹಾರ, ವಿಮಾ ಪರಿಹಾರದ ಹಣವನ್ನು ಸಾಲಕ್ಕೆ ಜಮಾ ಮಾಡದಂತೆ ಬ್ಯಾಂಕ್‌ಗಳಿಗೆ ಸೂಚನೆ ನೀಡಬೇಕು. ಅರಣ್ಯ ಭೂಮಿ ಸಾಗುವಳಿ ಮಾಡುತ್ತಿರುವ ರೈತರಿಗೆ ಅರಣ್ಯ ಇಲಾಖಾ ಕಿರುಕುಳವನ್ನು ತಪ್ಪಿಸಿ ಎಲ್ಲಾ ರೈತರಿಗೂ ಪಟ್ಟಾ ನೀಡಬೇಕು. ಕಾಡು ಪ್ರಾಣಿಗಳಿಂದ ಬೆಳೆ ನಷ್ಟಕ್ಕೆ ವೈಜ್ಞಾನಿಕ ನಷ್ಟ ನಿಗದಿಪಡಿಸಬೇಕು. ರೈತರ ಜಮೀನಿನಲ್ಲಿ ಸಾಗುವನಿ ಮರ ಕಡಿತ ಮತ್ತು ಸಾಗಾಣಿಕೆ ಪ್ರಕ್ರಿಯೆ ಸರಳಗೊಳಿಸಬೇಕು.

### ವಚನ ಸಾಹಿತ್ಯವನ್ನು ಯುವ ಪೀಳಿಗೆಗೆ ನೀಡಿದವರು ಹಳಕಟ್ಟಿಯವರು

• **ಉದಯವಾಹಿನಿ, ಚಾಮರಾಜನಗರ**

ವಚನ ಸಾಹಿತ್ಯವನ್ನು ನಾಡಿನೆಲ್ಲಡೆ ಸಂಗ್ರಹಿಸಿ ಯುವ ಪೀಳಿಗೆಗೆ ನೀಡಿದವರು ಹಳಕಟ್ಟಿಯವರು ಎಂದು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸುರೇಶ್ ಎನ್ ಋಗ್ವೇದಿ ತಿಳಿಸಿದರು. ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ವಚನ ಪಿತಾಮಹ ಫ.ಗು.ಹಳಕಟ್ಟಿರವರ ಕೊಡುಗೆಗಳ ಬಗ್ಗೆ ಮಾತನಾಡುತ್ತಾ ವಚನಗಳು ಕನ್ನಡ ಸಾಹಿತ್ಯ ಪರಂಪರೆಯ ದಿವ್ಯ ಮೌಲ್ಯ ಸಾಹಿತ್ಯವಾಗಿದೆ. ಮಾನವನ ಜೀವನದ ಪ್ರತಿಕ್ಷಣವೂ ವಚನಗಳ ಅಧ್ಯಯನದ ಮೂಲಕ ತಮ್ಮತನವನ್ನು ಹೆಚ್ಚಿಸಿಕೊಳ್ಳಲು, ಮಾನವೀಯ ಮೌಲ್ಯಗಳನ್ನು ಹರಡಲು, ಮನುಷ್ಯ ಮನುಷ್ಯನಾಗಿ ಬದುಕಲು ವಚನಗಳು ದಾರಿದೀಪವಾಗಿವೆ. ವಚನಗಳು ಕನ್ನಡಿಗರ ಅಮೂಲ್ಯ ಸಂಪತ್ತು. ಸರ್ವರೂ ಕೂಡ ಅದರ ಆದರ್ಶಗಳನ್ನು ಮೌಲ್ಯ ಚಿಂತನೆಗಳನ್ನು ಅರಿಯಬೇಕಿದೆ. ಮಾನವ ತನ್ನ ಜೀವನದ ವ್ಯಕ್ತಿತ್ವ ನಿರ್ಮಾಣಕ್ಕೆ ವಚನಗಳ ಜ್ಞಾನದ ಅರಿವು ಮಹತ್ವದ್ದಾಗ ಬೇಕು. ವಚನಗಳು ಸಾಮರಸ್ಯವನ್ನು ಬೆಳೆಸುತ್ತದೆ. ಮನುಷ್ಯ ಮನುಷ್ಯನನ್ನು ಅರ್ಥ ಮಾಡಿಕೊಳ್ಳಲು ವಚನಗಳಿಂದ ಸಾಧ್ಯವಿದೆ. ಕನ್ನಡ ಸಾಹಿತ್ಯದ ಶ್ರೇಷ್ಠ ಪರಂಪರೆ ವಚನ ಸಾಹಿತ್ಯ. ಜನಸಾಮಾನ್ಯರ ಸರಳ ಭಾಷಯಲ್ಲಿ ವಿವರಿಸಿದ ಚಿಂತಕರ ವಚನಗಳನ್ನು ಉಳಿಸಿ ಯುವ ಪೀಳಿಗೆಗೆ ನೀಡಿದ ಕೀರ್ತಿ ಹಳಕಟ್ಟಿಯವರಿಗೆ ಸಲ್ಲುತ್ತದೆ ಎಂದರು.

### ಮಂಡ್ಯದ ಕೆಆರ್‌ಎಸ್ ಡ್ಯಾಂನಿಂದ ಹೆಚ್ಚುವರಿ ನೀರು ಬಿಡುಗಡೆ

• **ಉದಯವಾಹಿನಿ, ಮಂಡ್ಯ**

ಕೆ.ಆರ್.ಎಸ್ ಜಲಾಶಯ ಭರ್ತಿಯಾಗುತ್ತಿದ್ದು, ಜಲಾಶಯದ ಮಟ್ಟ 120 ಅಡಿ ದಾಟಿದ ನಂತರ ನದಿಗೆ ನೀರು ಬಿಡುಗಡೆ ಮಾಡಲಾಗುವುದು. ಈ ಸಂದರ್ಭದಲ್ಲಿ ಯಾವುದೇ ಹಾನಿಯಾಗದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಿ ಎಂದು ಜಿಲ್ಲಾಧಿಕಾರಿ ಡಾ: ಕುಮಾರ ಅವರು ತಿಳಿಸಿದರು. ಅವರು ಇಂದು ಜಿಲ್ಲಾ ಪಂಚಾಯತ್‌ನ ಕಾವೇರಿ ಸಭಾಂಗಣದಲ್ಲಿ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದರು. ಕೆ.ಆರ್.ಎಸ್ ನಿಂದ ಒಂದು ಲಕ್ಷ ಕ್ಕಿಂತ ಹೆಚ್ಚಿನ ಕ್ಯೂಸೆಕ್ಸ್ ನೀರು ಬಿಡುಗಡೆ ಮಾಡಿದ ಸಂದರ್ಭದಲ್ಲಿ ನದಿ ಪಾತ್ರದಲ್ಲಿರುವ ಶ್ರೀರಂಗಪಟ್ಟಣ ತಾಲ್ಲೂಕಿನ- 53, ಪಾಂಡವಪುರ- 15, ಮಳವಳ್ಳಿ- 21 ಹಾಗೂ ಹೇಮಾವತಿ ಜಲಾಶಯಕ್ಕೆ ಸಂಬಂಧಿಸಿದಂತೆ ಕೆ.ಆರ್.ಪೇಟೆ - 3 ಗ್ರಾಮಗಳಲ್ಲಿ ಪ್ರವಾಹ ಉಂಟಾಗಿ ತೊಂದರೆಯಾಗಬಹುದು ಎಂದು ಅಂದಾಜಿಸಲಾಗಿದೆ. ಈ ಗ್ರಾಮಗಳಿಗೆ ಖುದ್ದು ಅಧಿಕಾರಿಗಳು ಭೇಟಿ ನೀಡಿ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಪರಿಶೀಲಿಸಬೇಕು ಎಂದರು.

ಅಂತರಾಳದಿಂದ... EDITORIAL

## ಮಾಲ್‌ನಲ್ಲಿ ಪ್ರವೇಶ ನಿರಾಕರಿಸಲ್ಪಟ್ಟ ರೈತನೂ, ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗ ನಿರಾಕರಿಸಲ್ಪಡುವ ಕನ್ನಡಿಗನೂ...

ಹಲವು ದಶಕಗಳ ಹಿಂದೆ ಚಪ್ಪಲಿ ಧರಿಸಿದ್ದಾರೆ ಎನ್ನುವ ಕಾರಣಕ್ಕೆ ಖ್ಯಾತ ಕಲಾವಿದ ಎಂ. ಎಫ್. ಹುಸೇನ್ ಅವರಿಗೆ ಪಂಚತಾರಾ ಹೊಟೇಲೊಂದರಲ್ಲಿ ಪ್ರವೇಶ ನಿರಾಕರಣೆಯಾದದ್ದು ಭಾರೀ ಸುದ್ದಿಯಾಗಿತ್ತು. ಪತ್ರಿಕೆಗಳಲ್ಲಿ ಹಲವು ದಿನಗಳ ಕಾಲ ಆ ಘಟನೆ ಚರ್ಚೆಗೀಡಾಯಿತು. ಭಾರತದ ಖ್ಯಾತ ಕಲಾವಿದನೊಬ್ಬನನ್ನು ಆತ ಧರಿಸಿದ ಚಪ್ಪಲಿಯ ಆಧಾರದಿಂದ ಪಂಚತಾರಾ ಹೊಟೇಲಿನ ಆಡಳಿತ ಮಂಡಳಿ 'ಗೌರವಿಸಿದು ಕಲೆಗೆ ಮಾಡಿದ ಭಾರೀ ಅವಮಾನ ಎಂದು ನಾಡಿನ ಚಿಂತಕರು, ಕಲಾವಿದರು, ಸಾಹಿತಿಗಳು ಪ್ರತಿಭಟನೆ ನಡೆಸಿದ್ದರು. ಪಂಚತಾರಾ ಹೊಟೇಲ್, ಬೃಹತ್ ಮಾಲ್‌ಗಳನ್ನು ನಿರ್ಮಿಸಿರುವುದೇ ಸೂಟುಬೂಟುಗಳನ್ನು ಧರಿಸಿದ ಶ್ರೀಮಂತ ವರ್ಗಕ್ಕಾಗಿ.

ಜನರ ಅರ್ಹತೆಯನ್ನು ಗುರುತಿಸಲು ಅವರು ಬಳಸುವ ಮಾನದಂಡ ಧಿರಿಸು. ಭಾರತದಲ್ಲಿ ತಮ್ಮ ಧಿರಿಸುಗಳ ಕಾರಣಕ್ಕಾಗಿಯೇ ಪ್ರತಿದಿನ ನೂರಾರು ಜನರು ನೂರಾರು ಸ್ಥಳಗಳಲ್ಲಿ ಪ್ರವೇಶ ನಿರಾಕರಣೆಯನ್ನು ಎದುರಿಸಬೇಕಾಗುತ್ತದೆ. ಚಪ್ಪಲಿ, ಧೋತಿಗಳ ಕಾರಣಕ್ಕಾಗಿ ಮಾತ್ರವಲ್ಲ ಕೆಲವೊಮ್ಮೆ ತೊಗಲಿನ ಬಣ್ಣದ ಕಾರಣದಿಂದಲೇ ಪ್ರವೇಶ ನಿರಾಕರಿಸಲ್ಪಡುತ್ತಾರೆ. ದಲಿತರು, ಕೆಳಜಾತಿಯ ಜನರು ಎನ್ನುವ ಕಾರಣಕ್ಕಾಗಿ ಈ ದೇಶದ ಸಹಸ್ರಾರು ಜನರು ಇನ್ನೂ ದೇವಸ್ಥಾನಗಳಿಂದ ಹೊರಗೆಯೇ ಇದ್ದಾರೆ. ಹೀಗಿರುವಾಗ, ಧಿರಿಸುಗಳ ಕಾರಣದಿಂದ ಪ್ರವೇಶ ನಿರಾಕರಿಸಲ್ಪಡುವುದು ಇಲ್ಲಿ ದೊಡ್ಡ ವಿಷಯವೇನೂ ಅಲ್ಲ. ಹುಸೇನ್ ಅಂತರ್‌ರಾಷ್ಟ್ರೀಯ ಕಲಾವಿದರಾಗಿರುವ ಕಾರಣದಿಂದ ಅಂದು ಅದು ರಾಷ್ಟ್ರಮಟ್ಟದಲ್ಲಿ ಸುದ್ದಿಯಾಯಿತು. ವಿಪರ್ಯಾಸವೆಂದರೆ, ಈ ಘಟನೆ ನಡೆದ ಎಷ್ಟೋ ವರ್ಷಗಳ ಬಳಿಕ ತನ್ನ ಕಲೆಯ ಕಾರಣಕ್ಕಾಗಿಯೇ ಹುಸೇನ್ ದೇಶದಿಂದ ಪಲಾಯನ ಮಾಡಬೇಕಾಯಿತು. ತನ್ನ ಕಲಾಕೃತಿಗಳ ಕಾರಣದಿಂದ ತೀವ್ರ ಪ್ರತಿಭಟನೆಗಳನ್ನು ಎದುರಿಸಿದ ಹುಸೇನ್ ಬಳಿಕ ದೇಶ ತೊರೆದರು. ವಿದೇಶದಲ್ಲೇ ಮೃತಪಟ್ಟರು.

**ವಿಧಾನಸಭೆಯಲ್ಲಿ ರಾಜಕೀಯ ನಾಯಕರೂ ಆ ಮಾಲ್‌ನ ವಿರುದ್ಧ ಮಾತನಾಡಿದರು. ಆದರೆ, ಕನ್ನಡಿಗರಿಗೆ ತಮ್ಮ ಸಂಸ್ಥೆಗಳಲ್ಲಿ ಮೀಸಲಾತಿಯನ್ನು ನೀಡಲು ಸಿದ್ಧವಿಲ್ಲ ಎಂದ ಉದ್ಯಮಿಗಳನ್ನು ಯಾಕೆ ಕನ್ನಡಿಗರಿಗೆ ನೀವು ನಿಮ್ಮ ಸಂಸ್ಥೆಗಳಲ್ಲಿ ಪ್ರವೇಶ ನೀಡುವುದಿಲ್ಲ ಎಂದು ಪ್ರಶ್ನಿಸುವ ಧೈರ್ಯವನ್ನು ಈವರೆಗೆ ಯಾರೂ ಮಾಡಲಿಲ್ಲ. ಬದಲಿಗೆ ಖಾಸಗಿ ಉದ್ಯಮಿಗಳಿಗೆ ಮಣಿದು ಕನ್ನಡಿಗರ ಹಿತಾಸಕ್ತಿಯನ್ನು ಬಲಿಕೊಡಲಾಯಿತು. ಹೇಳಿಕೆ ನೀಡಿದ ಕೆಲವೇ ಗಂಟೆಗಳಲ್ಲಿ ಮುಖ್ಯಮಂತ್ರಿ ಅದನ್ನು ಹಿಂದೆಗೆದುಕೊಳ್ಳಬೇಕಾಯಿತು.**

ಅಂದು ಪಂಚತಾರಾ ಹೊಟೇಲ್‌ನಲ್ಲಿ ಎಂ. ಎಫ್. ಹುಸೇನ್ ಅವರು ಎದುರಿಸಿದ ಅವಮಾನವನ್ನೇ ಎರಡು ದಿನಗಳ ಹಿಂದೆ ಕರ್ನಾಟಕದಲ್ಲಿ ರೈತನೊಬ್ಬ ಮಾಲೊಂದರ ಪ್ರವೇಶ ಸಂದರ್ಭದಲ್ಲಿ ಎದುರಿಸಬೇಕಾಯಿತು. ಬೆಂಗಳೂರಿನ ಮಾಗಡಿ ರಸ್ತೆಯಲ್ಲಿರುವ ಮಾಲೊಂದರಲ್ಲಿ ರೈತನೊಬ್ಬ ಪಂಚೆ ಧರಿಸಿ ಬಂದಿದ್ದಾನೆ ಎನ್ನುವ ಕಾರಣಕ್ಕೆ ಆತನನ್ನು ಕಾವಲುಗಾರ ಒಳಗೆ ಬಿಡಲಿಲ್ಲ. ಈತ ಎಂ.ಎಫ್. ಹುಸೇನ್‌ನಂತೆ ಕಲಾವಿದನೇನೂ ಅಲ್ಲದೇ ಇರುವುದರಿಂದ ಇದು ದೊಡ್ಡ ಸುದ್ದಿಯಾಗುತ್ತಿರಲಿಲ್ಲವೇನೋ. ಆದರೆ, ಅವರ ಜೊತೆಗಿದ್ದ ಯುವಕ ಇದನ್ನು ಪ್ರತಿಭಟಿಸಿದ. ಘಟನೆಯನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿ ಅದನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಾಕಿದ. ಈ ನಾಡಿನ ಕಾರ್ಮಿಕರು, ರೈತರ ಜೊತೆಗೆ ಬೃಹತ್ ಮಾಲ್‌ಗಳು, ಕಾರ್ಪೊರೇಟ್ ಸಂಸ್ಥೆಗಳು ಎಂತಹ ದೋರಣೆಯನ್ನು ಹೊಂದಿವೆ ಎನ್ನುವುದನ್ನು ಈ ಘಟನೆ ಬಯಲು ಮಾಡಿತು. ಯುವಕನ ಪ್ರತಿಭಟನೆಗೆ ವಿವಿಧ ಸಂಘಟನೆಗಳು, ಸಾರ್ವಜನಿಕರು ಸ್ಪಂದಿಸುತ್ತಿದ್ದಂತೆಯೇ ಮಾಲ್‌ನ ಆಡಳಿತ ಮಂಡಳಿ ಎಚ್ಚೆತ್ತುಕೊಂಡಿತು. ಹಲವರು ಪ್ರತಿಭಟನಾರ್ಥವಾಗಿ ಪಂಚೆ ಧರಿಸಿ ಮಾಲ್‌ನ ಮುಂದೆ ನೆರೆದರು. ಪರಿಸ್ಥಿತಿ ಕೈ ಮೀರುತ್ತದೆ ಎನ್ನುವುದು ಗೊತ್ತಾಗುತ್ತಿದ್ದಂತೆಯೇ ಆಡಳಿತ ಮಂಡಳಿ ಕ್ಷಮೆ ಯಾಚಿಸಿತು. ಮಾತ್ರವಲ್ಲ ರೈತನನ್ನು ಹೂಹಾರ ಹಾಕಿ ಗೌರವಿಸಿ ತನ್ನ ತಪ್ಪನ್ನು ತಿದ್ದಿಕೊಳ್ಳುವ ಪ್ರಯತ್ನ ನಡೆಸಿತು.ಸಮಾಧಾನಕರವಾದ ಸಂಗತಿಯೆಂದರೆ, ಈ ಪ್ರಕರಣ ವಿಧಾನಸೌಧದಲ್ಲೂ ಪ್ರತಿಧ್ವನಿಸಿರುವುದು. ಸ್ಪೀಕರ್ ಕೂಡ ಇದರ ವಿರುದ್ಧ ಖಂಡನೆ ವ್ಯಕ್ತಪಡಿಸಿ, ಮಾಲ್ ವಿರುದ್ಧ ಕ್ರಮಕ್ಕೆ ಆಗ್ರಹಿಸಿದರು. ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಅವರು, ಜಿ.ಟಿ. ಮಾಲ್‌ನ್ನು ಏಳು ದಿನಗಳ ಕಾಲ ಬಂದ್ ಮಾಡುವುದಾಗಿ ಪ್ರಕಟಿಸಿದರು. ಪ್ರವೇಶ ನಿರಾಕರಿಸಿದ್ದ ಮಾಲ್‌ನ ಮಾಲಕನ ಮೇಲೆ ಈಗಾಗಲೇ ಪ್ರಕರಣ ದಾಖಲಾಗಿದೆ. ಕನ್ನಡದ ನೆಲ, ಜಲವನ್ನು ಬಳಸಿಕೊಂಡು ತಲೆಯೆತ್ತುವ ಮಾಲ್‌ಗಳು, ಸ್ಮಾರ್ಟ್ ಸಿಟಿಗಳು ನಿಧಾನಕ್ಕೆ ಹೇಗೆ ಈ ನಾಡಿನ ರೈತರನ್ನು ಕಾರ್ಮಿಕರನ್ನು ಹೊರ ಹಾಕಬಹುದು ಎನ್ನುವುದಕ್ಕೆ ಇದೊಂದು ಸಣ್ಣ ನಿದರ್ಶನವಷ್ಟೇ. ಭಾರತದ ಅಭಿವೃದ್ಧಿಯಲ್ಲಿ ಈ ನಾಡಿನ ರೈತರು, ಕಾರ್ಮಿಕರ ಸ್ಥಾನಗಳೇನು ಎನ್ನುವುದನ್ನು ಈ ಘಟನೆ ಪರೋಕ್ಷವಾಗಿ ಬೆಟ್ಟು ಮಾಡಿದೆ. ತಲೆಗೆ ಪೇಟಾ ಸುತ್ತಿ, ಧೋತಿ ಉಟ್ಟ ರೈತರ ಬಗ್ಗೆ ಬರೇ ಕಾರ್ಪೊರೇಟ್ ವಲಯ ಮಾತ್ರವಲ್ಲ ಉಳಿದವರಿಗೂ ಇದಕ್ಕಿಂತ ಭಿನ್ನ ಅಭಿಪ್ರಾಯವೇನೂ ಇಲ್ಲ. ಉತ್ತರ ಕರ್ನಾಟಕದಿಂದ ನಗರಗಳಿಗೆ ವಲಸೆ ಬರುವ ಕಾರ್ಮಿಕರ ಜೊತೆಗೆ ನಗರದ ಜನರು ಟ್ರೈನ್‌ಗಳಲ್ಲಿ, ಬಸ್‌ಗಳಲ್ಲಿ ಹೇಗೆ ವರ್ತಿಸುತ್ತಾರೆ ಎನ್ನುವುದನ್ನು ಒಮ್ಮೆ ಗಮನಿಸಿದರೆ ಸಾಕು ನಮಗೆ ಗೊತ್ತಾಗಿ ಬಿಡುತ್ತದೆ.ಹಾಗೆ ನೋಡಿದರೆ ಈ ದೇಶದ ಐಟಿ, ಬಿಟಿ ಉದ್ಯಮಿಗಳು ಇಡೀ ಕನ್ನಡಿಗರ ಬಗ್ಗೆಯೂ ಇದೇ ಮನಸ್ಥಿತಿಯನ್ನು ಹೊಂದಿದ್ದಾರೆ. ಕನ್ನಡಿಗರಿಗೆ ಖಾಸಗಿ ವಲಯದಲ್ಲಿ ಮೀಸಲಾತಿಯ ಪ್ರಸ್ತಾವವನ್ನು ಸರಕಾರ ಮಾಡಿದಾಕ್ಷಣ, ರಾಜ್ಯದ ಐಟಿ, ಬಿಟಿ ದೈತ್ಯರು ಭೂಕಂಪವಾದಂತೆ ವರ್ತಿಸಿದರು. ಇನ್ನೂ ವಿಧೇಯಕ ಜಾರಿಗೊಂಡಿಲ್ಲ ಅಷ್ಟರಲ್ಲೇ ಇಡೀ ಉದ್ಯಮದ ಗುಣಮಟ್ಟವೇ ಕೆಟ್ಟು ಹೋಯಿತು ಎಂಬಂತೆ ಹಾಹಾಕಾರ ಮಾಡತೊಡಗಿದರು. ಪ್ರತಿಭೆಗೆ, ಕೌಶಲ್ಯಕ್ಕೆ ಇದರಿಂದ ಧಕ್ಕೆ ಉಂಟಾಗುತ್ತದೆ ಎಂದು ಗದ್ದಲ ಎಬ್ಬಿಸಿದರು. ಇವರ ಪ್ರಕಾರ ಕನ್ನಡಿಗರೆಂದರೆ ಪ್ರತಿಭೆಗಳಿಲ್ಲದ, ಕೌಶಲ್ಯಗಳಿಲ್ಲದ, ಐಟಿ, ಬಿಟಿಗಳಲ್ಲಿ ಉನ್ನತ ಸ್ಥಾನಗಳನ್ನು ನಿಭಾಯಿಸಲು ಯೋಗ್ಯತೆಯಿಲ್ಲದ ಹಳ್ಳಿ ಗಮಾರರು. ಮೀಸಲಾತಿ ನೀಡುವ ಮೊದಲು ಇವರಿಗೆ ಉತ್ತಮ ಕೌಶಲ್ಯಗಳ ಬಗ್ಗೆ ಸರಕಾರ ತರಬೇತಿ ನೀಡಬೇಕು ಎಂದು ಕೆಲವು ಉದ್ಯಮಿಗಳು ಆಗ್ರಹಿಸಿದರು.

## ನಾಳೆ ಗುರುಪೂರ್ಣಿಮೆ: ಗುರುವಿನ ಋಣ ತೀರಿಸುವುದು ಅಸಾಧ್ಯ

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ಗುರುಪೂರ್ಣಿಮೆ (ವ್ಯಾಸ ಪೂರ್ಣಿಮೆ) ಅಂದರೆ ಶಿಷ್ಯನೋರ್ವನ ಜೀವನದಲ್ಲಿ ಬರುವಂತಹ ಮಹತ್ವದ ದಿನ. ಮಾಯೆಯ ಭವಸಾಗರದಿಂದ ಶಿಷ್ಯ ಮತ್ತು ಭಕ್ತನನ್ನು ಹೊರತರುವ, ಅವನಿಂದ ಆವಶ್ಯಕವಿರುವ ಸಾಧನೆಯನ್ನು ಮಾಡಿಸಿಕೊಳ್ಳುವ ಮತ್ತು ಕಠಿಣ ಸಮಯದಲ್ಲಿ ಅವನಿಗೆ ಅತ್ಯಂತ ಹತ್ತಿರದಿಂದ ಹಾಗೂ ನಿರಪೇಕ್ಷ ಪ್ರೇಮದಿಂದ ಆಧಾರವನ್ನು ನೀಡಿ ಸಂಕಟಮುಕ್ತ ಮಾಡುವವರು ಗುರುಗಳೇ.

ಇಂತಹ ಪರಮಪೂಜನೀಯ ಗುರುಗಳ ಬಗ್ಗೆ ಕೃತಜ್ಞತೆ ವ್ಯಕ್ತಪಡಿಸುವ ದಿನವೆಂದರೆ ಗುರುಪೂರ್ಣಿಮೆ. 21 ಜುಲೈ, 2024, ರವಿವಾರದಂದು ನಾವೆಲ್ಲರೂ ಕೃತಜ್ಞರಾಗಿ ಗುರುಪೂರ್ಣಿಮೆಯನ್ನು ಆಚರಿಸಲಿದ್ದೇವೆ. ಗುರು ಎಂದರೆ ಈಶ್ವರನ ಸಗುಣ ರೂಪ. ವರ್ಷಾದ್ಯಂತ ಪ್ರತಿಯೊಬ್ಬ ಗುರುಗಳು ತಮ್ಮ ಭಕ್ತರಿಗೆ ಅಧ್ಯಾತ್ಮದ ಬೋಧಾಮೃತವನ್ನು ನೀಡುತ್ತಿರುತ್ತಾರೆ.

ಇಂತಹ ಮಹಾನ್ ಗುರುಗಳ ಋಣವನ್ನು ತೀರಿ ಸುವುದು ಅಸಾಧ್ಯ. ಆದರೂ ಆ ಗುರುಗಳ ಬಗ್ಗೆ ಕೃತ ಜ್ಞತೆಯನ್ನು ವ್ಯಕ್ತಪಡಿಸುವುದೇ ಗುರುಪೂರ್ಣಿಮೆ ಆಚರಿಸುವುದರ ಹಿಂದಿನ ಉದ್ದೇಶವಾಗಿದೆ. ಗುರುವು ದೇವರ ಭೌತಿಕ ಅಭಿವ್ಯಕ್ತಿ. ಹಿಂದೂ ಸಂಸ್ಕೃತಿಯು ಗುರುವನ್ನು ದೇವರಿಗಿಂತ ಉನ್ನತ ಪೀಠದಲ್ಲಿ ಇರಿಸಿದೆ; ಏಕೆಂದರೆ ಗುರುವು ಅನ್ವೇಷಕನಿಗೆ ದೇವರ ಸಾಕ್ಷಾತ್ಕಾ ರಕ್ಕಾಗಿ ಆಧ್ಯಾತ್ಮಿಕ ಅಭ್ಯಾಸವನ್ನು ಕಲಿಸುತ್ತಾನೆ, ಅದನ್ನು ಅವನಿಂದ ಮಾಡುತ್ತಾನೆ ಮತ್ತು ದೇವರನ್ನು ಅರಿತುಕೊಳ್ಳಲು ಸಹಾಯ ಮಾಡುತ್ತಾನೆ. ಗುರುವು ವಿವಿಧ ರೀತಿಯಲ್ಲಿ ಮಾರ್ಗದರ್ಶನ ಮತ್ತು ಪ್ರಜ್ಞಾಪೂರ್ವಕವಾಗಿ ತನ್ನ ಅನುಗ್ರಹವನ್ನು ಶಿಷ್ಯರಿಗೆ ಜೀವಮಾನದುದ್ದಕ್ಕೂ ನಿರಂತರವಾಗಿ ನೀಡುತ್ತಾನೆ.

### ಗುರುಪೂರ್ಣಿಮೆಯ ಮಹತ್ವ

**ಗುರು-ಶಿಷ್ಯ ಪರಂಪರೆ (ಗುರು ಮತ್ತು ಶಿಷ್ಯ ಪರಂಪರೆ ವ್ಯವಸ್ಥೆ) ಹಿಂದೂ ಧರ್ಮ ಮತ್ತು ಭಾರತದ ಸಂಸ್ಕೃತಿಯ ಪವಿತ್ರ ಭಾಗವಾಗಿದೆ. ಗುರು ಪೂರ್ಣಿಮೆಯನ್ನು ಆಚರಿಸುವುದು ಗುರುವಿಗೆ ನಮನ ಸಲ್ಲಿಸುವ ಒಂದು ಮಾರ್ಗವಾಗಿದೆ ಮತ್ತು ಈ ಶ್ರೀಮಂತ ಆಧ್ಯಾತ್ಮಿಕ ಪರಂಪರೆಯನ್ನು ಮುಂದುವರಿಸಲು ಪ್ರತಿಜ್ಞೆ ಮಾಡುತ್ತದೆ.**

### ಉತ್ಸವವನ್ನು ಆಚರಿಸುವ ಪದ್ಧತಿ

**ಸ್ನಾನಾದಿ ನಿತ್ಯಕರ್ಮಗಳನ್ನು ಮುಗಿಸಿ 'ಗುರುಪರಂಪರಾ ಸಿದ್ಧ್ಯರ್ಥಂ ವ್ಯಾಸಪೂಜಾಂ ಕರಿಷ್ಯೇ।' ಎಂದು ಸಂಕಲ್ಪ ಮಾಡುತ್ತಾರೆ. ಒಂದು ಶುಭ್ರವಸ್ತ್ರವನ್ನು ಹಾಸಿ ಅದರ ಮೇಲೆ ಪೂರ್ವದಿಂದ ಪಶ್ಚಿಮದ ಕಡೆಗೆ ಮತ್ತು ಉತ್ತರದಿಂದ ದಕ್ಷಿಣದ ಕಡೆಗೆ ಗಂಧದಿಂದ ಹನ್ನೆರಡು ರೇಖೆ (ಗೆರೆ) ಗಳನ್ನು ಎಳೆಯುತ್ತಾರೆ. ಇದೇ ವ್ಯಾಸಪೀಠ. ಅನಂತರ ಬ್ರಹ್ಮ, ಪರಾತ್ಪರಶಕ್ತಿ, ವ್ಯಾಸ, ಶುಕದೇವ, ಗೌಡಪಾದ, ಗೋವಿಂದಸ್ವಾಮಿ ಮತ್ತು ಶಂಕರಾಚಾರ್ಯರನ್ನು ಈ ವ್ಯಾಸಪೀಠದ ಮೇಲೆ ಆವಾಹಿಸಿ ಅವರಿಗೆ ಷೋಡಶೋಪಚಾರ ಪೂಜೆಯನ್ನು ಮಾಡುತ್ತಾರೆ. ಈ ದಿನ, ದೀಕ್ಷಾಗುರು ಹಾಗೂ ತಂದೆ-ತಾಯಿಯರ ಪೂಜೆಯನ್ನೂ ಮಾಡುವ ಪದ್ಧತಿಯಿದೆ.**

**ಗುರುವಿಗೆ ನಮನ ಸಲ್ಲಿಸಿ**

ಗುರುವಿನ ಋಣ ತೀರಿಸುವುದು ಅಸಾಧ್ಯ, ಆದರೆ ಗುರುವಿಗೆ ನಮ್ರತೆಯಿಂದ ಕೃತಜ್ಞತೆ ಸಲ್ಲಿಸಬಹುದು! ಮತ್ತು ಅದನ್ನು ಮಾಡುವ ದಿನವೇ ಗುರು ಪೂರ್ಣಿಮೆ.

2. ಗುರುಪೂರ್ಣಿಮೆಯಂದು ಗುರುತತ್ತ್ವವು ಇತರ ದಿನಗಳ ತುಲನೆಯಲ್ಲಿ 1 ಸಾವಿರ ಪಟ್ಟು ಹೆಚ್ಚು ಕಾರ್ಯನಿರತವಾಗಿರುತ್ತದೆ.

ಆದ್ದರಿಂದ ಗುರುಪೂರ್ಣಿಮೆಯ ನಿಮಿತ್ತ ಮೊದಲಿನಿಂದಲೂ ಮನಃಪೂರ್ವಕ ಮಾಡಿದ ಸೇವೆ ಮತ್ತು ತ್ಯಾಗ ಇವುಗಳ ಲಾಭವು ಇತರ ದಿನಗಳ ತುಲನೆಯಲ್ಲಿ ವ್ಯಕ್ತಿಗೆ 1 ಸಾವಿರ ಪಟ್ಟು ಹೆಚ್ಚಾಗುತ್ತದೆ; ಆದ್ದರಿಂದ ಗುರುಪೂರ್ಣಿಮೆಯು ಈಶ್ವರೀ ಕೃಪೆಯ ಒಂದು ಅಮೂಲ್ಯ ಪರ್ವಕಾಲವೇ ಆಗಿದೆ.

3. ಗುರು-ಶಿಷ್ಯ ಪರಂಪರೆ'ಯು ಹಿಂದೂಗಳ ಲಕ್ಷಾವಧಿ ವರ್ಷಗಳ ಚೈತನ್ಯಮಯ ಸಂಸ್ಕೃತಿಯಾಗಿದೆ. ಆದರೆ ಕಾಲದ ಪ್ರವಾಹದಲ್ಲಿ ರಜ-ತಮಪ್ರಧಾನ ಸಂಸ್ಕೃತಿಯ ಪ್ರಭಾವದಿಂದಾಗಿ ಮಹಾನ ಗುರು-ಶಿಷ್ಯ ಪರಂಪರೆಯನ್ನು ನಿರ್ಲಕ್ಷಿಸಲಾಗುತ್ತಿದೆ. ಗುರುಪೂರ್ಣಿಮೆಯ ನಿಮಿತ್ತದಿಂದ ಗುರುಪೂಜೆಯಾಗುತ್ತದೆ, ಹಾಗೆಯೇ ಗುರು-ಶಿಷ್ಯ ಪರಂಪರೆಯ ಶ್ರೇಷ್ಠತೆಯನ್ನು ಸಮಾಜಕ್ಕೆ ಹೇಳಲು ಸಾಧ್ಯವಾಗುತ್ತದೆ. ಸ್ವಲ್ಪದರಲ್ಲಿ ಹೇಳುವುದಾದರೆ ಗುರು-ಶಿಷ್ಯ ಪರಂಪರೆ ಯನ್ನು ಉಳಿಸಿಕೊಳ್ಳುವ ಸದವಕಾಶ ಲಭಿಸುತ್ತದೆ.

## ದಾಂಪತ್ಯ



☛ ವಿಶ್ವಾಸ್.ಡಿ.ಗೌಡ

• ಉದಯವಾಹಿನಿ, ವಿಶೇಷ


ಉದಯವಾಹಿನಿ ಚಿತ್ರ

ಇಂದಿನ ದಿನಗಳಲ್ಲಿ ಗಂಡ ಹೆಂಡತಿಯ ನಡುವೆ ಜಗಳವಾಗಲು ಕಾರಣವಾಗುವ ಕ್ಷುಲಕ ವಿಷಯಗಳೆಂದರೆ ಆಫೀಸಿನಿಂದ ಗಂಡ ತಡವಾಗಿ ಬರುವುದು. ಗಂಡ ಹೆಂಡತಿಯ ಮಾತು, ಹೆಂಡತಿ ಗಂಡನ ಮಾತನ್ನು ಆಲಿಸದಿರುವುದು. ನೆರೆಯ ಮನೆಯವರೊಂದಿಗೆ ಮಾತನಾಡಿದರೆ ಸಂಶಯ, ಹೆಚ್ಚಿನ ವಿದ್ಯಾಭ್ಯಾಸದ ಪ್ರಶಂಸೆ, ಶಾಪಿಂಗ್‌ಗೆ ಬರದ ಗಂಡ, ರೀಲ್ಸ್ ಮಾಡುವ ಹೆಂಡತಿ, ಮಕ್ಕಳನ್ನು ಶಾಲೆಗೆ ಬಿಡದ ಗಂಡ, ಮಕ್ಕಳಿಗೆ ಊಟ ಮಾಡಿಸಿದ ಹೆಂಡತಿ. ದುಂದುವೆಚ್ಚ, ಸಣ್ಣ ಪುಟ್ಟ ವಿಷಗಳಿಗೂ ಸಿಡುಕು, ಪರಸ್ಪರರ ಆಸಕ್ತಿಯನ್ನು ಗೌರವಿಸದಿರುವುದು ಹೀಗೆ ಹೇಳುತ್ತಾ ಹೋದರೆ ಕಾರಣಗಳ ಪುಸ್ತಕವನ್ನೇ ಬರೆಯಬಹುದು. ಆದರೆ ಇವುಗಳಿಂದ ಹೊರಬಂದು ಗಂಡ ಹೆಂಡತಿ ಸುಖವಾಗಿ ಸಂಸಾರ ನಡೆಸಲು ಕೆಲವು ಮಾರ್ಗೋಪಾಯಗಳು ಹಾಗೂ ಪರಿಹಾರಗಳು ಇಲ್ಲಿವೆ.

**ಪರಸ್ಪರರನ್ನು ಗೌರವಿಸುವುದು:** ಗಂಡ ಹೆಂಡತಿಯರಿಬ್ಬರೂ ಪರಸ್ಪರರನ್ನು ಹಾಗೂ ಇಬ್ಬರ ಆಸಕ್ತಿಯನ್ನು ಗೌರವಿಸಬೇಕು. ಹೀಗಾದಾಗ ಒಬ್ಬರನ್ನೊಬ್ಬರು ಚೆನ್ನಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯ.

**ಸಲಹೆಗಳನ್ನು ಆಲಿಸುವುದು:** ಪರಸ್ಪರರ ಸಲಹೆಗಳನ್ನು ಇಬ್ಬರೂ ತಾಳ್ಮೆಯಿಂದ ಕೇಳಿ, ಅದಕ್ಕೆ ತಕ್ಕುದಾದ ನಿರ್ಧಾರವನ್ನು ತೆಗೆದುಕೊಂಡರೆ ಸಮಸ್ಯೆಯೇ ಬರುವುದಿಲ್ಲ.

**ಕ್ಷುಲಕ ವಿಷಯಗಳಿಗೆ ಜಗಳ ಬೇಡ:**

ಸಣ್ಣ ಪುಟ್ಟ ವಿಷಯಗಳನ್ನೂ ಇಬ್ಬರೂ ದೊಡ್ಡದು ಮಾಡದೇ, ಆ ವಿಷಯದ ವಾಸ್ತವತೆಯನ್ನು ಅರಿತು ಆ ವಿಷಯಗಳನ್ನು ಗಂಭೀರವಾಗಿ ಪರಿ ಗಣಿಸಬಾರದು.

**ಪರರಂತೆ ಬದುಕಬೇಕೆಂಬ ಅತಿಯಾಸೆ ಬೇಡ:**

ಹಾಸಿಗೆಯಿದ್ದಷ್ಟು ಕಾಲು ಚಾಚು ಎಂಬ ಗಾದೆಯಂತೆ ತಮ್ಮಗೆ ಇದ್ದುದರಲ್ಲೇ ಪರಸ್ಪರರು ಸಂತೋಷದಿಂದ ಬದುಕಲು ಕಲಿಯಬೇಕು. ಅದನ್ನು ಬಿಟ್ಟು ಅವರ ಮನೆ ಹಾಗಿದೆ, ನಮ್ಮ ಮನೆ ಹೀಗಿದೆ, ಅವರ ಬಳಿ ಕಾರಿದೆ, ನಮ್ಮ ಬಳಿ ಸ್ಕೂಟರು ಎಂದು ಪರರ ಹೋಲಿಕೆಯನ್ನು ಮಾಡುತ್ತಾ ನಿಮ್ಮ ದಿನನಿತ್ಯದ ಬದುಕನ್ನು ಹಾಳು ಮಾಡಿಕೊಳ್ಳಬಾರದು. ನಿಮ್ಮ ಬಳಿಯಿರುವುದೇ ಶ್ರೇಷ್ಠವೆಂದು ನೆನೆದು ಬದುಕು ನಡೆಸಬೇಕು.

**ಪರಸ್ಪರರೊಂದಿಗೆ ಸಮಯ ಕಳೆಯಬೇಕು:**

ಗಂಡ ಹೆಂಡತಿ ಇಬ್ಬರೂ ತಮಗೆ ಸಿಗುವ ಸಮಯವನ್ನು ಪರಸ್ಪರ ಕಳೆಯುತ್ತಾ, ಪ್ರಯಾಣಗಳನ್ನು ಮಾಡುತ್ತಾ, ವಿಷಯಗಳನ್ನು ವಿನಿಮಯ ಮಾಡಿಕೊಳ್ಳಬೇಕು. ಇಬ್ಬರಿಗೂ ಇಷ್ಟವಾದ ಸ್ಥಳಗಳಿಗೆ ಭೇಟಿ ಕೊಡುವುದು. ಮೊಬೈಲ್‌ನಲ್ಲಿ ಚಾಟ್ ಮಾಡಿಕೊಂಡು ಸಂವಹನ ನಡೆಸುವ ಬದಲು ಇಬ್ಬರೂ ಪಕ್ಕಪಕ್ಕ ಕುಳಿತುಕೊಂಡು ಮಾತನಾಡಿದರೆ ಸಮಸ್ಯೆಯೇ ಇರುವುದಿಲ್ಲ.

### ಕುಟುಂಬದವರ ಮೇಲೆ ಪ್ರೀತಿ ಮುಖ್ಯ

**ಎಲ್ಲಾ ಸಂಬಂಧಗಳೂ ಬಹುಕಾಲ ಉಳಿಯಲು ಮುಖ್ಯವಾಗಿ ಬೇಕಾಗಿರುವದೇ ಪ್ರೀತಿ. ಪರಸ್ಪರ ಕುಟುಂಬದವರ ಮೇಲೆ ಇಬ್ಬರಿಗೂ ಗೌರವ, ಕಾಳಜಿ. ಪ್ರೀತಿಯಿರಬೇಕು. ಆಗ ಬದುಕು ಚಂದ. ಮಕ್ಕಳಾದವರು ಮಕ್ಕಳನ್ನು ಹೊರೆ, ತಮ್ಮ ಪ್ರೀತಿಗೆ ಅಡ್ಡಿಯೆಂದು ಭಾವಿಸದೇ ಮಕ್ಕಳನ್ನು ಮಮತೆಯಿಂದ ಕಾಣಬೇಕು. ಗಂಡನ ಮೇಲೆ ಹೆಂಡತಿಗೆ, ಹೆಂಡತಿ ಮೇಲೆ ಗಂಡನಿಗೆ ಪ್ರೀತಿ ಇದ್ದರೆ ಕೋಪ, ಜಗಳವೆಲ್ಲವೂ ಕ್ಷಣಮಾತ್ರ.**

ಅಹಂ, ಒಣ ಜಂಭ ಬಿಟ್ಟು ಮಾತು ಆರಂಭಿಸಬೇಕು ಗಂಡ ಹೆಂಡತಿಯ ನಡುವೆ ಜಗಳವಾದರೇ, ಗಂಡ ಮೊದಲು ಹೆಂಡತಿಯೇ ಮಾತನಾಡಲಿ ಎಂದೋ ಅಥವಾ ಹೆಂಡತಿ ಮೊದಲು ಗಂಡನೇ ಮಾತನಾಡಲಿ ಎಂದೂ ಸುಮ್ಮನೆ ಕೂತು ಕೋಪವನ್ನು ಬೆಳೆಸದೇ ಇಬ್ಬರೂ ಮುಂದು ಮಾತನಾಡಲು ಸಿದ್ಧರಾಗಿರಬೇಕು. ಆಗ ಕೋಪ ಹೆಚ್ಚು ಸಮಯವಿರುವುದಿಲ್ಲ.

**ಕೆಲಸಗಳಲ್ಲಿ ಸಹಕಾರ:** ಗಂಡನ ಕೆಲಸಗಳಲ್ಲಿ ಹೆಂಡತಿ , ಹೆಂಡತಿಯ ಕೆಲಸಗಳಲ್ಲಿ ಗಂಡ ಪರಸ್ಪರ ಸಹಕರಿಸಬೇಕು. ಯಾರಿಗೂ ಯಾವುದೂ ಹೊರೆಯಾಗಬಾರದು. ಹೆಂಡತಿಗೆ ಮನೆ ಕೆಲಸದಲ್ಲಿ ಗಂಡನೂ ನೆರವಾಗಬೇಕು. ಮುಖ್ಯವಾಗಿ ಹೆಂಡತಿಗೆ ಮುಟ್ಟಿನ ಸಮಯ ಬಂದಾಗ ಅದನ್ನು ಸ್ವತಃ ಗಂಡನೇ ಅರ್ಥ ಮಾಡಿಕೊಂಡು ಆಕೆಗೆ ವಿಶ್ರಮಿಸಲು ಸಹಕರಿಸಿ, ಆಕೆಯ ಕೆಲಸದಲ್ಲಿ ನೆರವಾಗಬೇಕು.

**ಕ್ಷಮಾ ಗುಣ ಮುಖ್ಯ:** ಇಬ್ಬರಲ್ಲಿ ಯಾರಾದರೂ ತಪ್ಪು ಮಾಡಿದರೇ ಅದನ್ನೇ ಹೇಳಿ ಅವರ ಮನಸ್ಸನ್ನು ನೋಯಿಸುವ ಬದಲು, ತಪ್ಪನ್ನು ಕ್ಷಮಿಸಿ ಇನ್ನೆಂದೂ ಅದರ ಮಾತನ್ನು ತೆಗೆಯದೇ ಮೊದಲಿನಂತೆ ಕಾಣುವುದು ಬಹಳ ಮುಖ್ಯ. ಕ್ಷಮಾಪಣೆ ಕೇವಲ ಬಾಯಿ ಮಾತಿಗೆ ಆಗಿರದೆ ಬದಲಿಗೆ ಅದನ್ನು ಕಾರ್ಯ ರೂಪದಲ್ಲಿ ತೋರಿಸಬೇಕು.

## ರಾಜ್ಯದ ಹಲವು ಜಿಲ್ಲೆಗಳಲ್ಲಿ ಮುಂದುವರೆದ ವರುಣಾರ್ಭಟ, ಜನ ಜೀವನ ಅಸ್ತವ್ಯಸ್ತ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ರಾಜ್ಯದ ಹಲವು ಜಿಲ್ಲೆಗಳಲ್ಲಿ ವರುಣನ ಆರ್ಭಟ ಮುಂದುವರೆದಿದ್ದು, ಮಳೆಯ ಅಬ್ಬರಕ್ಕೆ ಜನ ಜೀವನ ಹೈರಾಣಾಗಿದೆ. ಶಿವಮೊಗ್ಗ, ಬೆಳಗಾವಿ, ಚಿಕ್ಕಮಗಳೂರು, ಉಡುಪಿ, ಕೊಡಗು, ಉತ್ತರ ಕನ್ನಡ, ಹಾವೇರಿ ಮತ್ತಿತರ ಹಲವು ಜಿಲ್ಲೆಗಳಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆ ಮುಂದುವರೆದಿದ್ದು, ಜಲಾಶಯಗಳು ಭರ್ತಿಯಾಗಿವೆ. ಹಳ್ಳ, ಕೊಳ್ಳಗಳು ತುಂಬಿ ಹೊಲ ಗದ್ದೆಗಳು ಜಲಾವೃತಗೊಂಡಿವೆ. ಹಲವು ಜಿಲ್ಲೆಗಳಲ್ಲಿ ಶಾಲಾ ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ.

ಕಾರಾವಾರ, ಹಾಸನ ಮುಂತಾದೆಡೆ ಗುಡ್ಡ ಕುಸಿತ ಉಂಟಾಗಿ ರಸ್ತೆ ಸಂಚಾರಕ್ಕೆ ಅಡಚಣೆಯಾಗಿದೆ. ನಿರಂತರ ಮಳೆಯಿಂದ ಹೆದ್ದಾರಿಯ ಮೇಲೆ ಭಾರಿ ಪ್ರಮಾಣದ ಗುಡ್ಡದ ಮಣ್ಣು ಜರದಿದ್ದು ಅದನ್ನು ತೆರವುಗೊಳಿಸಲಾಗುತ್ತಿದೆ. ಮಲೆನಾಡು ಭಾಗದಲ್ಲಿ ಭಾರಿ ಮಳೆಯಾಗುತ್ತಿದ್ದು ತುಂಗಾ ನದಿ ಅಪಾಯದ ಮಟ್ಟ ಮೀರಿ ಹರಿಯುತ್ತಿದೆ. ಚಿಕ್ಕಮಗಳೂರು, ಶಿವಮೊಗ್ಗದಲ್ಲಿ ಪ್ರವಾಹದ ಪರಿಸ್ಥಿತಿ ಉಂಟಾಗುತ್ತಿದೆ.ಚಿಕ್ಕಮಗಳೂರಿನ ಹಲವೆಡೆ ಶಾಲಾ, ಕಾಲೇಜುಗಳಿಗೆ ರಜೆ ಘೋಷಣೆ ಮಾಡಲಾಗಿದೆ.ಶೃಂಗೇರಿಯಲ್ಲಿ ತುಂಗಾ ಪ್ರವಾಹದಿಂದ ಪಟ್ಟಣದಲ್ಲಿ ಹಲವಾರು ರಸ್ತೆಗಳು ಜಲಾವೃತಗೊಂಡಿವೆ. ಗಾಂದಿ ಮೈದಾನ ಭಾರತಿ ತೀರ್ಥ ರಸ್ತೆಯಲ್ಲಿ ಪ್ರವಾಹದ ನೀರು ಎರಡು ದಿನದಿಂದ ನಿಂತಿದೆ. ಪಶ್ಚಿಮ ಘಟ್ಟದಲ್ಲಿ ಸುರಿಯುತ್ತಿರುವ ಭಾರಿ ಮಳೆಯ ಕಾರಣ ತುಂಗಾ ನದಿಗೆ ಭಾರಿ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದ್ದು, ಜಿಲ್ಲೆಯಲ್ಲಿ ರೆಡ್ ಅಲರ್ಟ್ ಘೋಷಣೆ ಮಾಡಲಾಗುತ್ತಿದೆ. ನದಿ ಭಾಗದ ಹಳ್ಳ ಕೊಳ್ಳಗಳು ತುಂಬಿ ಹರಿಯುತ್ತಿವೆ. ಶಿವಮೊಗ್ಗದ ಗಾಜನೂರಿನಲ್ಲಿರುವ ತುಂಗಾ ಜಲಾಶಯ ಭರ್ತಿಯಾಗಿದ್ದು, 71 ಸಾವಿರ ಕ್ಯೂಸೆಕ್ ನೀರನ್ನು ಹೊರಬಿಡಲಾಗುತ್ತಿದೆ. ಕರಾವಳಿ ಭಾಗದಲ್ಲಿ ಮಳೆರಾಯನ ಅಬ್ಬರ ಮುಂದುವರೆದಿದ್ದು, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ರೆಡ್ ಅಲರ್ಟ್ ಘೋಷಣೆ ಮಾಡಲಾಗಿದೆ. ಹಲವು ಕಡೆಗಳಲ್ಲಿ ಶಾಲಾ ಕಾಲೇಜುಗಳಿಗೆ ರಜೆ ನೀಡಲಾಗಿದೆ. ಚಿಕ್ಕಮಗಳೂರಿನ ಅಂಬಲೆ,ಲಕ್ಯ ಹೋಬಳಿ ಹೊರತುಪಡಿಸಿ ಎಲ್ಲೆಡೆ ಮಳೆ ಜೋರಾಗಿದ್ದು, ಮಕ್ಕಳ ಸುರಕ್ಷತೆ ದೃಷ್ಟಿಯಿಂದ ರಜೆ ನೀಡಲಾಗಿದೆ. ಕೊಡಗಿನಲ್ಲಿ ಕೂಡ ಮಳೆಯ ಅಬ್ಬರ ಮುಂದುವರೆದಿದೆ. ಧಾರಾಕಾರವಾಗಿ ಸುರಿಯುತ್ತಿರುವ ಮಳೆಯಿಂದ ಭಾಗಮಂಡಲ, ನಾಪೋಕ್ಲು ಭಾಗದಲ್ಲಿ ನದಿಗಳು ತುಂಬಿ ಹರಿಯುತ್ತಿವೆ. ಕಾವೇರಿ ನದಿಗೆ ಒಳಹರಿವು ಪ್ರಮಾಣ ಹೆಚ್ಚಾಗಿದೆ. ಕಾವೇರಿ ಜಲನಯನ ಪ್ರದೇಶದ ಕಬಿನಿ, ಹೇಮಾವತಿ, ಹಾರಂಗಿ, ಕೃಷ್ಣರಾಜ ಸಾಗರಕ್ಕೆ ಭಾರಿ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದೆ. ಕಬಿನಿ ಈಗಾಗಲೇ ಭರ್ತಿಯಾಗಿದ್ದು, ಭಾರಿ ಪ್ರಮಾಣದಲ್ಲಿ ನೀರನ್ನು ಹೊರಬಿಡಲಾಗುತ್ತಿದೆ.

## ಯಾರದೊ ಸಂವಿಧಾನ

• ಪ್ರೊ. ಗಂಗಾರಾಂ ಚಂಡಾಲ ಮೈಸೂರು

• ಉದಯವಾಹಿನಿ, ವಿಶೇಷ



ಯಾರದೊ ಸಂವಿಧಾನ
ಯಾರದೊ ಮನುಸ್ಮೃತಿ
ಸ್ವಾತಂತ್ರ್ಯ ಸಮಾನತೆ ಭ್ರಾತೃತ್ವ
ಸಂವಿಧಾನ.
ಗುಲಾಮತನ ಅಸಮಾನತೆ ದಾ
ಯಾದಿ ಮನುಸ್ಮೃತಿ.
ಶ್ರಮಿಕರಿಗೆ ಮೀಸಲು
ಕೊಟ್ಟ ಸಂವಿಧಾನ
ಬುದ್ಧಿವಂತರಿಗೆ ಮೀಸಲು
ಕೊಟ್ಟ ಮನುಸ್ಮೃತಿ
ಅಸ್ಪೃಶ್ಯರಿಗೆ ಮಾರ್ಗದಾತ
ಸಂವಿಧಾನ
ಬ್ರಾಹ್ಮಣರ ಜ್ಯೋತಿದಾತ
ಮನುಸ್ಮೃತಿ
ನಿರುಪಯೋಗಿ ಸಂವಿಧಾನ
ಅಸ್ಪೃಶ್ಯರ ಶತ್ರು
ಉಪಯೋಗಿ ಮನುಸ್ಮೃತಿ
ಬ್ರಾಹ್ಮಣರ ಮಿತ್ರ
ಯಾರ ಕೈಯಲ್ಲಿ ಸಂವಿಧಾನ
ಯಾರ ವಿರುದ್ಧ ಮನುಸ್ಮೃತಿ
ಅಸ್ಪೃಶ್ಯರು ಒಂದಾಗಿ
ಸಂವಿಧಾನ ಎತ್ತಿ ಹಿಡಿಯಿರಿ.

ಜೈಭೀಮ್

## ಮಹಾಭಾರತ
### ಸ್ತ್ರೀಪರ್ವ



• ಹಿಂದಿನ ಸಂಚಿಕೆಯಿಂದ

ಭೀಮನಿಗೆ ಆ ಸ್ಪರ್ಧೆಯ ದಿನ ನೆನಪಾಯಿತು. ರಾಧೇಯನು ಸೂತಪುತ್ರ ಎಂದು ಗೊತ್ತಾದ ಕ್ಷಣವೇ ತಾನು, ''ಕೇಳು ಸೂತಪುತ್ರ, ನೀನು ಅರ್ಜುನನಿಂದ ಕೊಲ್ಲಲ್ಪಡಲೂ ಯೋಗ್ಯನಲ್ಲ. ಕ್ಷತ್ರಿಯನಂತೆ ಬಿಲ್ಲು ಹಿಡಿಯುವ ಯೋಗ್ಯತೆಯಾದರೂ ನಿನಗಿದೆಯೆ ಹೋಗು, ನಿನ್ನ ಯೋಗ್ಯತೆಗನುಗುಣವಾದ ಬಾರುಕೋಲನ್ನು ಹಿಡಿದುಕೋ' ಎಂದಿದ್ದನು. ದುರ್ಯೋಧನನು ಆಗ ಹೇಳಿದ್ದ ಮಾತೂ ನೆನಪಾಯಿತು. ''ಈ ಯುವಕನ ಮಟ್ಟಿಗೆ, ನಿನ್ನ ಅಜ್ಞಾನವನ್ನು ಕಂಡು ನನಗೆ ಕನಿಕರವಾಗುತ್ತಿದೆ. ಕ್ಷತ್ರಿಯನಲ್ಲಿ ಮಾತ್ರವೇ ಕಂಡುಬರುವ ಗುಣಗಳು ಅವನಲ್ಲಿ ಢಾಳವಾಗಿ ಇರುವುದನ್ನು ಕಾಣೆಯಾ ಹುಲಿಯ ಮರಿ ಎಂದಾದರೂ ಹುಲ್ಲೆಯ ಹೊಟ್ಟೆಯಲ್ಲಿ ಹುಟ್ಟುವುದೆ ಇದನು ಕ್ಷತ್ರಿಯನೇ ಇರಬೇಕೆಂದು ನಿನಗೆ ಅನ್ನಿಸುವುದಿಲ್ಲವೆ ನಾನೀಗ ಇವನಿಗೆ ಅಂಗರಾಜ್ಯಾಭಿಷೇಕವನ್ನು ಮಾಡುತ್ತೇನೆ. ಆದರೆ ಇವನು ಇಷ್ಟಕ್ಕೆ ಮಾತ್ರವಲ್ಲ, ಇಡೀ ಲೋಕಕ್ಕೇ ರಾಜನಾಗುವ ಅರ್ಹತೆಯುಳ್ಳವನೆಂದು ನನಗೆ ಗೊತ್ತು. ಮಹಾನ್ ಆಗಲೆಂದೇ ಹುಟ್ಟಿದವನು ಇವನು. ಅವನ ಯೋಗ್ಯತೆಯನ್ನರಿಯುವ ಯೋಗ್ಯತೆ ನಿನಗಿಲ್ಲ ಅಷ್ಟೆ'' ದುರ್ಯೋಧನನ ಮಾತುಗಳು ಭೀಮನನ್ನು ಸುಡುತೊಡಗಿದವು. ಹೌದು, ರಾಧೇಯನ ಯೋಗ್ಯತೆಯನ್ನರಿತುಕೊಳ್ಳುವ ಯೋಗ್ಯತೆಯೇ ತಮಗೆ ಇರಲಿಲ್ಲ. ಭೀಮನು ದೇಹವು ಚೂರುಚೂರಾಗುತ್ತಿದೆಯೇನೋ ಎಂಬಂತೆ ಅಳತೊಡಗಿದನು. ಒಂದೂ ಮಾತನ್ನು ಆಡಲಿಲ್ಲ. ಕೇವಲ ಮೂಕವೇದನೆಯೊಂದನ್ನು ಬಿಟ್ಟು ಅಲ್ಲಿ ಮತ್ತೇನೂ ಇರಲಿಲ್ಲ. ನಕುಲನಿಗೆ ತಾನು ರಾಧೇಯನೊಂದಿಗೆ ಮಾಡಿದ ದ್ವಂದ್ವಯುದ್ಧದ ನೆನಪಾಯಿತು. ರಾಧೇಯನೆಂದಿದ್ದನು: ಒಂದು ದಿನ ನೀನು ನನ್ನೊಡನೆ ಮಾಡಿದ ಈ ದ್ವಂದ್ವಯುದ್ಧವನ್ನು ನೆನೆದು ಹೆಮ್ಮೆಪಡುತ್ತೀ. ರಾಧೇಯ ನನ್ನನ್ನು ಅಪಮಾನಿಸಿದ ಎಂದೂ ಹೆಮ್ಮೆಪಡುತ್ತೀ. ಹೌದು, ಅದೇ ಅಲ್ಲವೆ ನೆನಪಿನ ಐಶ್ವರ್ಯ, ಈಗ ಉಳಿದಿರುವುದು ಸಹದೇವನಿಗೂ ರಾಧೇಯನೊಂದಿಗೆ ಮಾಡಿದ ಯುದ್ಧವನ್ನು ಮರೆಯಲಾಗಲಿಲ್ಲ. ಅವನ ತುಟಿಯ ತಿರಸ್ಕಾರದ ಕೊಂಕು, ಆ ಶೌರ್ಯದ ಹೆಮ್ಮೆ ಆ ಧೀರ ಗಂಭೀರ ನಿಲುವು ಸೂತಪುತ್ರನೇ ಅವನು ಪಾಂಡವರೆಲ್ಲರೂ ದುಃಖಾಂಬುಧಿಯಲ್ಲಿ ಮುಳುಗಿ ಹೋದರು.

ಶೈತ್ಯೋಪಚಾರದ ಫಲವಾಗಿ ಕುಂತಿ ಎಚ್ಚರಗೊಂಡಳು. ಪ್ರಥಮಬಾರಿಗೆ ಯುಧಿಷ್ಠಿರ ತಾಯಿಗೆ ಗಮನವನ್ನೇ ಕೊಡಲಿಲ್ಲ. ತಮಗೂ ರಾಧೇಯನಿಗೂ ಇಷ್ಟೊಂದು ಅನ್ಯಾಯ ಮಾಡಿದ ಅವಳ ಕಡೆಗೆ ನೋಡುವುದೂ ಬೇಡವೆನಿಸಿತು. ಕೃಷ್ಣಾರ್ಜುನರ ಬಳಿ ಹೋಗಿ ಕುಳಿತ. ರಾಧೇಯ ಸತ್ತದಿನದ ಒಂದೊಂದು ಘಳಿಗೆಯೂ ನೆನಪಾಯಿತು. ರಾಧೇಯನ್ನು ತಾನು ಸೂತಪುತ್ರ ಎಂದು ಕರೆದದ್ದು ನೆನಪಾಯಿತು. ಈಗ ತಾಯಿಯ ಕಡೆಗೆ ತಿರುಗಿ, ''ರಾಧೇಯನಿಗೆ ತಾನಾರೆಂದು ಗೊತ್ತಿತ್ತೆ'' ಎಂದು ಕೇಳಿದ.

ಮುಂದುವರಿಯುವುದು...

## ಶ್ರೀಮಾತೆ ಶಾರದಾದೇವಿ (ಕೋಂ ಶ್ರೀರಾಮಕೃಷ್ಣ ಪರಮಹಂಸರು) 104ನೇ ವರ್ಷದ ಪುಣ್ಯಸ್ಮರಣೆ



ಕಲಾ ಸಾಹಿತ್ಯ
ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

• ಉದಯವಾಹಿನಿ, ವಿಶೇಷ

ಶ್ರೀಮಾತೆ ಶಾರದಾದೇವಿ ರವರು ಕೋಲ್ಕತ್ತಾದಲ್ಲಿ 1853 ಡಿಸೆಂಬರ್ 22 ರಂದು ತಂದೆ ರಾಮಚಂದ್ರ ಮುಖರ್ಜೀ, ತಾಯಿ ಶ್ಯಾಮಸುಂದರ ದೇವಿ ರವರ ಮಗಳಾಗಿ ಜನಿಸುತ್ತಾರೆ. ಅವರದು ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬವಾಗಿತ್ತು. ಬಡವರಾಗಿದ್ದರೂ ಸುಸಂಸ್ಕೃತರಾಗಿದ್ದು ಸರಳ ಬದುಕು ಅವರದಾಗಿತ್ತು. ದೇವರು, ಧರ್ಮ, ಆಧ್ಯಾತ್ಮ ವಿಚಾರಗಳಿಂದ ಕೂಡಿದ ಸದಾಚಾರ ಸಂಪನ್ನರಾಗಿದ್ದರು. ಶಾರದಾದೇವಿಗೆ ಐದು ವರ್ಷಗಳು ಆಗಿದ್ದಾಗ ಶ್ರೀ ರಾಮಕೃಷ್ಣ ಪರಮಹಂಸರೊಂದಿಗೆ ವಿವಾಹವಾಯಿತು. ರಾಮಕೃಷ್ಣ ರವರಿಗೆ ಆಗ 25 ವರ್ಷಗಳು, ಅಂದಿನ ದಿನಗಳಲ್ಲಿ ಬಾಲ್ಯವಿವಾಹ ರೂಢಿಯಲ್ಲಿದ್ದಿತ್ತು. ವಿವಾಹದ ನಂತರ ಶ್ರೀರಾಮಕೃಷ್ಣರು ದಕ್ಷಿಣೇಶ್ವರಕ್ಕೆ ಬಂದು ತಮ್ಮ ಅಧ್ಯಾತ್ಮ ಸಾಧನೆ ಯನ್ನು ಮುಂದುವರಿಸಿದರು. ಜನರು ಅವರ ಅನನ್ಯ ಸಾಧನೆ ಸ್ವರೂಪವನ್ನು ಅರ್ಥ ಮಾಡಿಕೊಳ್ಳಲಾರದೆ ಅವರಿಗೆ ಹುಚ್ಚು ಹಿಡಿದಿದೆ ಎಂದು ಅಪಪ್ರಚಾರ ಮಾಡಿದರು.

ಈ ವಿಷಯ ತಿಳಿದ ಶಾರದಾದೇವಿ ಪತಿಯ ಸೇವೆ ಮಾಡಲು ದಕ್ಷಿಣೇಶ್ವರಕ್ಕೆ ಹೋದರು. ಶ್ರೀರಾಮಕೃಷ್ಣರು ಪತ್ನಿಯನ್ನು ಕುರಿತು ಜಗತ್ತಿನ ಎಲ್ಲಾ ಹೆಣ್ಣುಮಕ್ಕಳು ಜಗನ್ಮಾತೆಯ ಸ್ವರೂಪ ಎಂದು ನಾನು ತಿಳಿದಿದ್ದೇನೆ.

ನೀನು ಪ್ರಾಪಂಚಿಕ ಸುಖ ಬಯಸಿ ನನ್ನನ್ನು ಐಹಿಕ ಆಕರ್ಷಣೆಯ ಬಲೆಗೆ ಬೀಳುವಂತೆ ಮಾಡಲು ಬಂದಿರುವೆಯಾ ಎಂದು ಕೇಳುತ್ತಾ ಅದಕ್ಕೆ ಅವರು ಇಲ್ಲಾ! ನಿಮ್ಮನ್ನ ಇಹದ ಆಕರ್ಷಣೆಗಳತ್ತ ಏಕೆ ಸೆಳೆಯಲಿ ನಾನು ಇಲ್ಲಿಗೆ ಬಂದಿರುವುದು ನಿಮ್ಮ ಕಠಿಣ ಆಧ್ಯಾತ್ಮಿಕ, ಯೋಗ ಸಾಧನೆಯಲ್ಲಿ ನಿಮಗೆ ಸಹಾಯ ಮಾಡುವುದಕ್ಕಾಗಿ ಎಂದು ಹೇಳುತ್ತಾ,ಪತಿಯ ಪಾದಗಳಿಗೆ ನಮಸ್ಕರಿಸಿದರು.ಆಗ ರಾಮಕೃಷ್ಣರು ಈಗ ನಾನು ನಿನ್ನನ್ನು ಜಗಜ್ಜನನಿಯ ಸ್ವರೂಪವೆಂದು ತಿಳಿಯುತ್ತೇನೆ ಎಂದರು.

**ಅಧ್ಯಾತ್ಮ ಸಾಧನೆ ಯನ್ನು ಮುಂದುವರಿಸಿ**

16 ವರ್ಷದ ಶಾರದಾದೇವಿ ವೈರಾಗ್ಯ ಜೀವನವನ್ನು ಆರಿಸಿಕೊಂಡು ಸುಮಾರು ಹದಿ ಮೂರು ವರ್ಷಗಳ ಕಾಲ ತನ್ನ ಪತಿಯೊಡನೆ ಇದ್ದು ಶ್ರದ್ಧಾ ಭಕ್ತಿಯಿಂದ ಪತಿ ಸೇವೆ ಮಾಡಿದರು. ಬಾಲ್ಯದಿಂದಲೂ ಮೃದುಸ್ವಭಾವದ, ಸರಳ ಸಜ್ಜನಿಕೆಯ ಸಾಕಾರವಾಗಿದ್ದರು. ಅವರ ಹೃದಯ,ಪ್ರೀತಿ,ದಯೆ, ವಿಶ್ವಾಸ, ಔದಾರ್ಯ ಎಲ್ಲಾ ಮಾನವೀಯ ಗುಣಗಳಿಂದ ತುಂಬಿತ್ತು. ಅವರಲ್ಲಿ ಎಣೆಯಿಲ್ಲದ ಮಾತೃವಾತ್ಸಲ್ಯ, ಭಕ್ತಿ, ತಾಳ್ಮೆ ಮತ್ತು ಅಧ್ಯಾತ್ಮ ಜ್ಞಾನ ಎದ್ದು ತೋರುತ್ತಿತ್ತು. ಶ್ರೀರಾಮಕೃಷ್ಣರ ಭಕ್ತರು ಅವರನ್ನು ಶ್ರೀಮಾತೆ ಎಂದು ಗೌರವಿಸುತ್ತಿದ್ದರು. ಮಾತೃ ಹೃದಯದ ಕರುಣಾ ಮೂರ್ತಿಯಾಗಿದ್ದ ಶಾರದಾದೇವಿ ಜಗತ್ತಿಗೆ ತಾಯಿಯಂತಿದ್ದರು. ಶಾರದಾದೇವಿಯವರು ಯಾವ ಪ್ರಚಾರ, ಆಡಂಬರಗಳಿಲ್ಲದೇ ದೀನದಲಿತರಿಗೆ ಆಸರೆಯಾಗಿ,ಅಜ್ಞಾನದ ಅಂಧಕಾರದಲ್ಲಿದ್ದವರಿಗೆ ಕೈದೀವಿಗೆಯಾಗಿ,ದಾರಿ ತಪ್ಪಿದವರಿಗೆ ಮಾರ್ಗದರ್ಶಕರಾಗಿ,


ಉದಯವಾಹಿನಿ ಚಿತ್ರ

ಅಸಂಖ್ಯಾತ ಜನರಿಗೆ ಆತ್ಮೋದ್ಧಾರದ ಮಾರ್ಗವನ್ನು ತೋರಿದರು. ಅವರ ನಿಸ್ವಾರ್ಥ ಬದುಕು ಅವರು ತಮಗಾಗಿ ಏನನ್ನೂ ಅಪೇಕ್ಷಿಸಲಿಲ್ಲ ಏನನ್ನೂ ಸಂಗ್ರಹಿಸಲಿಲ್ಲ ಬಡ ಜನತೆಯ ನೋವನ್ನು ನಿವಾರಿಸಲು ಹಗಲಿರುಳೂ ಶ್ರಮಿಸಿದರು. ಅವರ ಬೋಧನೆಯ ನುಡಿಗಳು ಹೀಗಿವೆ: ಮಗೆ ಮನಸ್ಸಿನ ಶಾಂತಿ ಬೇಕಿದ್ದರೆ ಅನ್ಯರ ತಪ್ಪು ಗಳತ್ತ ದೃಷ್ಟಿ ಹರಿಸಬೇಡಿ, ಬದಲಾಗಿ ನಿಮ್ಮ ದೋಷಗಳತ್ತ ಗಮನಹರಿಸಿ,ಇಡೀ ಜಗತ್ತನ್ನೇ ತನ್ನದಾಗಿಸಿಕೊಳ್ಳುವ ಪ್ರಯತ್ನ ಮಾಡಿರಿ. ಈ ಜಗತ್ತಿನಲ್ಲಿ ಯಾರೂ ಅಪರಿಚಿತರಲ್ಲ.ಇಡೀ ವಿಶ್ವವೇ ನಿಮ್ಮದಾಗಿದೆ. ಐಹಿಕ ಪ್ರಪಂಚದ ಸುಖ ಭೋಗಗಳತ್ತ ನಿಮ್ಮ ಸಂಬಂಧ ಕಡಿಮೆಯಾದ ಹಾಗೆ ನೀವು ಮಾನಸಿಕ ಶಾಂತಿಯ ಸುಖವನ್ನು ಅನುಭವಿಸಬಹುದಾಗಿದೆ.

ಪ್ರೀತಿ ಹಾಗು ಭಕ್ತಿ ಇಲ್ಲದೇ ಯಾರೂ ಭಗವಂತನನ್ನು ಕಾಣಲಾರರು.ಈ ಮನಸ್ಸು ಮದವೇರಿದ ಆನೆಯಂತೆ ಇದು ಗಾಳಿಯಷ್ಟೇ ಚಂಚಲ. ಆದ್ದರಿಂದ ಸದಾ ವಿವೇಚನಾ ಪರನಾಗಿರಬೇಕು.ಭಗವಂತನ ಸಾಕ್ಷಾತ್ಕಾರಕ್ಕಾಗಿ ಸರ್ವ ಪ್ರಯತ್ನ ಮಾಡಬೇಕು. ಗಂಡ ಹೆಂಡತಿ ಎಲ್ಲಾ ಈ ಶರೀರದ ಮಾಯಯೆಡ್ಡಿದ ಸಂಕೋಲೆಗಳು. ಈ ಶರೀರದ ಮೇಲಿನ ಮೋಹ,ಲಾಲಸೆ, ಶರೀರವೇ ತಾನು ಎಂಬ ಭಾವನೆ ಹೋಗಬೇಕು. ಸುಟ್ಟ ಮೇಲೆ ಮೂರು ಹಿಡಿ ಬೂದಿಯಾಗುವ ಈ ಶರೀರದ ಮೇಲೆ ಯಾಕಿಷ್ಟು ಮೋಹಎಂಬ ಬೋಧನೆಯನ್ನು ಜಗತ್ತಿಗೆ ಸಾರಿದ್ದಾರೆ.

ಶ್ರೀಮಾತೆ ಶಾರದಾದೇವಿ ರವರು ಆದರ್ಶ ತಪಸ್ವಿನಿ, ಆದರ್ಶಸತಿ, ಹಾಗೂ ಆದರ್ಶ ಮಾತೆ. ಬಡವ-ಬಲ್ಲಿದ, ಜಾತಿಯಲ್ಲಿ ಮೇಲು-ಕೀಳು ಎಂಬ ಯಾವ ವ್ಯತ್ಯಾಸವನ್ನೂ ತೋರದೆ ಎಲ್ಲರನ್ನೂ ಸರಿಸಮಾನವಾಗಿ ಕಂಡು ಎಲ್ಲರ ಸುಖ-ದುಃಖಗಳಿಗೆ ಸ್ಪಂದಿಸಿದರು.

ಅವರಲ್ಲಿ ಲವಲೇಶವೂ ಅಹಂಕಾರ ವಿರಲಿಲ್ಲ. ಲೋಕಮಾತೆ ಶಾರದಾದೇವಿರವರು 1920 ಜುಲೈ 20ರಂದು ತನ್ನ 67ನೇ ವಯಸ್ಸಿನಲ್ಲಿ ಇಹ ಲೋಕವನ್ನಗಲಿ ಪ್ರಕೃತಿಯಲ್ಲಿ ಲೀನವಾದರು. ಶ್ರೀಮಾತೆ ಶಾರದಾದೇವಿಯವರ ಆದರ್ಶಗಳು ಪ್ರಸ್ತುತ ಆಸೆ ದುರಾಸೆಗಳನ್ನು ಇಟ್ಟುಕೊಂಡಿರುವ ಕೆಲವು ಕುಟುಂಬ ವರ್ಗದವರಿಗೆ ಮಿಗಿಲಾಗಿ ಕೆಲವು ಹೆಣ್ಣುಮಕ್ಕಳಿಗೆ ಅತ್ಯವಶ್ಯಕವಾಗಿ ಅಗತ್ಯವೆನಿಸುತ್ತದೆ ಹಾಗೂ ಅವರ ಆದರ್ಶಗಳು ಕುಟುಂಬಕ್ಕೆ,ಸಮಾಜಕ್ಕೆ, ರಾಷ್ಟ್ರಕ್ಕೆ ಹಾಗೂ ಇಡೀ ಜಗತ್ತಿಗೆ ಬೆಳಕು ಚೆಲ್ಲುವ ಬೋಧನೆಗಳು ಆಗಿರುತ್ತವೆ. ನಿಜಕ್ಕೂ ಇಂತಹ ಶ್ರೇಷ್ಠ ಶ್ರೀಮಾತೆ ಶಾರದಾದೇವಿಯವರ ಆದರ್ಶಗಳನ್ನು ಸ್ಮರಿಸಿ ನೆನೆಯುತ್ತಾ ಅವರ 104 ನೇ ವರ್ಷದ ಪುಣ್ಯಸ್ಮರಣೆಯ ದಿನವಾದ ನಾವುಗಳು ಶ್ರದ್ಧಾಭಕ್ತಿಯಿಂದ ಅವರ ಆತ್ಮಕ್ಕೆ ಶಾಂತಿ ಮತ್ತು ಸದ್ಗತಿ ದೊರಕಲಿ ಎಂದು ಆ ಭಗವಂತನಲ್ಲಿ ಪ್ರಾರ್ಥಿಸೋಣ.

# ವೈದ್ಯರ ಸಮಸ್ಯೆ: ರೋಗಿಗಳಿಗೆ ಸಕಾಲಕ್ಕೆ ಸಿಗದ ಚಿಕಿತ್ಸೆ

## ವೈದ್ಯರ ಕೊರತೆ ಹೆಚ್ಚಿದೆ, ಇದರಿಂದಾಗಿ ಜನರು ಚಿಕಿತ್ಸೆ ಪಡೆಯಲು ಗಂಟೆಗಟ್ಟಲೇ ಸಾಲುಗಟ್ಟಿ ನಿಲ್ಲಬೇಕಾದ ಸ್ಥಿತಿ

• ಉದಯವಾಹಿನಿ ಬ್ಯಾಡಗಿ

ಇಲ್ಲಿಯ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಹಲವು ಸೌಕರ್ಯಗಳಿಂದ ವಂಚಿತವಾಗಿದೆ. ಆಸ್ಪತ್ರೆಯ ಬಹುತೇಕ ವೈದ್ಯರು ದೂರದ ರಾಣೆಬೆನ್ನೂರು ಹಾಗೂ ದಾವಣಗೆರೆಯಲ್ಲಿ ವಾಸವಿದ್ದು, ಬೆಳಿಗ್ಗೆ ಕರ್ತವ್ಯಕ್ಕೆ ಹಾಜರಾಗಿ ಸಂಜೆ ಹೊರಟು ಹೋಗುತ್ತಿದ್ದಾರೆ. ಸಂಜೆಯಿಂದ ಮರುದಿನ ಬೆಳಿಗ್ಗೆವರೆಗೂ ತುರ್ತು ಸಂದರ್ಭದಲ್ಲಿ ವೈದ್ಯರು ಸಿಗದಿದ್ದರಿಂದ, ಜನರು ಪ್ರತಿ ದಿನವೂ ಸಮಸ್ಯೆ ಎದುರಿಸುತ್ತಿದ್ದಾರೆ.

100 ಬೆಡ್ ಸಾಮರ್ಥ್ಯದ ಆಸ್ಪತ್ರೆ ಇದಾಗಿದ್ದು, 86 ಕಾಯಂ ಸಿಬ್ಬಂದಿ ಹುದ್ದೆಗಳು ಮಂಜೂರಾಗಿವೆ. ಆದರೆ, ಸದ್ಯ 38 ಮಂದಿ ಮಾತ್ರ ಕೆಲಸ ಮಾಡುತ್ತಿದ್ದಾರೆ. ಸಿಬ್ಬಂದಿ ಕೊರತೆಯಿಂದಾಗಿ, ಲಭ್ಯವಿರುವ ಸಿಬ್ಬಂದಿ ಮೇಲೆ ಒತ್ತಡ ಹೆಚ್ಚಾಗಿದೆ. ಇದರ ಪರಿಣಾಮ ಜನರ ಮೇಲಾಗುತ್ತಿದೆ. ನಿತ್ಯ 200ಕ್ಕೂ ಹೆಚ್ಚು ಮಕ್ಕಳು ಸೇರಿದಂತೆ ಸುಮಾರು 600 ಮಂದಿ ಆಸ್ಪತ್ರೆಗೆ ಭೇಟಿ ನೀಡುತ್ತಿದ್ದಾರೆ. ವೈದ್ಯರ ಕೊರತೆ ಹಾಗೂ ಸೌಕರ್ಯಗಳಿಂದ ಅಲಭ್ಯತೆಯಿಂದ ಹೊರ ರೋಗಿಗಳ ವಿಭಾಗದಲ್ಲಿ ಜನರು ಸಾಕಷ್ಟು ತೊಂದರೆ ಎದುರಿಸುತ್ತಿದ್ದಾರೆ. ತಮ್ಮ ಮೇಲೆ ಹೆಚ್ಚು ಒತ್ತಡವಿರುವುದಾಗಿ ಹೇಳುತ್ತಿರುವ ವೈದ್ಯರು, ಸಮರ್ಪಕ ಚಿಕಿತ್ಸೆ ನೀಡುತ್ತಿಲ್ಲವೆಂದು ಜನರು ಆರೋಪಿಸುತ್ತಿದ್ದಾರೆ. ವೈದ್ಯರ ಕೊರತೆ ಹೆಚ್ಚಿದೆ. ಇದರಿಂದಾಗಿ ಜನರು, ಚಿಕಿತ್ಸೆ ಪಡೆಯಲು ಗಂಟೆಗಟ್ಟಲೇ ಸಾಲುಗಟ್ಟಿ ನಿಲ್ಲಬೇಕಾದ ಸ್ಥಿತಿ ಇದೆ. ಮಕ್ಕಳು, ವೃದ್ಧರೂ ಹೆಚ್ಚಿನ ಸಮಸ್ಯೆ ಅನುಭವಿಸುತ್ತಿದ್ದಾರೆ.ಸದ್ಯ ಆಸ್ಪತ್ರೆಯಲ್ಲಿ 10 ವೈದ್ಯರಿದ್ದಾರೆ. ಇದರಲ್ಲಿ ಹಲವರು ರಾಣೆಬೆನ್ನೂರು ಹಾಗೂ ದಾವಣಗೆರೆಯಲ್ಲಿ ಮನೆ ಮಾಡಿದ್ದಾರೆ. ಬೆಳಿಗ್ಗೆ ಆಸ್ಪತ್ರೆಗೆ ಬರುವ ಅವರು, ಸಂಜೆ ವಾಪಸು ತಮ್ಮೂರಿಗೆ ಹೊರಟು ಹೋಗುತ್ತಾರೆ. ಸಂಜೆಯಿಂದ ಮರುದಿನ ಬೆಳಿಗ್ಗೆಯವರೆಗೆ ಒಬ್ಬ ವೈದ್ಯರು ಮಾತ್ರ ಆಸ್ಪತ್ರೆಯಲ್ಲಿರುತ್ತಾರೆ. ತುರ್ತು ಸಂದರ್ಭದಲ್ಲಿ ಯಾರಾದರೂ ರೋಗಿಗಳು ಬಂದರೆ, ಅವರಿಗೆ ಸೂಕ್ತ ಚಿಕಿತ್ಸೆ ನೀಡಲು ಸಾಧ್ಯವಾಗುತ್ತಿಲ್ಲ.

ಸ್ಪತ್ರೆಯ ಆವರಣದಲ್ಲಿ ಜನೌಷಧಿ ಮತ್ತು ಉಚಿತ ಔಷಧ ವಿತರಣಾ ಕೇಂದ್ರಗಳಿವೆ. ಆಸ್ಪತ್ರೆಯ ವೈದ್ಯರು, ಹೊರಗಿನಿಂದ ಔಷಧಿ ತರುವಂತೆ ಚೀಟಿ ಬರೆದುಕೊಡುತ್ತಿದ್ದಾರೆ. ವೈದ್ಯರು ಬರೆದುಕೊಟ್ಟ ಹೆಚ್ಚಿನ ಬೆಲೆಯ ಔಷಧಿಯನ್ನು ಜನರು ಖರೀದಿಸಬೇಕಾದ ಸ್ಥಿತಿ ಇದೆ. ಚೀಟಿ ಬಗ್ಗೆ ವೈದ್ಯರನ್ನು ಪ್ರಶ್ನಿಸಿದರೆ, ಔಷಧಿಗಳ ಕೊರತೆ ಇರುವುದಾಗಿ ಹೇಳುತ್ತಿದ್ದಾರೆ. ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯ ಆಂತರಿಕ ಕೆಲಸಕ್ಕೆ ಸಿಬ್ಬಂದಿ ಮೇಲೆ ಒತ್ತಡ ಹೆಚ್ಚಿದೆ. ಇದೇ ಕಾರಣಕ್ಕೆ ಐದು ಶುಶ್ರೂಷಕಿಯರು ವರ್ಗಾವಣೆ ಕೋರಿ ಈಗಾಗಲೇ ಅರ್ಜಿ ಸಲ್ಲಿಸಿದ್ದಾರೆ. ಡೆಂಗಿ ಬಾಧಿತರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಜೊತೆಗೆ ತಾಲ್ಲೂಕಿನಲ್ಲಿ ಇಲಿ ಜ್ವರ ಸಹ ಕಾಣಿಸಿಕೊಂಡಿದೆ. ಕದರಮಮಡಲಗಿ, ಶಿಡೇನೂರ, ಕೆರವಡಿ, ತಡಸಮಂತಾದ ಗ್ರಾಮಗಳಲ್ಲಿ ಜ್ವರದಿಂದ ಹೆಚ್ಚು ಜನರು ಬಳಲುತ್ತಿದ್ದಾರೆ. ಈ ಪರಿಸ್ಥಿತಿಯಲ್ಲಿ ಆಸ್ಪತ್ರೆಯಲ್ಲಿ ವೈದ್ಯರು ಇರುವಂತೆ ನೋಡಿಕೊಳ್ಳುವುದು ಅಗತ್ಯವಾಗಿದೆ ಎಂದು ಜನರು ಆಗ್ರಹಿಸುತ್ತಿದ್ದಾರೆ.

ಡಾ. ಪುಟ್ಟರಾಜ, ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿಲಭ್ಯವಿರುವ ಸೌಕರ್ಯ ಹಾಗೂ ಸಿಬ್ಬಂದಿ ಬಳಸಿಕೊಂಡು ಜನರಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಈ ತಾಲ್ಲೂಕು ಆಸ್ಪತ್ರೆಗೆ ಮೂರು ಬಾರಿ ಕಾಯಕಲ್ಪ ಪ್ರಶಸ್ತಿ ಬಂದಿದೆರಾಜಣ್ಣ, ಬ್ಯಾಡಗಿ ನಿವಾಸಿಸಂಜೆಯ ನಂತರ ವೈದ್ಯರು ಲಭ್ಯವಿಲ್ಲದ ಕಾರಣ ಸಾರ್ವಜನಿಕರಿಗೆ ತೊಂದರೆಯಾಗಿದೆ. ಆಸ್ಪತ್ರೆಯ ಎಲ್ಲಾ ವೈದ್ಯರು ಪಟ್ಟಣದಲ್ಲಿಯೇ ಮನೆ ಮಾಡಿಕೊಂಡು ವಾಸವಿರುವಂತೆ ಮಾಡಬೇಕು.

ಖಾಸಗಿ ಆಸ್ಪತ್ರೆಗೆ ಮೊರೆ ಸದ್ಯ ಡೆಂಘಿ, ಚಿಕೂನ್‌ಗುನ್ಯಾ ಜ್ವರ ಹಾಗೂ ಇತರೆ ಆರೋಗ್ಯ ಸಮಸ್ಯೆ ಎದುರಿಸುತ್ತಿರುವವರ ಸಂಖ್ಯೆ ಹೆಚ್ಚಿದೆ. ಆಸ್ಪತ್ರೆಯಲ್ಲಿ ಮಕ್ಕಳ ತಜ್ಞರ ಕೊರತೆ ಇದ್ದು, ಮಕ್ಕಳಿಗೆ ಸೂಕ್ತ ಚಿಕಿತ್ಸೆ ಲಭ್ಯವಾಗುತ್ತಿಲ್ಲ. ಬಡ ಹಾಗೂ ಮಧ್ಯಮ ವರ್ಗದ ಜನರು ಅನಿವಾರ್ಯವಾಗಿ ತಮ್ಮ ಮಕ್ಕಳನ್ನು ಖಾಸಗಿ ಆಸ್ಪತ್ರೆಗೆ ಕರೆದೊಯ್ಯುತ್ತಿದ್ದಾರೆ.


ಉದಯವಾಹಿನಿ ಚಿತ್ರ

### ವಸತಿ ಗೃಹಗಳ ಕೊರತೆ

ಆಸ್ಪತ್ರೆ ಆವರಣದಲ್ಲಿ ಶುಶ್ರೂಷಕಿಯರು ಹಾಗೂ ವೈದ್ಯರಿಗೆ ಎರಡು ವಸತಿ ಗೃಹಗಳಿವೆ. ವಸತಿಗೃಹಗಳ ಕೊರತೆಯಿಂದಾಗಿ ಕೆಲ ವೈದ್ಯರು, ಬೇರೆ ಊರುಗಳಲ್ಲಿ ನೆಲೆಸಿದ್ದಾರೆ. ಸಿಬ್ಬಂದಿ ಸಂಖ್ಯೆಗೆ ಅನುಗುಣವಾಗಿ ವಸತಿ ಗೃಹಗಳ ನಿರ್ಮಾಣ ಮಾಡಬೇಕೆಂಬುದು ಸಿಬ್ಬಂದಿ ಒತ್ತಾಯಿಸುತ್ತಿದ್ದಾರೆ.

**ಆಸ್ಪತ್ರೆಯಲ್ಲಿ ಮಕ್ಕಳ ತಜ್ಞರ ಕೊರತೆ**

# ಜು. 31ರಂದು ಕಾನಿಪದಿಂದ ಪತ್ರಿಕಾ ದಿನಾಚರಣೆ

• ಉದಯವಾಹಿನಿ ಮುದ್ದೇಬಿಹಾಳ


ಉದಯವಾಹಿನಿ ಚಿತ್ರ

ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದಿಂದ ಜುಲೈ 31ರಂದು ಪಟ್ಟಣದ ಅಭ್ಯುದಯ ಕಾಲೇಜಿನಲ್ಲಿ ಪತ್ರಿಕಾ ದಿನಾಚರಣೆ ಕಾರ್ಯಕ್ರಮ ಏರ್ಪಡಿಸಲು ಇಲ್ಲಿನ ಪ್ರವಾಸಿ ಮಂದಿರದಲ್ಲಿ ಸಂಘದ ಅಧ್ಯಕ್ಷ ಮುತ್ತು ವಡವಡಗಿ ಅಧ್ಯಕ್ಷತೆಯಲ್ಲಿ ನಡೆದ ಸರ್ವ ಸದಸ್ಯರ ಸಾಮಾನ್ಯ ಸಭೆಯಲ್ಲಿ ತೀರ್ಮಾನಿಸಲಾಯಿತು.

ಪ್ರತಿ ವರ್ಷ ಜುಲೈ ಒಂದರಂದು ಪತ್ರಿಕಾ ದಿನಾಚರಣೆ ಆಚರಿಸುವ ಸಂಪ್ರದಾಯ ಇದೆ. ಈ ತಿಂಗಳ ಪೂರ್ತಿ ದಿನಾಚರಣೆ ಆಚರಿಸಲು ಅವಕಾಶ ಇರುವುದರಿಂದ ಈ ತಿಂಗಳ ಕೊನೆಯ ದಿನ ವಿಶಿಷ್ಟವಾಗಿ ಆಚರಿಸಲು ಸದಸ್ಯರು ಚರ್ಚೆ ನಡೆಸಿ ಒಪ್ಪಿಗೆ ನೀಡಿದರು.

ಜು.28ರಂದು ವಿಜಯಪುರ ನಗರದಲ್ಲಿ ಜಿಲ್ಲಾ ಮಟ್ಟದ ಪತ್ರಿಕಾ ದಿನಾಚರಣೆ ಆಚರಿಸಲಿರುವ ಹಿನ್ನೆಲೆ ಎಲ್ಲಾ ಸದಸ್ಯರು ಅಲ್ಲಿನ ಕಾರ್ಯಕ್ರಮಕ್ಕೆ ಹೋಗಬೇಕಿರುವುದರಿಂದ 31 ಸೂಕ್ತ ದಿನ ಎಂದು ತೀರ್ಮಾನಿಸಲಾಯಿತು. ತಾಲ್ಲೂಕಿನ ಮೂವರು ಹಿರಿಯ ಮತ್ತು ಇಬ್ಬರು ಯುವ ಪತ್ರಕರ್ತರು ಸೇರಿ ಐವರನ್ನು ತಾಲ್ಲೂಕು ಮಟ್ಟದ ಪ್ರಶಸ್ತಿ ನೀಡಿ ಗೌರವಿಸಲು ತೀರ್ಮಾನಿಸಿದ ಹಿನ್ನೆಲೆ ಹಿರಿಯ ಸದಸ್ಯರಾದ ಅಲ್ಲಾಭಕ್ಷ ನಿಡಗುಂದಿ, ಸಿದ್ದು ಚಲವಾದಿ, ಬಸವರಾಜ ಹುಲಗಣ್ಣೆ, ಪುಂಡಲೀಕ ಮುರಾಳ ಮತ್ತು ಚೇತನ್ ಶಿವಸಿಂಪಿ ಇವರನ್ನು ಪ್ರಶಸ್ತಿಗೆ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಹಾಲಿ ಮತ್ತು ಮಾಜಿ ಶಾಸಕರು ಸೇರಿ ಹಲವು ಗಣ್ಯರನ್ನು ಆಹ್ವಾನಿಸಲು, ಪಾಪು ಪ್ರಶಸ್ತಿ ಪಡೆದಿರುವ ಸಂಘದ ಜಿಲ್ಲಾಧ್ಯಕ್ಷ ಸಂಗಮೇಶ ಚೂರಿ ಅವರನ್ನು ವಿಶೇಷವಾಗಿ ಸನ್ಮಾನಿಸುವ, ಪ್ರತಿಭಾ ಪುರಸ್ಕಾರ ನೀಡುವ ಮತ್ತು ಪತ್ರಿಕೋದ್ಯಮದ ಕುರಿತು ಉಪನ್ಯಾಸ ಏರ್ಪಡಿಸುವ ಕುರಿತು ಚರ್ಚಿಸಿ ಇನ್ನೊಂದು ಸಭೆಯಲ್ಲಿ ಈ ವಿಷಯಗಳನ್ನು ಅಂತಿಮಗೊಳಿಸಲು ನಿರ್ಧರಿಸಲಾಯಿತು.

ಸಂಘದ ರಾಜ್ಯ ಸಮಿತಿ ಸದಸ್ಯ ಡಿ.ಬಿ.ವಡವಡಗಿ, ಅಲ್ಲಾಭಕ್ಷ ನಿಡಗುಂದಿ, ಎಚ್.ಆರ್.ಬಾಗವಾನ, , ಚೇತನಾ ಶಿವಸಿಂಪಿ, ಪುಂಡಲಿಕ ಮುರಾಳ, ಸಿದ್ದು ಚಲವಾದಿ, ಲಾಡ್ಲೇಮಶ್ಯಾಕ ನದಾಫ ಇನ್ನಿತರರು ಮಾತನಾಡಿ ಸಲಹೆಗಳನ್ನು ನೀಡಿ ಪತ್ರಿಕಾ ದಿನಾಚರಣೆ ವಿಜೃಂಭಣೆಯಿಂದ, ಉಪಯುಕ್ತ ರೀತಿಯಲ್ಲಿ ಆಚರಿಸಲು ತಿಳಿಸಿದರು.

ಸದಸ್ಯರಾದ ಯಲ್ಲಾಲಿಂಗ ಕೊಡೆಕಲ್, ಬಿ. ಎಸ್. ಪಾಟೀಲ ಸರೂರ, ಕೃಷ್ಣಾ ಕುಂಬಾರ, ಹಣಮಂತ ಬಿರಗೊಂಡ, ಮುತ್ತು ಬಿರಗೊಂಡ, ಸಾಗರ ಉಕ್ಕಲಿ, ಈಶ್ವರ ಈಳಗೇರ, ಸಂಘದ ಹಲವು ಸದಸ್ಯರು ಪಾಲ್ಗೊಂಡಿದ್ದರು. ಸಂಘದ ಪ್ರಧಾನ ಕಾರ್ಯದರ್ಶಿ ರವೀಂದ್ರ ನಂದೆಪ್ಪನವರ್ ಸ್ವಾಗತಿಸಿ, ಕಾರ್ಯಕ್ರಮ ನಿರ್ವಹಿಸಿದರು. ಇದಕ್ಕೂ ಮುನ್ನ ಸಂಘದ ಹೊಸ ಸದಸ್ಯರನ್ನು ಸ್ವಾಗತಿಸಿಕೊಳ್ಳಲಾಯಿತು. ಢವಳಗಿ ಮತ್ತು ನಾಲತವಾಡ ಭಾಗದ ಸಂಘದ ಸದಸ್ಯರಿಗೆ ಆಯಾ ಭಾಗದ ಗಣ್ಯರನ್ನು ಕಾರ್ಯಕ್ರಮಕ್ಕೆ ಕರೆತರುವ ಜವಾಬ್ದಾರಿ ನೀಡಲಾಯಿತು.

# ರಸ್ತೆಯಲ್ಲಿ ಆಕ್ರಮ ಗಣಿಗಾರಿಕೆ ನಡೆಸಿಲ್ಲ, ಶುದ್ಧ ಸುಳ್ಳು

• ಉದಯವಾಹಿನಿ,ಚಿಂಚೋಳಿ



ತಾಲ್ಲೂಕಿನ ಭೈರಂಪಳ್ಳಿ ಮತ್ತು ತಾಂಡಾ ಅರಣ್ಯ ಅಂಚಿನಲ್ಲಿದೆ ಅರಣ್ಯ ಅಧಿಕಾರಿಗಳು ಸದಾ ಗಸ್ತು ತಿರುಗುತ್ತಿರುತ್ತಾರೆ ಆದರೆ ಭೈರಂಪಳ್ಳಿ ಮತ್ತು ತಾಂಡಾದಲ್ಲಿ ಯಾವುದೇ ಗಣಿಗಾರಿಕೆ ನಡೆಸುತ್ತಿಲ್ಲಾ ಕೆಲ ಪತ್ರಿಕೆಗಳಲ್ಲಿ ಸುದ್ದಿ ಪ್ರಕಟಿಸಿದ ಸುದ್ದಿ ಶುದ್ಧ ಸುಳ್ಳಾಗಿದೆ ಎಂದು ಮಿರಿಯಾಣ ಗ್ರಾಪಂ ಮಾಜಿ ಅಧ್ಯಕ್ಷೆ ಲಕ್ಷ್ಮಿಭಾಯಿ ತುಕ್ಕಾರಾಮ ತಿರುಗೇಟು ನೀಡಿದ್ದಾರೆ.

ಪತ್ರಿಕಾ ಪ್ರಕಟನೆ ಹೊರಡಿಸಿದ ಅವರು,ಕೆಲ ಪತ್ರಿಕೆಯಲ್ಲಿ ಪ್ರಕಟಗೊಂಡ ರಸ್ತೆಯಲ್ಲಿ ಗಣಿಗಾರಿಕೆ ನಡೆಸುತ್ತಿದ್ದಾರೆ ಎಂದು ಆರೋಪ ಮಾಡಿರುವ ಫೋಟೋವನ್ನು ಸೇತುವೆ ನಿರ್ಮಿಸಿದ ರಸ್ತೆಯಾಗಿದೆ, ಮಳೆಗಾಲ ಮಳೆ ಹೆಚ್ಚಾಗಿರುವುದರಿಂದ ರಸ್ತೆ ಸಂಚಾರಕ್ಕೆ ಶಾಲಾ ಮಕ್ಕಳ ವಾಹನಗಳಿಗೆ ಪಾದಾಚಾರಿಗಳಿಗೆ ತೊಂದರೆ ಆಗದಂತೆ ಸ್ಥಳೀಯರು ರಸ್ತೆ ಸಂಪರ್ಕ ಕಲ್ಪಿಸಲು ನೀರು ಸಗಸವಾಗಿ ಹೋಗಲು ಅನುವು ಮಾಡಿರುತ್ತಾರೆ ಅದನ್ನೆ ರಸ್ತೆ ಅಗಿದು ಆಕ್ರಮ ಗಣಿಗಾರಿಕೆ ನಡೆಸುತ್ತಿದ್ದಾರೆ ಎಂದು ಕೆಲ ಮುಖಂಡರು ಪತ್ರಿಕೆಯಲ್ಲಿ ಹೇಳಿಕೆ ನೀಡಿದ್ದು ಸತ್ಯಕ್ಕೆ ದೂರವಾದ ಮಾತಾಗಿದೆ. ಆಕ್ರಮ ಗಣಿಗಾರಿಕೆ ಎಂದು ಆರೋಪ ಮಾಡಿರುವ ಮುಖಂಡರು ಮನವರಿಕೆ ಮಾಡಿಕೊಂಡು ಪ್ರಾಧಿಕಾರ ಮುಂದೆ ಫಿರ್ಯಾದಿ ಸಲ್ಲಿಸಿ ಸತ್ಯಸತ್ಯತೆ ಹೊರಬರುವಂತೆ ಮಾಡಲಿ ಅದನ್ನು ಬಿಟ್ಟು ನ್ಯಾಯಯುತವಾಗಿ ಗಣಿಗಾರಿಕೆ ಮಾಡುತ್ತಿರುವ ಗಣಿ ಮಾಲಿಕರಿಗೆ ಹಾಗೂ ಕಾರ್ಮಿಕರಿಗೆ ನೋವುಂಟು ಮಾಡುವ ಹೇಳಿಕೆ ನೀಡುವುದು ಸರಿಯಿಲ್ಲ.

ನಿಜವಾದ ಸಮಾಜ ಸೇವಕರು ಮುಖಂಡರಿದ್ದರೆ ನಿಖರ ದಾಖಲಾತಿಗಳೊಂದಿಗೆ ಬಂದು ಹೋರಾಟ ನಡೆಸಲಿ ನಮ್ಮ ಬೆಂಬಲ ಕೂಡ ಇರಲಿದೆ,ಅದನ್ನು ಬಿಟ್ಟು ಕೆಲ ವ್ಯಕ್ತಿಗಳು ಅಧಿಕಾರಿಗಳಿಗೆ ಹೆದರಿಸುವುದು ಗಣಿಗಾರಿಕೆ ಮಾಲಿಕರಿಗೆ ಹೆದರಿಸುವುದು ಚಾಳಿ ಇಟ್ಟಿಕೊಂಡಿದ್ದು ಶೋಭೆ ತರುವುದಿಲ್ಲ ಎಂದು ಅವರು ತಿರುಗೇಟು ನೀಡಿದ್ದಾರೆ.

**ರಸ್ತೆ ಸಂಚಾರಕ್ಕೆ ಸೇತುವೆ ನಿರ್ಮಾಣ**

# ಖಾಸಗಿ ಕಂಪನಿಗಳಲ್ಲಿ ಕನ್ನಡಿಗರಿಗೆ ಉದ್ಯೋಗ ನೀಡಿ

• ಉದಯವಾಹಿನಿ ಚಳ್ಳಕೆರೆ


ಉದಯವಾಹಿನಿ ಚಿತ್ರ

ಖಾಸಗಿ ಕಂಪನಿಗಳಲ್ಲಿ ಕನ್ನಡಿಗರಿಗೆ ಉದ್ಯೋಗ ಮತ್ತು ಉದ್ಯೋಗ ಮೀಸಲು ವಿರೋಧಿಸಿರುವ ಸಚಿವರನ್ನು ಕೂಡಲೇ ಸಂಪುಟದಿಂದ ವಜಾಗೊಳಿಸಬೇಕು' ಎಂದು ಒತ್ತಾಯಿಸಿ ಕೊರ್ಲಕುಂಟೆ ಗ್ರಾಮದ ಕನ್ನಡ ರಕ್ಷಣಾ ಮತ್ತು ಸಾಂಸ್ಕೃತಿಕ ವೇದಿಕೆ ಕಾರ್ಯಕರ್ತರು ಗುರುವಾರ ತಹಶೀಲ್ದಾರ್‌ಗೆ ಮನವಿ ಸಲ್ಲಿಸಿದರು.

ನಾಡಿನ ಜನರು ಕಟ್ಟುವ ತೆರಿಗೆಯಲ್ಲಿ ಸೌಲಭ್ಯಗಳನ್ನು ಬಳಸಿಕೊಂಡು ಸ್ಥಾಪಿಸುವ ಕಂಪನಿಗಳಲ್ಲಿ ಕನ್ನಡಿಗರಿಗೆ ಮೀಸಲು ನೀಡುವುದು ರಾಜ್ಯದಲ್ಲಿ ಕಡ್ಡಾಯಗೊಳಿಸಬೇಕು. ನಾಡು, ನುಡಿ ಮತ್ತು ಸಂಸ್ಕೃತಿ ವಿರೋಧಿಸುವ ಜನಪ್ರತಿನಿಧಿಗಳಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ನೀಡದಂತೆ ಕಾನೂನು ಜಾರಿ ಮಾಡಬೇಕು' ಎಂದು ಸಾಮಾಜಿಕ ಹೋರಾಟಗಾರ ಎಚ್.ಎಸ್. ಸೈಯದ್ ಒತ್ತಾಯಿಸಿದರು.'ತಾಲ್ಲೂಕಿನ ಕುದಾಪುರದ ಬಳಿ ಸ್ಥಾಪಿಸಿರುವ ಡಿಆರ್‌ಡಿಒ ವಿಜ್ಞಾನ ಕೇಂದ್ರದಲ್ಲಿ ಸ್ಥಳೀಯ ನಿರುದ್ಯೋಗಿಗಳಿಗೆ ಉದ್ಯೋಗ ದೊರಕಿಸಿಕೊಡಲು ಕೂಡಲೇ ಕ್ರಮ ಕೈಗೊಳ್ಳಬೇಕು. ಆಡಳಿತ ಹಾಗೂ ವಿರೋಧ ಪಕ್ಷದ ಸದಸ್ಯರ ವಿಶ್ವಾಸ ಪಡೆದು ಕನ್ನಡಿಗರ ಉದ್ಯೋಗ ಮೀಸಲು ಮಸೂದೆ ಜಾರಿ ಮಾಡಬೇಕು' ಎಂದು ವೇದಿಕೆ ಅಧ್ಯಕ್ಷ ಕೊರ್ಲಕುಂಟೆ ತಿಪ್ಪೇಸ್ವಾಮಿ ಮನವಿ ಮಾಡಿದರು.

ಶಿರಸ್ತೇದಾರ್ ಸಂತೋಷ್, ದಲಿತ ಮುಖಂಡ ವಿಜಯಕುಮಾರ್, ದ್ಯಾಮಯ್ಯ ಮೈತ್ರಿ, ವಿರೇಂದ್ರ, ಬಸವರಾಜ, ರಾಜಣ್ಣ, ಎಲ್.ಎಸ್.ಪಾಂಡು, ನಿವೃತ್ತ ಉಪನ್ಯಾಸಕ ತಿಮ್ಮಪ್ಪ, ನಾಗರಾಜ, ತಿಪ್ಪೇಸ್ವಾಮಿ, ಶಶಿಧರ, ಮಂಜುನಾಥ್ ಇದ್ದರು.

# ಕಾವ್ಯ ಕವನ ಸಾಹಿತ್ಯಗಳನ್ನು ಜನಪ್ರಿಯಗೊಳಿಸಲು ಮುಂದಾಗಿ: ಶಂಕರ್

• ಉದಯವಾಹಿನಿ ಸೊರಬ


ಉದಯವಾಹಿನಿ ಚಿತ್ರ

ಸಾಹಿತ್ಯ ಕ್ಷೇತ್ರವು ಬಹುದೊಡ್ಡ ಕ್ಷೇತ್ರವಾಗಿದ್ದು, ಸಾಹಿತ್ಯವು ವ್ಯಕ್ತಿತ್ವದ ಮೇಲೆ ಬಹು ಪರಿಣಾಮ ಪ್ರಭಾವ ಬಿರುತ್ತದೆ. ಕನ್ನಡ ಭಾಷೆಯ ಸಾಹಿತ್ಯಕ್ಕೆ 8 ಜ್ಞಾನಪೀಠ ಪ್ರಶಸ್ತಿಗಳು ಸಂದಿವೆ ಎಂದು ಕನ್ನಡ ಸಾಹಿತ್ಯ ಸಾಂಸ್ಕೃತಿಕ ವೇದಿಕೆ ಸೊರಬ ಘಟಕದ ಅಧ್ಯಕ್ಷ ಶಂಕರ್ ಜಿ ಶೇಟ್ ತಿಳಿಸಿದರು.

ಪಟ್ಟಣದ ಡಿ ದೇವರಾಜ ಅರಸು ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಬಾಲಿಕಿಯರ ನಿಲಯದಲ್ಲಿ ವೇದಿಕೆ ಹಾಗೂ ವಿದ್ಯಾರ್ಥಿ ನಿಲಯದ ಸಂಯುಕ್ತಾಶ್ರಯದಲ್ಲಿ ನಡೆದ 'ಮುಂಗಾರು ಕಾವ್ಯ' ಸಂಭ್ರಮದಲ್ಲಿ ಸಭೆಯನ್ನುದ್ದೇಶಿಸಿ ಸಾಹಿತ್ಯ ಮತ್ತು ಮನುಕುಲಕ್ಕೂ ಅವಿನವ ಭಾವ ಸಂಬಂದವಿದೆ. ಕುವೆಂಪು ರವರು ನಮ್ಮ ಜಿಲ್ಲೆಯವರಾಗಿದ್ದಾರೆ. ಕಾವ್ಯ ಕವನಗಳನ್ನು ಜನಪ್ರಿಯಗೊಳಿಸುವ ಕಲ್ಪನೆ ಒಂದು ವರ್ಗಕ್ಕೆ ಸೀಮಿತವೆಂದು ತಿಳಿಯದೆ ಜನತೆ ಕಾವ್ಯ ಮತ್ತು ಸಾಹಿತ್ಯದ ಪುಸ್ತಕಗಳನ್ನು ಕೊಂಡುಕೊಳ್ಳುವುದರ ಮೂಲಕ ಹಾಗೂ ಕೊಡುಗೆಗಳನ್ನು ಕೊಡುವುದರ ಮೂಲಕ ಬರಹಗಾರರಿಗೆ ಉತ್ತೇಜನ ನೀಡಲು ಮುಂದಾಗಬೇಕು ಎಂದು ಕರೆ ನೀಡಿದರು. ಈ ದಿಶೆಯಲ್ಲಿ ತಮ್ಮ ವೇದಿಕೆ ಇನ್ನಷ್ಟು ಕವಿಗಳು ನಿರ್ಮಾಣ ಆಗಬೇಕೆಂದು ಪ್ರತಿವರ್ಷ ಮುಂಗಾರು ಕಾವ್ಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ ಎಂದರು.

ಸಭೆಯ ಉದ್ಘಾಟನೆಯನ್ನು ತಹಶೀಲ್ದಾರ್ ಮಂಜುಳ ವಿ ಹೆಗಡಾಳ ನೇರವೇರಿಸಿ, ಶುಭ ಕೋರಿದರು. ಸಭೆಯ ಅಧ್ಯಕ್ಷತೆಯನ್ನು ನಿಲಯ ಮೇಲ್ವಿಚಾರಕಿ ಸರಸ್ವತಿ ಕೆ.ಎಸ್, ಮುಖ್ಯ ಅತಿಥಿಗಳಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶಿವಾನಂದ ಪಾಣಿ, ಸಾಹಿತಿ ಉಮೇಶ ಭದ್ರಾಪುರ, ಸಂಜಯ ಡೊಂಗ್ರೆ, ಸುನೀತಾ ವಿಜಯ ಪ್ರಸಾದ್, ಡಾ.ನಿಲೇಶ ಎಸ್ ಎಮ್, ವೇದಿಕೆಯ ಕಾರ್ಯದರ್ಶಿ ಮಹೇಶ ಖಾರ್ವಿ ವಹಿಸಿದ್ದರು. ಆನವಟ್ಟಿಯ ಸುನೀತಾ ವಿಜಯ ಪ್ರಸಾದ, ಸಂಜಯ ಡೊಂಗ್ರೆ, ವಿನೋದ ವಾಲ್ಮೀಕಿ ಶ್ರೀಮತಿ ಸುಬ್ರಮಣ್ಯ, ಶೈಲಜಾ ಹೆಬ್ಬಾರ್, ಮೋಹನ ಸುರಭಿ, ಸವಿತಾ ಎಮ್, ಎನ್ ಲಲಿತಾ ಚಂದ್ರಶೇಖರ್,ನೇತ್ರಾ ಉಮೇಶ್, ಎಸ್ ಮಂಜುನಾಥ, ರಾಘವೇಂದ್ರ ಎಸ್ ಮಹೇಶ್ ಖಾರ್ವಿ, ಸುಮಿತ್ರಾ ಕೃಷ್ಣಾನಂದ, ನಂದಿನಿ ಉರಗನಹಳ್ಳಿ ಮತ್ತು ಲಕ್ಷ್ಮಣ ಸಾಗರ ರವರು ಸ್ವರಚಿತ ಕವನ ವಾಚಿಸಿದರು. ಉಪನ್ಯಾಸಕ ಡಾ.ನಿಲೇಶ ಎಸ್ ಎಮ್ ಕಾವ್ಯ ವಿಶ್ಲೇಷಣೆ ಮಾಡಿದರು.

ಹಿಮಾಚಲ ಪ್ರದೇಶದದಲ್ಲಿ ಜರುಗಿದ ರಾಷ್ಟ್ರೀಯ ಕುಡೋ ಕರಾಟೆ ಸ್ಪರ್ಧೆಯಲ್ಲಿ ಬಂಗಾರ ಪ್ರಶಸ್ತಿ ವಿಜೇತ ಕು.ದಿಗಂತ ಎಮ್ ರವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

**ಮುಂಗಾರು ಕಾವ್ಯ ಸಂಭ್ರಮ**

# ತೆಂಗಿನ ತೋಟಗಳಿಗೆ ತಗಲುವ ಕಪ್ಪುತಲೆ ಹುಳುಗಳ ನಿರ್ವಹಣಾ ಕ್ರಮಗಳು

• ಉದಯವಾಹಿನಿ ಚಿತ್ರದುರ್ಗ


ಉದಯವಾಹಿನಿ ಚಿತ್ರ

ಜಿಲ್ಲೆಯಲ್ಲಿ ತೆಂಗು ಬೆಳೆ ವಿಸ್ತೀರ್ಣ 60,874 ಹೆಕ್ಟೇರ್‌ನಲ್ಲಿ ಬೆಳೆಯಲಾಗುತ್ತಿದ್ದು, ತೆಂಗು ಬೆಳೆಗೆ ಕಪ್ಪುತಲೆ ಹುಳುಗಳ ಬಾದೆ ಹೆಚ್ಚಾಗಿ ಕಾಣಿಸಿಕೊಳ್ಳುವುದರಿಂದ ಈ ಕೀಟ ನಿಯಂತ್ರಣಕ್ಕಾಗಿ ಹತೋಟಿ ಕ್ರಮಕೈಗೊಳ್ಳಲು ತೋಟಗಾರಿಕೆ ಇಲಾಖೆ ರೈತರಿಗೆ ಸಲಹೆ ನೀಡಿದೆ.

**ಗರಿತಿನ್ನುವ ಹುಳು:** ಮರಿ ಹುಳುಗಳು ಎಲೆಯ ಕೆಳಭಾಗದಲ್ಲಿ ರೇಷ್ಮೆ ಜಾಡಿನ ಒಳಗೆ ಕುಳಿತು ಹಸಿರು ಪದಾರ್ಥವನ್ನು ಕೆರೆದು ತಿನ್ನುತ್ತದೆ ಅಂತಹ ಎಲೆಗಳ ಮೇಲೆ ಒಣಗಿದ ಮೊಟ್ಟೆಗಳು ಮರಿ ಹುಳುವಿನ ರೇಷ್ಮೆಜಾಡು ಮತ್ತು ಹಿಕ್ಕೆ ಕಂಡು ಬರುತ್ತದೆ, ಅತಿ ಬಾದೆಗೊಳಗಾದ ತೋಟಗಳು ಬೆಂಕಿಯಿಂದ ಸುಟ್ಟಂತೆ ಕಾಣುತ್ತದೆ.

**ಜೈವಿಕ ವಿಧಾನ:** ಕೀಟದ ಬಾದೆಯು ಕೆಲಬಾಗದ ಗರಿಗಳಲ್ಲಿಯೇ ಇದ್ದು, ತೀವ್ರತೆಯ ಹಂತ ತಲುಪಿಲ್ಲದಿದ್ದರೆ ಪ್ರಯೋಗ ಶಾಲೆಗಳಿಂದ ಪರೋಪ ಜೀವಿಗಳನ್ನು ಪಡೆದುಕೊಳ್ಳುವುದು. ಗೋನಿಯೋಜಸ್ ನೆಪಾಂಟಡಿಸ್ ಪರೋಪ ಜೀವಿಗಳನ್ನು ಪ್ರತಿ ಕೀಟ ಭಾದಿತ ಮರಕ್ಕೆ ಸುಮಾರು 15 ರಿಂದ 20 ರಂತೆ 15 ದಿನಗಳಿಗೊಮ್ಮೆ ಕನಿಷ್ಟ 04 ಬಾರಿ ಬಿಡುವುದು.

**ರಾಸಾಯನಿಕ ವಿಧಾನ:** ಸಣ್ಣ ಸಸಿಗಳಾದಲ್ಲಿ ಕ್ಲೋರೊಪೈರಿಪಾಸ್ 2 ಮಿ.ಲೀ/ಪ್ರ.ಲೀ ನೀರಿಗೆ ಕ್ವಿನಾಲ್ಫಾಸ್ 1 ಮಿ.ಲೀ/ಪ್ರ.ಲೀ, ಮಾನೋಕ್ರೋಟೋಪಸ್ 1.5 ಮಿ.ಲೀ/ಪ್ರ.ಲೀ ಕೀಟ ನಾಶಕವನ್ನು ನೀರಿನಲ್ಲಿ ಬೆರೆಸಿ ಗರಿಗಳನ್ನು ಕೆಳಬಾಗ ಸಂಪೂರ್ಣ ಒದ್ದೆಯಾಗುವಂತೆ ಸಿಂಪಡಿಸಿಬೇಕು. 10 ವರ್ಷಕಿಂತ ಮೇಲ್ಪಟ್ಟ ಮರಗಳಿಗೆ ಬೇರಿಗೆ ಉಪಚಾರ ಮಾನೋಕ್ರೋಟೋಪಸ್ 10 ಎಂಎಲ್ / 10 ಎಂ.ಎಲ್ ನೀರಿಗೆ ಸೇರಿಸಿ ಬೇರಿನ ಮೂಲಕ ಕೀಟನಾಶಕ ಉಣಿಸಬೇಕಾಗಿರುತ್ತದೆ.

10 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮರಗಳ ಬೇರಿಗೆ ಉಪಚಾರ ಮಾನೋ ಕ್ರೋಟೋಪಸ್ 7.5 ಎಂ ಎಲ್ / 7.5 ಎಂ.ಎಲ್ ನೀರಿಗೆ ಸೇರಿಸಿ ಬೇರಿನ ಮೂಲಕ ಕೀಟನಾಶಕ ಉಣಿಸಬೇಕಾಗಿರುತ್ತದೆ.

### ನಿರ್ವಹಣೆ ಕ್ರಮಗಳು- ಯಾಂತ್ರಿಕ ವಿಧಾನ

ಹಾನಿಯು ಪ್ರಾಥಮಿಕ ಹಂತದಲ್ಲಿದ್ದು, ಕೆಲವೇ ಗರಿಗಳಲ್ಲಿ ಕಂಡುಬಂದಾಗ ತೋಟದಲ್ಲಿ ಬಿದ್ದ ಗರಿಗಳು ಇತರ ಕಸಕಡ್ಡಿಗಳನ್ನು ಸಂಗ್ರಹಿಸಿ ಸ್ವಚ್ಛವಾಗಿಡುವುದು. ಹುಳದ ಬಲೆ ಇರುವ ಗರಿ ಅಥವಾ ಅದರ ಭಾಗಗಳನ್ನು ಮಾತ್ರ ಕತ್ತರಿಸುವುದು.

### ಪೋಷಕಾಂಶಗಳ ನಿರ್ವಹಣೆ

ಪ್ರತಿ ವರ್ಷ ಪ್ರತಿ ಮರಕ್ಕೆ ಬೇವಿನ ಹಿಂಡಿ- 5ಕೆ.ಜಿ. ಪೊಟ್ಯಾಶ್-1.2ಕೆ.ಜಿ. ಕೊಟ್ಟಿಗೆ ಗೊಬ್ಬರ-50 ಕೆ.ಜಿ ನೀಡುವುದರಿಂದ ಗಿಡಕ್ಕೆ ರೋಗ ನಿರೋದಕ ಶಕ್ತಿಯು ನೀಡುತ್ತದೆ. ಈ ಮೇಲ್ಕಂಡ ನಿರ್ವಹಣಾ ಕ್ರಮಗಳನ್ನು ಕೈಗೊಳ್ಳುವುದು ಹಾಗೂ ಹೆಚ್ಚಿನ ಮಾಹಿತಿಗಾಗಿ ತಾಲ್ಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರನ್ನು ಸಂಪರ್ಕಿಸಬಹುದು ಎಂದು ತೋಟಗಾರಿಕೆ ಪನಿರ್ದೇಶಕರು ತಿಳಿಸಿದ್ದಾರೆ.

# ಸಮಸ್ಯೆಗಳ ನಿವಾರಣೆಗೆ ತ್ವರಿತಗತಿಯಲ್ಲಿ ಕ್ರಮ: ಪುರಸಭೆ ಮುಖ್ಯಾಧಿಕಾರಿ

• ಉದಯವಾಹಿನಿ ಅಫಜಲಪುರ


ಉದಯವಾಹಿನಿ ಚಿತ್ರ

ಪುರಸಭೆ ವ್ಯಾಪ್ತಿಯಲ್ಲಿ ಬರುವ ವಿವಿಧ ವಾರ್ಡ್‌ಗಳಲ್ಲಿ ಜಿಲ್ಲಾಧಿಕಾರಿಗಳ ಆದೇಶದಂತೆ ಜುಲೈ 18 ರಿಂದ 24ರ ವರೆಗೆ ಜನಸ್ಪಂದನ ಕಾರ್ಯಕ್ರಮ ಹಮ್ಮಿಕೊಂಡ ಹಿನ್ನೆಲೆ ವಾರ್ಡ್ ನಂ. 1, 2, 3, 4, 5 ರಲ್ಲಿ ಜನಸ್ಪಂದನ ಕಾರ್ಯಕ್ರಮ ನಡೆಸಿ ಬಡಾವಣೆಯ ನಿವಾಸಿಗಳಿಂದ ಅರ್ಜಿ ಪಡೆದು ಪರಿಶೀಲನೆ ನಡೆಸಲಾಯಿತು. ಬಳಿಕ ಮಾತನಾಡಿದ ಪುರಸಭೆ ಮುಖ್ಯಾಧಿಕಾರಿ ವಿಜಯಮಹಾಂತೇಶ ಹೂಗಾರ ಅವರು, ಬೀದಿ ವಿದ್ಯುತ್ ದೀಪ ಅಳವಡಿಕೆ, ತ್ಯಾಜ್ಯ ವಿಲೇವಾರಿ, ಸಾಮೂಹಿಕ ಶೌಚಾಲಯ, ಸ್ವಚ್ಛತೆ ಸೇರಿದಂತೆ ಹಲವು ಕೆಲಸ ಕಾಮಗಾರಿಗಳನ್ನು ಶೀಘ್ರದಲ್ಲೇ ಪರಿಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು.

ಹೀಗಾಗಿ ಸಾರ್ವಜನಿಕರು ಮತ್ತು ಸದಸ್ಯರ ಸಹಕಾರ ಇರಲಿ ಎಂದ ಅವರು ಜುಲೈ 19 ರ ಇಂದು ವಾರ್ಡ್ ಸಂಖ್ಯೆ 6, 7, 8, 9 ರಲ್ಲಿ ಬೆಳಿಗ್ಗೆ 11 ಗಂಟೆಯಿಂದ ಸಾಯಂಕಾಲ 5 ರ ವರೆಗೆ ಜನಸ್ಪಂದನ ಕಾರ್ಯಕ್ರಮ ನಡೆಯಲಿದ್ದು ಸಾರ್ವಜನಿಕರು ಕಾರ್ಯಕ್ರಮದ ಪ್ರಯೋಜನ ಪಡೆಯಬೇಕೆಂದು ಕೋರಿದರು. ಈ ಸಂದರ್ಭದಲ್ಲಿ ಸಿಬ್ಬಂದಿಗಳಾದ ಬಸವರಾಜ ಶಿವಪೂಜೆ, ಸಂಜಯಕುಮಾರ, ಗಾಯತ್ರಿ ಸಿ.ಎಂ, ಪ್ರೇಮಾವತಿ ರಾಜಾನವರ್ ಸೇರಿದಂತೆ ಆಯಾ ವಾರ್ಡಿನ ಸದಸ್ಯರು ಹಾಗೂ ಬಡಾವಣೆಯ ನಿವಾಸಿಗಳು ಹಾಜರಿದ್ದರು.

# ಯುವನಿಧಿ ಫಲಾನುಭವಿಗಳಿಗೆ ಡಿಬಿಟಿ ಮೂಲಕ ಹಣ ಖಾತೆಗೆ ಜಮಾ

## ಯುವನಿಧಿಗೆ ನೋಂದಣಿಯಾದವರು ಪ್ರತಿ ತಿಂಗಳು ಸ್ವಯಂಘೋಷಣೆ ಕಡ್ಡಾಯ: ಜಿಲ್ಲಾಧಿಕಾರಿ ಡಾ.ಸುಶೀಲ ಬಿ

• ಉದಯವಾಹಿನಿ ಯಾದಗಿರಿ

ಜಿಲ್ಲೆಯಲ್ಲಿ ಯುವನಿಧಿ ಯೋಜನೆಯಲ್ಲಿ ನೋಂದಣಿಯಾದ 3130 ಫಲಾನುಭವಿ ಪದವಿಧರರಿಗೆ 3000 ರೂ ಮತ್ತು ಡಿಪ್ಲೋಮಾ ಅಭ್ಯರ್ಥಿಗಳಿಗೆ 1500 ಒಟ್ಟು 93,75,000 ಹಣವನ್ನು ನೇರವಾಗಿ ಡಿಬಿಟಿ ಮೂಲಕ ಅವರ ಖಾತೆಗೆ ಜಮಾ ಮಾಡಲಾಗಿದೆ. ಇನ್ನೂ ಹೆಚ್ಚಿನ ನೋಂದಣಿಗಾಗಿ ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು ಎಂದು ಜಿಲ್ಲಾಧಿಕಾರಿ ಡಾ.ಸುಶೀಲ ಬಿ. ಅವರು ತಿಳಿಸಿದ್ದಾರೆ.

ಜಿಲ್ಲಾಡಳಿತ ಹಾಗೂ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಿಂದ ಯಾದಗಿರಿ ಜಿಲ್ಲಾ ವ್ಯಾಪ್ತಿಯಲ್ಲಿ ಇರುವ ಪದವಿ ಹಾಗೂ ಡಿಪ್ಲೋಮಾ 2022-23 ರಲ್ಲಿ ವ್ಯಾಸಂಗ ಮಾಡಿ ತೇರ್ಗಡೆಯಾಗಿ 6 ತಿಂಗಳ ಮೇಲ್ಪಟ್ಟ ( 180 ದಿನಗಳು) ನಿರುದ್ಯೋಗ ಯುವಕ, ಯುವತಿಯರು ಯುವ ನಿಧಿ ಯೋಜನೆಯಡಿಯಲ್ಲಿ ನಿರುದ್ಯೋಗ ಭತ್ಯೆಯನ್ನು ಪಡೆಯಬೇಕು. ಈಗಾಗಲೇ ಜಿಲ್ಲಾ ವ್ಯಾಪ್ತಿಯಲ್ಲಿ 71 ಪದವಿ ಕಾಲೇಜು, 7 ಡಿಪ್ಲೋಮಾ ಕಾಲೇಜು ಹಾಗೂ 1 ಇಂಜಿನಿಯರಿಂಗ್ ಕಾಲೇಜಗಳಿದ್ದು, ಅದರಂತೆ ಯುವ ನಿಧಿ ಯೋಜನೆಯಡಿಯಲ್ಲಿ ಸೇವಾ ಸಿಂಧು ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಿದ 4604 ಅಭ್ಯರ್ಥಿಗಳು ನೋಂದಣಿಯಾಗಿದ್ದಾರೆ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಈ ಯೋಜನೆ ಉನ್ನತ ವ್ಯಾಸಂಗ ಮಾಡುತ್ತಿರುವವರು, ಸ್ವಯಂ ಉದ್ಯೋಗ ಮಾಡುವವರು ಅರ್ಹರಲ್ಲ ಎಂದು ತಿಳಿಸಿದರು.

ಅಭ್ಯರ್ಥಿಗಳು ಈ ಪ್ರಯೋಜನವನ್ನು ಪ್ರತಿ ತಿಂಗಳು ಪಡೆಯಬೇಕಿದ್ದರೆ, ಪ್ರತಿ ತಿಂಗಳಲ್ಲಿತಾನು ನಿರುದ್ಯೋಗಿಯೆಂದು, ವ್ಯಾಸಂಗ ಮುಂದುವರೆಸುತ್ತಿಲ್ಲವೆಂದು ಹಾಗೂ ಸ್ವಯಂ ಉದ್ಯೋಗಿಯಲ್ಲವೆಂದು ಸ್ವಯಂ ಘೋಷಣೆ ಮಾಡಬೇಕು. ನೋಂದಣಿಯಾದ ಅಭ್ಯರ್ಥಿಗಳು ಕಡ್ಡಾಯವಾಗಿ ಆಧಾರ ಲಿಂಕ್ ಇರುವ ಬ್ಯಾಂಕ್ ಖಾತೆಯನ್ನು ಹೊಂದಿರಬೇಕು. https://sevasidhugs.Karnataka.gov.in ವೆಬ್ ಸೈಟ್ ನಲ್ಲಿ ಸ್ವಯಂ ಘೋಷಣೆ ಮಾಡಿಕೊಂಡು ತಮ್ಮ ಅರ್ಜಿಯು ಯಾವ ಹಂತದಲ್ಲಿದೆ ಎಂದು ಪರಿಶೀಲಿಸಿಕೊಳ್ಳಬೇಕು. ಒಂದು ವೇಳೆ ಅರ್ಜಿಯು ಅಪ್ರೂವ್ ಆಗದ ಸಂದರ್ಭದಲ್ಲಿ ಸಂಬಂಧಪಟ್ಟ ಇಲಾಖೆಗೆ ಎಲ್ಲಾ ಮೂಲ ಅಂಕಪಟ್ಟಿ ಹಾಗೂ ಇತರೆ ಪ್ರಮಾಣ ಪತ್ರಗಳೊಂದಿಗೆ ಖುದ್ದಾಗಿ ಬೇಟೆ ನೀಡಿ ಅವುಗಳ ಜೆರಾಕ್ಸ್ ಪ್ರತಿಗಳನ್ನು ಸಲ್ಲಿಸಬೇಕು ಎಂದು ಜಿಲ್ಲಾಧಿಕಾರಿ ತಿಳಿಸಿದರು. ಹೆಚ್ಚಿನ ಮಾಹಿತಿಗಾಗಿ ರಾಜ್ಯ ಸಹಾಯವಾಣಿ ಸಂಖ್ಯೆ 18005999918 ಗೆ ಅಥವಾ ಜಿಲ್ಲಾ ಉದ್ಯೋಗ ವಿನಿಮಯ ಅಧಿಕಾರಿ ಕಚೇರಿಗೆ ಸಂಖ್ಯೆ 08473 - 253718 ಗೆ ಸಂಪರ್ಕಿಸಬಹುದು ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

**ಪದವಿಧರರಿಗೆ 3000 ರೂ. ಡಿಪ್ಲೋಮಾ ಅಭ್ಯರ್ಥಿಗಳಿಗೆ 1500 ರೂ.**


ಉದಯವಾಹಿನಿ ಚಿತ್ರ

ಸೇವಾ ಸಿಂಧು ಪೋರ್ಟಲ್‌ನಲ್ಲಿ ಸ್ವಯಂ ಘೋಷಣೆ ಪ್ರಮಾಣ ಪತ್ರ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಪ್ರಯೋಜನೆ ಪಡೆಯುತ್ತಿರುವ ಅರ್ಹ ಅಭ್ಯರ್ಥಿಗಳು ಪ್ರತಿ ತಿಂಗಳು 25 ನೇ ತಾರೀಖು ಒಳಗಾಗಿ ಸ್ವಯಂ ಘೋಷಣೆ ಮಾಡದಿದ್ದಲ್ಲಿ ಅಂತಹ ಅಭ್ಯರ್ಥಿಗಳಿಗೆ ನೇರ ನಗದು ವರ್ಗಾವಣೆ ಮಾಡಲಾಗುವುದಿಲ್ಲ

- ಜಿಲ್ಲಾಧಿಕಾರಿ, ಡಾ.ಸುಶೀಲ ಬಿ

### ಅರ್ಜಿ ಸಲ್ಲಿಸಲು ಅರ್ಹತೆಗಳು

ಅಭ್ಯರ್ಥಿಗಳು ಕರ್ನಾಟಕ ರಾಜ್ಯದಲ್ಲಿ 6 ವರ್ಷ ವಾಸವಾಗಿರಬೇಕು. ಪದವಿ, ಸ್ನಾತಕೋತ್ತರ ಪದವಿ ಹಾಗೂ ಡಿಪ್ಲೋಮಾ ವ್ಯಾಸಂಗ ಮಾಡಿ ಪಾಸಾದ ಅಭ್ಯರ್ಥಿಗಳು ಕನಿಷ್ಠ 6 ತಿಂಗಳು ಆಗಿರಬೇಕು. ಈ ಸೌಲಭ್ಯ 2 ವರ್ಷಗಳ ಅವಧಿಗೆ ಮಾತ್ರ ಅನ್ವಯವಾಗುತ್ತದೆ. ಈ ಅವಧಿಯೊಳಗೆ ಉದ್ಯೋಗ ದೊರೆಕಿದ್ದಲ್ಲಿ ಈ ಸೌಲಭ್ಯ ಸ್ಥಗಿತಗೊಳಿಸಲಾಗುತ್ತದೆ. ನಿರುದ್ಯೋಗ ಭತ್ಯೆಯನ್ನು ಡಿಬಿಟಿ ಮೂಲಕ ಒದಗಿಸುತ್ತಿದ್ದು, ಅಭ್ಯರ್ಥಿಗಳು ಸೇವಾ ಸಿಂಧು ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬೇಕು. ನಿರುದ್ಯೋಗ ಸ್ಥಿತಿಗತಿಯ ಬಗ್ಗೆ ಸ್ವತಂತ್ರ ಪರಿಶೀಲನೆ ಇರಬೇಕು, ಉದ್ಯೋಗ ಪಡೆದ ನಂತರ ಸ್ವಯಂ ಘೋಷಣೆ ಕಡ್ಡಾಯ ಎಂದು ತಿಳಿಸಿದ್ದಾರೆ.

## ಮಿನಿ ನ್ಯೂಸ್

# ಚಿರತೆ ದಾಳಿಗೆ ಮೇಕೆ ಬಲಿ


ಉದಯವಾಹಿನಿ ಚಿತ್ರ

• ಉದಯವಾಹಿನಿ ಸಿರವಾರ

ಚಿರತೆ ದಾಳಿಗೆ ಎರಡು ಮೇಕೆಗಳು ಬಲಿಯಾದ ಘಟನೆ ತಾಲ್ಲೂಕಿನ ಕಲ್ಲೂರು ಗ್ರಾಮದಲ್ಲಿ ಸಂಭವಿಸಿದೆ. ಕಲ್ಲೂರು ಗ್ರಾಮದ ದಿನ್ನಿ ರಸ್ತೆಯಲ್ಲಿರುವ ಬಂಡಿ ಮೊಹ್ಮದ್ ಎಂಬುವವರಿಗೆ ಸೇರಿದ ದೊಡ್ಡಿಗೆ ದಾಳಿ ಮಾಡಿದ ಚಿರತೆಗಳು ಕೊಂದು ಹಾಕಿದೆ. ಮೇಕೆಗಳ ಚೀರಾಟ ಕಂಡು ದೊಡ್ಡಿ ಬಳಿ ಬಂದು ನೋಡಿದಾಗ ಎರಡು ಚಿರತೆಗಳು ಓಡಿ ಹೋಗಿವೆ' ಎಂದು ಬಂಡಿ ಮೊಹ್ಮದ್ ತಿಳಿಸಿದ್ದಾರೆ.

ಈ ಘಟನೆಯಿಂದ ಗ್ರಾಮಸ್ಥರಲ್ಲಿ ಆತಂಕ ಹೆಚ್ಚಾಗಿದ್ದು ಕೂಡಲೇ ಅಗತ್ಯ ಕ್ರಮಕೈಗೊಂಡು ಮುಂದೆ ಈ ರೀತಿಯ ಘಟನೆಗಳು ನಡೆಯದಂತೆ ನೋಡಿಕೊಳ್ಳಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಘಟನೆ ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿದ್ದು, ಈ ಪ್ರದೇಶದಲ್ಲಿ ಚಿರತೆ ಇರುವುದು ಖಚಿತಪಡಿಸಿದ್ದಾರೆ. ಚಿರತೆಗಳನ್ನು ಸೆರೆ ಹಿಡಿಯಲು ಬೋನ್ ಅಳವಡಿಸಲಾಗಿದೆ ಎಂದು ಪ್ರಾದೇಶಿಕ ವಲಯ ಅರಣ್ಯಾಧಿಕಾರಿ ಸುರೇಶ ಆಲಮೇಲ ತಿಳಿಸಿದ್ದಾರೆ.

# ಮಂಗಳೂರು-ಬೆಂಗಳೂರು ನಡುವೆ ಹೆಚ್ಚುವರಿ ರೈಲು ಸೇವೆ: ಪತ್ರ ಬರೆದ ಸಂಸದ ಬ್ರಿಜೇಶ್

• ಉದಯವಾಹಿನಿ ಮಂಗಳೂರು



ಮಂಗಳೂರು ಮತ್ತು ಬೆಂಗಳೂರನ್ನು ಸಂಪರ್ಕಿಸುವ ಮುಖ್ಯ ಎರಡು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಗುಡ್ಡ ಕುಸಿತದಿಂದ ವಾಹನ ಸಂಚಾರಕ್ಕೆ ಸಮಸ್ಯೆಯಾಗಿದ್ದು, ಮಂಗಳೂರು- ಬೆಂಗಳೂರು ನಡುವೆ ಹೆಚ್ಚುವರಿ ರೈಲು ಸೇವೆಯನ್ನು ತುರ್ತಾಗಿ ಪ್ರಾರಂಭಿಸುವಂತೆ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಒತ್ತಾಯಿಸಿದ್ದಾರೆ. ನೈಋತ್ಯ ರೈಲ್ವೆ ಜನರಲ್ ಮ್ಯಾನೇಜರ್ ಮತ್ತು ಮೈಸೂರು ಡಿಆರ್‌ಎಂ ಅವರಿಗೆ ಈ ಸಂಬಂಧ ಸಂಸದರು ಪತ್ರ ಬರೆದಿದ್ದಾರೆ. ಮಂಗಳೂರು- ಬೆಂಗಳೂರು ನಗರಗಳ ನಡುವೆ ಪ್ರತಿನಿತ್ಯ ಹೆಚ್ಚು ಜನರು ಪ್ರಯಾಣಿಸುತ್ತಾರೆ. ಇದನ್ನು ಗಮನದಲ್ಲಿಟ್ಟುಕೊಂಡು, ಯಾವುದೇ ಇತರ ಸಾರಿಗೆ ವ್ಯವಸ್ಥೆಯಿಲ್ಲದ ಕಾರಣ ಹೆಚ್ಚುವರಿ ರೈಲು ಸೇವೆಯನ್ನು ಒದಗಿಸುವ ಅಗತ್ಯವಿದೆ. ಶೀಘ್ರದಲ್ಲಿ ಹೆಚ್ಚುವರಿ ರೈಲ್ವೆ ಸೇವೆ ಒದಗಿಸಲು ಕ್ರಮ ಕೈಗೊಳ್ಳಬೇಕು ಎಂದು ಚೌಟ ವಿನಂತಿಸಿದ್ದಾರೆ.

# ತೋಟಗಾರಿಕೆ ಇಲಾಖೆ ಉಪನಿರ್ದೇಶಕನ ಮನೆಯ ಮೇಲೆ ಲೋಕಾಯುಕ್ತ ದಾಳಿ

• ಉದಯವಾಹಿನಿ ಶಿವಮೊಗ್ಗ


ಉದಯವಾಹಿನಿ ಚಿತ್ರ

ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ ಆರೋಪಗಳ ಹಿನ್ನೆಲೆಯಲ್ಲಿ ಇಲ್ಲಿನ ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಎಸ್.ಪ್ರಕಾಶ್ ಹಾಗೂ ಭದ್ರಾವತಿ ತಾಲ್ಲೂಕಿನ ಅಂತರಗಂಗೆ ಗ್ರಾಮ ಪಂಚಾಯ್ತಿ ಅಧ್ಯಕ್ಷ ಬಿ.ನಾಗೇಶ್ ಅವರ ಮನೆಗಳ ಮೇಲೆ ಶುಕ್ರವಾರ ಮುಂಜಾನೆ ಲೋಕಾಯುಕ್ತ ಪೊಲೀಸರ ದಾಳಿ ನಡೆಸಿದ್ದಾರೆ.

ಶಿವಮೊಗ್ಗ ಲೋಕಾಯುಕ್ತ ಎಸ್ಪಿ ಮಂಜುನಾಥ ಚೌಧರಿ ನೇತೃತ್ವದಲ್ಲಿ ಅಧಿಕಾರಿಗಳ ತಂಡ ಕೃಷಿ ನಗರದಲ್ಲಿರುವ ಪ್ರಕಾಶ್ ನಿವಾಸ ಹಾಗೂ ಅಂತರ ಗಂಗೆಯಲ್ಲಿರುವ ನಾಗೇಶ್ ಮನೆ ಮೇಲೆ ದಾಳಿ ನಡೆಸಿ ಪರಿಶೀಲನೆ ನಡೆಸುತ್ತಿದೆ. ನಾಗೇಶ್ ಭದ್ರಾವತಿ ತಾಲ್ಲೂಕಿನ ಕಾಂಗ್ರೆಸ್ ಪಕ್ಷದ ಮುಖಂಡ ಆಗಿದ್ದಾರೆ. ಶಾಸಕ ಬಿ.ಕೆ.ಸಂಗಮೇಶ ಆಪ್ತ ಬಳಗದಲ್ಲಿದ್ದಾರೆ. ಈ ಹಿಂದೆ ಭದ್ರಾವತಿ ತಾಲ್ಲೂಕಿನ ಬಗರ್ ಹುಕುಂ ಸಮಿತಿ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ.

# ತಂಗುದಾಣಗಳ ಕೊರತೆ: ರಸ್ತೆಯಲ್ಲೇ ಕಾಯುವ ಅನಿವಾರ್ಯತೆ

• ಉದಯವಾಹಿನಿ ಹೊಸದುರ್ಗ

ಬಸ್‌ಗಳಿಗೆ ಕಾಯುವ ಪ್ರಯಾಣಿಕರಿಗೆ ಪಟ್ಟಣದ ವಿವಿಧೆಡೆ ತಂಗುದಾಣಗಳಿಲ್ಲ. ಇದರಿಂದಾಗಿ ಮಕ್ಕಳು, ಮಹಿಳೆಯರು, ವೃದ್ಧರು ಹೈರಾಣಾಗುತ್ತಿದ್ದಾರೆ. ರಸ್ತೆಯಲ್ಲೇ ನಿಲ್ಲಬೇಕಾದ ಅನಿವಾರ್ಯತೆ ಇದೆ. ಪಟ್ಟಣದ ಪೊಲೀಸ್ ಠಾಣೆ ಮುಂಭಾಗ, ಸಿದ್ಧರಾಮೇಶ್ವರ ಸಮುದಾಯ ಭವನ, ಟಿ.ಬಿ.ವೃತ್ತ, ಹುಳಿಯಾರು ವೃತ್ತಗಳಲ್ಲಿ ತಂಗುದಾಣಗಳಿಲ್ಲ. ನಿತ್ಯ ನೂರಾರು ಬಸ್‌ಗಳಲ್ಲಿ ಸಾವಿರಾರು ಜನ ಓಡಾಡುವ ಈ ಸ್ಥಳಗಳಲ್ಲಿ ನಿಲ್ದಾಣ ಇಲ್ಲದ ಕಾರಣ ಜನರು ಬಿಸಿಲಿನಲ್ಲಿ, ಮಳೆಯಲ್ಲಿ ನಿಲ್ಲಬೇಕಾಗಿದೆ.

ಹೊಳಲ್ಕೆರೆ, ದಾವಣಗೆರೆ, ಚಿತ್ರದುರ್ಗ, ಅಜ್ಜಂಪುರ, ಕಡೂರು, ಬೀರೂರು ಮಾರ್ಗವಾಗಿ ಸಂಚರಿಸುವ ಖಾಸಗಿ ಹಾಗೂ ಕೆಎಸ್‌ಆರ್‌ಟಿಸಿ ಬಸ್ ನಿಲುಗಡೆಗೆ ಪೊಲೀಸ್ ಠಾಣೆ ಮುಂಭಾಗ ಅವಕಾಶ ಕಲ್ಪಿಸಲಾಗಿದೆ. ಪ್ರತಿ ಸೋಮವಾರ ಹೊಸದುರ್ಗದಲ್ಲಿ ಸಂತೆ ನಡೆಯುವ ಕಾರಣ ಜನದಟ್ಟಣೆ ಹೆಚ್ಚು. ತಂಗುದಾಣ ಇಲ್ಲದ್ದರಿಂದ ಸಮಸ್ಯೆ ಹೆಚ್ಚಾಗಿದೆ. 'ಹುಳಿಯಾರು ಮಾರ್ಗದಲ್ಲಿ ಸಂಚರಿಸುವವರ ಸಂಖ್ಯೆಯೂ ಹೆಚ್ಚಿದೆ. ಸಾವಿರಾರು ವಿದ್ಯಾರ್ಥಿಗಳು ಸರ್ಕಾರಿ ಪ್ರಥಮದರ್ಜೆ ಕಾಲೇಜಿಗೆ ಬರುತ್ತಾರೆ. ವಿದ್ಯಾರ್ಥಿಗಳಿಗೆ ತಂಗುದಾಣಗಳಿಲ್ಲದೇ ಸಮಸ್ಯೆಯಾಗಿದೆ. ಸಿದ್ಧರಾಮನಗರದಲ್ಲಿ ಪ್ರವಾಸಿ ಮಂದಿರದ ಎದುರು ಒಂದು ಸುಸಜ್ಜಿತ ಪ್ರಯಾಣಿಕರ ತಂಗುದಾಣ ನಿರ್ಮಾಣವಾದರೆ ಅನುಕೂಲವಾಗುತ್ತದೆ' ಎಂಬುದು ವಿದ್ಯಾರ್ಥಿಗಳ ಒತ್ತಾಯ.

ಹುಳಿಯಾರು ವೃತ್ತದ ಸಮೀಪ ಬಸ್ ತಂಗುದಾಣ ನಿರ್ಮಿಸಲು ಸಭೆಯಲ್ಲಿ ಚರ್ಚಿಸಿ ಅನುದಾನ ಮೀಸಲಿಡಲಾಗುವುದು. ಹೊಳಲ್ಕೆರೆ ಮಾರ್ಗದಲ್ಲಿ ನಡೆಯುತ್ತಿರುವ ರಸ್ತೆ ಕಾಮಗಾರಿ ಮುಗಿದ ನಂತರ ಟಿ.ಬಿ. ವೃತ್ತದಲ್ಲಿ ತಂಗುದಾಣ ನಿರ್ಮಿಸಲಾಗುವುದು.

-ತಿಮ್ಮರಾಜು ಜಿ.ವಿ. ಪುರಸಭೆ ಮುಖ್ಯಾಧಿಕಾರಿ


ಉದಯವಾಹಿನಿ ಚಿತ್ರ

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 09:00 ರಿಂದ 10:30 |
| ಗುಳಿಕ ಕಾಲ | ಬೆಳಿಗ್ಗೆ | 06:00 ರಿಂದ 07:30 |
| ಯಮಗಂಡ ಕಾಲ | ಮಧ್ಯಾಹ್ನ | 01:30 ರಿಂದ 03:00 |

**ಮೇಷ** ನೀವು ಯೋಗ ಧ್ಯಾನದೊಂದಿಗೆ ದಿನವನ್ನು ಪ್ರಾರಂಭಿಸಬಹುದು. ಇದನ್ನು ಮಾಡುವುದರಿಂದ ನಿಮಗೆ ಪ್ರಯೋಜನಕಾರಿಯಾಗುತ್ತದೆ ಮತ್ತು ದಿನವಿಡೀ ನಿಮ್ಮಲ್ಲಿ ಶಕ್ತಿ ಉಳಿದಿರುತ್ತದೆ.

**ವೃಷಭ** ಕಿರಿಕಿರಿ ನಿಮ್ಮ ಮಾನಸಿಕ ಶಾಂತಿಗೆ ತೊಂದರೆ ತಂದರೂ ಒಬ್ಬ ಸ್ನೇಹಿತರು ನಿಮ್ಮ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಅಪಾರವಾದ ಸಹಾಯ ಮಾಡುತ್ತಾರೆ. ಒತ್ತಡ ತೊಡೆದುಹಾಕಲು ಹಿತವಾದ ಸಂಗೀತವನ್ನು ಆಲಿಸಿ.

**ಮಿಥುನ** ಚಾಲನೆ ಮಾಡುವಾಗ ಎಚ್ಚರ ವಹಿಸಿ. ವ್ಯಾಪಾರಿಗಳಿಗೆ ಇಂದು ವ್ಯಾಪಾರದಲ್ಲಿ ಹಾನಿ ಉಂಟಾಗಬಹುದು ಮತ್ತು ತಮ್ಮ ವ್ಯಾಪಾರವನ್ನು ಉತ್ತಮಗೊಳಿಸಲು ನೀವು ಹಣವನ್ನು ಖಾರುಚು ಮಾಡಬೇಕಾಗುತ್ತದೆ.

**ಕರ್ಕಾಟಕ** ನೀವು ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸಿದಲ್ಲಿ ಖಿನ್ನತೆಗೊಳಗಾಗಬೇಡಿ. ಆಹಾರದ ಸ್ವಾದಕ್ಕೆ ಉಪ್ಪು ಬೇಕಾದ ಹಾಗೆ ಅತೃಪ್ತಿಯಿಂದ ಮಾತ್ರ ನೀವು ಸಂತೋಷದ ಮೌಲ್ಯವನ್ನು ಅರ್ಥ ಮಾಡಿಕೊಳ್ಳುತ್ತೀರಿ.

**ಸಿಂಹ** ನಿಮಗೇನು ಒಳ್ಳೆಯದೆಂದು ನಿಮಗೆ ಮಾತ್ರ ಗೊತ್ತು – ಆದ್ದರಿಂದ ಧೃಢವಾಗಿರಿ ಮತ್ತು ಧೈರ್ಯಶಾಲಿಗಳಾಗಿರಿ ಮತ್ತು ತಕ್ಷಣದ ನಿರ್ಧಾರಗಳನ್ನು ತೆಗೆದುಕೊಳ್ಳಿ ಹಾಗೂ ಫಲಿತಾಂಶಗಳಿಗೆ ಸಿದ್ಧವಾಗಿರಿ.

**ಕನ್ಯಾ** ನಿಮ್ಮನ್ನು ನೀವೇ ನೋಡಿಕೊಳ್ಳುವ ಬಯಕೆಗೆ ಇತರರ ಅಗತ್ಯಗಳು ಕಡಿವಾಣ ಹಾಕುತ್ತವೆ. ಭಾವನೆಗಳನ್ನು ತಡೆಹಿಡಿಯಬೇಡಿ ಹಾಗೂ ವಿಶ್ರಾಂತಿ ಪಡೆಯುವ ಸಲುವಾಗಿ ನೀವು ಇಷ್ಟಪಡುವುದನ್ನೇನಾದರೂ ಮಾಡಿ.

**ತುಲಾ** ಇದು ನಿಮ್ಮನ್ನು ಒಬ್ಬ ಗಾಬರಿಯ ವ್ಯಕ್ತಿಯನ್ನಾಗಿಯೂ ಮಾಡುತ್ತದೆ. ದೀರ್ಘಕಾಲದವರೆಗೆ ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿದ್ದವರು, ಅವರು ಇಂದು ಎಲ್ಲಿಂದಲಾದರೂ ಹಣವನ್ನು ಪಡೆಯಬಹುದು.

**ವೃಶ್ಚಿಕ** ನಿಮ್ಮ ಭಯವನ್ನು ಗುಣಪಡಿಸಲು ಇದು ಒಳ್ಳೆಯ ಸಮಯ. ಇದು ಭೌತಿಕ ಚೈತನ್ಯವನ್ನು ಕಡಿಮೆ ಮಾಡುವುದಲ್ಲದೇ ಜೀವಿತಾವಧಿಯನ್ನೂ ಕಡಿಮೆ ಮಾಡುತ್ತದೆ ಎಂದು ನೀವು ಅರ್ಥ ಮಾಡಿಕೊಳ್ಳಬೇಕು.

**ಧನಸ್ಸು** ಮನೆಯಿಂದ ಹೊರಗೆ ಹೋಗುವ ಮೂಲಕ, ಇಂದು ನೀವು ತೆರೆದ ಗಾಳಿಯಲ್ಲಿ ನಡೆಯಲು ಬಯಸುತ್ತೀರಿ. ಇಂದು ನಿಮ್ಮ ಮನಸ್ಸು ಶಾಂತವಾಗಿರುತ್ತದೆ, ಅದು ದಿನವಿಡೀ ನಿಮಗೆ ಪ್ರಯೋಜನವನ್ನು ನೀಡುತ್ತದೆ.

**ಮಕರ** ನಿಮ್ಮ ಸಭ್ಯ ನಡವಳಿಕೆ ಮೆಚ್ಚುಗೆ ಪಡೆಯುತ್ತದೆ. ಅನೇಕ ಜನರು ನಿಮ್ಮನ್ನು ಹೊಗಳುತ್ತಾರೆ. ಹಣಕಾಸು ಸ್ಥಿತಿ ಊಹಾಪೋಹ ಅಥವಾ ಅನಿರೀಕ್ಷಿತ ಲಾಭದ ಮೂಲಕ ಸುಧಾರಿಸುತ್ತವೆ.

**ಕುಂಭ** ಕೆಲಸ ಮತ್ತು ಮನೆಯಲ್ಲಿನ ಕೆಲವು ಒತ್ತಡ ನಿಮ್ಮ ಸಹನೆಯನ್ನು ಪರೀಕ್ಷಿಸುತ್ತದೆ. ಇಂವು ನಿಮಗೆ ನಿಮ್ಮ ಸಹೋದರ ಅಥವಾ ಸಹೋದರಿಯ ಸಹಾಯದಿಂದ ಹಣದ ಲಾಭವಾಗುವ ಸಾಧ್ಯತೆ ಇದೆ.

**ಮೀನ** ನೀವು ಯೋಗ ಧ್ಯಾನದೊಂದಿಗೆ ದಿನವನ್ನು ಪ್ರಾರಂಭಿಸಬಹುದು. ಇದನ್ನು ಮಾಡುವುದರಿಂದ ನಿಮಗೆ ಪ್ರಯೋಜನಕಾರಿಯಾಗುತ್ತದೆ ಮತ್ತು ದಿನವಿಡೀ ನಿಮ್ಮಲ್ಲಿ ಶಕ್ತಿ ಉಳಿದಿರುತ್ತದೆ.

# ಗೋವಿಂದಾಪುರ: ಮೂಲ ಸೌಲಭ್ಯವೇ ಮರೀಚಿಕೆ

## ನಮಗೆ ಸೂರು ಕೊಟ್ಟಿದ್ದೀರಿ, ಅಲ್ಲಿ ಮೂಲಸೌಕರ್ಯ ಕಲ್ಪಿಸಿ ಬದುಕಿಗೆ ಅವಕಾಶ ಮಾಡಿಕೊಡಿ : ಫಲಾನುಭವಿಗಳು

• ಉದಯವಾಹಿನಿ ಶಿವಮೊಗ್ಗ

ನಮಗೆ ಸೂರು ಕೊಟ್ಟಿದ್ದೀರಿ. ಅಲ್ಲಿ ಮೂಲ ಸೌಕರ್ಯ ಕಲ್ಪಿಸಿ, ಘನತೆಯ ಬದುಕಿಗೆ ಅವಕಾಶ ಮಾಡಿಕೊಡಿ..' ಇದು ತಾಲ್ಲೂಕಿನ ಗೋವಿಂದಾಪುರ ಗ್ರಾಮದ ವಸತಿ ಯೋಜನೆಯಡಿ ಮನೆಗಳಲ್ಲಿ ವಾಸವಿರುವ ಫಲಾನುಭವಿಗಳ ಅಳಲು.

ಮಹಾನಗರ ಪಾಲಿಕೆಯಿಂದ ಗೋವಿಂದಾಪುರದಲ್ಲಿ ಎರಡು ಮಹಡಿಯ (ಜಿ+2) ವಿನ್ಯಾಸದಲ್ಲಿ 3,000 ಮನೆಗಳ ನಿರ್ಮಾಣ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ. ಅದರಲ್ಲಿ ವಾಸಕ್ಕೆ ಸಿದ್ಧವಾಗಿರುವ ಮನೆಗಳಿಗೆ ಲಾಟರಿ ಮೂಲಕ 600 ಫಲಾನುಭವಿಗಳ ಆಯ್ಕೆ ಮಾಡಲಾಗಿದೆ. ಆ ಪೈಕಿ ಕೆಲವರು ಬಂದು ಮನೆಗಳಲ್ಲಿ ವಾಸ ಆರಂಭಿಸಿದ್ದಾರೆ.

ಮೂಲ ಸೌಕರ್ಯಗಳ ಕೊರತೆಯ ಕಾರಣಕ್ಕೆ ಉಳಿದವರು ಬರಲು ಹಿಂದೇಟು ಹಾಕುತ್ತಿದ್ದಾರೆ. ಹೀಗಾಗಿ ಬಹಳಷ್ಟು ಕಟ್ಟಡಗಳು ಖಾಲಿ ಬಿದ್ದಿವೆ. ಇನ್ನೂ ಕೆಲವು ಬ್ಲಾಕ್‌ಗಳಲ್ಲಿ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಮೆಸ್ಕಾಂನಿಂದ ವಿದ್ಯುತ್ ಸಂಪರ್ಕ ಕಲ್ಪಿಸುವ ಕೆಲಸವೂ ಬಾಕಿ ಇದೆ.'ಈಗ ವಾಸ ಇರುವ ಫಲಾನುಭವಿಗಳಿಗೆ ಕೊಳವೆ ಬಾವಿ (ಬೋರ್‌ವೆಲ್) ನೀರು ಕೊಡಲಾಗುತ್ತಿದೆ. ಅವು ಕುಡಿಯಲು ಯೋಗ್ಯವಾಗಿಲ್ಲ. ನೀರು ಶುದ್ಧೀಕರಣ ಯಂತ್ರ (ಅಕ್ವಾಗಾರ್ಡ್) ಹಾಕಿಕೊಳ್ಳಬೇಕು. ಅದು ಎಲ್ಲರಿಗೂ ಆಗುವುದಿಲ್ಲ. ಇಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಆರಂಭಿಸಲಿ' ಎಂದು ಗೋವಿಂದಾಪುರ ಆಶ್ರಯ ಯೋಜನೆ ನಿವಾಸಿಗಳ ಸಂಘದ ಅಧ್ಯಕ್ಷ ಶಂಕರ್ ಒತ್ತಾಯಿಸುತ್ತಾರೆ.

> ಇಲ್ಲಿನ ಸಮಸ್ಯೆಗಳ ಬಗ್ಗೆ ಶಾಸಕ ಎಸ್.ಎನ್.ಚನ್ನಬಸಪ್ಪ ಹಾಗೂ ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಅವರ ಗಮನಕ್ಕೆ ತಂದಿದ್ದೇವೆ. ಸ್ಥಳ ಪರಿಶೀಲನೆ ಮಾಡಿದ್ದಾರೆ. ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮದ ಭರವಸೆ ನೀಡಿದ್ದಾರೆ
> -ಶಂಕರ್ ಗೋವಿಂದಾಪುರ, ವಸತಿ ಯೋಜನೆ ನಿವಾಸಿಗಳ ಸಂಘದ ಅಧ್ಯಕ್ಷ

ಇಲ್ಲಿಗೆ 24X7 ಕುಡಿಯುವ ನೀರು ಪೂರೈಕೆ ವ್ಯವಸ್ಥೆ ಕಲ್ಪಿಸಲು ಈ ಹಿಂದೆ ಕೆ.ಎಸ್.ಈಶ್ವರಪ್ಪ ಸಚಿವರಾಗಿದ್ದಾಗ ಹಣ ಮೀಸಲಿಟ್ಟಿದ್ದರು. ಆದರೆ ಇನ್ನೂ ಕೆಲಸ ಮುಗಿದಿಲ್ಲ. ಅದು ಆಮೆಗತಿಯಲ್ಲಿ ಸಾಗಿದೆ' ಎಂದು ಶಂಕರ್ ಬೇಸರ ವ್ಯಕ್ತಪಡಿಸುತ್ತಾರೆ.


ಉದಯವಾಹಿನಿ ಚಿತ್ರ

> ಶೀಘ್ರ ಎಸ್‌ಟಿಪಿ ನಿರ್ಮಾಣ ಕಾಮಗಾರಿ ಆರಂಭವಾಗಲಿದೆ. 24x7 ಕುಡಿಯುವ ನೀರಿನ ಕಾಮಗಾರಿ ನಡೆಯುತ್ತಿದೆ. ಅದಕ್ಕೆ ವೇಗ ನೀಡಲಾಗುವುದು. ಅನರ್ಹರಿಗೆ ಮನೆಗಳನ್ನು ಕೊಟ್ಟಿದ್ದರೆ ಪಟ್ಟಿ ಪುನರ್ ಪರಿಶೀಲಿಸಲಾಗುವುದು
> -ಕವಿತಾ ಯೋಗಪ್ಪನವರ ಪಾಲಿಕೆ ಆಯುಕ್ತೆ

ಗೋವಿಂದಾಪುರದ ವಸತಿ ಯೋಜನೆ ಸ್ಥಳದಿಂದ ಶಿವಮೊಗ್ಗ ನಗರಕ್ಕೆ ನಿರಂತರವಾಗಿ ಸಿಟಿ ಬಸ್ ಸೇವೆ ಇಲ್ಲ. ಮಕ್ಕಳಿಗೆ ಶಾಲೆಗೆ ಹೋಗಲೂ, ಆಸ್ಪತ್ರೆಗಳಿಗೆ ತೆರಳಲು ತೊಂದರೆ ಆಗಲಿದೆ. ಹೀಗಾಗಿ ಆಯ್ಕೆಯಾದ ಫಲಾನುಭವಿಗಳು ಮನೆಗಳಿಗೆ ಬರಲು ಹಿಂದೇಟು ಹಾಕುತ್ತಿದ್ದಾರೆ. ಸಾರಿಗೆ ಸಂಸ್ಥೆ ಇಲ್ಲವೇ ಖಾಸಗಿಯವರು ನಿರಂತರವಾಗಿ ಇಲ್ಲಿಂದ ಸಿಟಿ ಬಸ್ ವ್ಯವಸ್ಥೆ ಆರಂಭಿಸಲಿ' ಎಂದು ನಿವಾಸಿಗಳು ಒತ್ತಾಯಿಸುತ್ತಾರೆ.

'ಇಲ್ಲಿನ ಮನೆಗಳ ವಿನ್ಯಾಸ ಅತ್ಯುತ್ತಮವಾಗಿದೆ. ಯೋಜನೆ ಪೂರ್ಣಗೊಂಡರೆ 4,600ಕ್ಕೂ ಹೆಚ್ಚು ಬಡ ಕುಟುಂಬಗಳ ಸ್ವಂತ ಸೂರಿನ ಕನಸಿಗೆ ಜೀವ ಸಿಗಲಿದೆ. ಫಲಾನುಭವಿ 7.70 ಲಕ್ಷ ಭರಿಸಬೇಕಿದೆ. ಟೌನ್‌ಶಿಪ್, ವಿಶಾಲ ಟಾರ್ ರಸ್ತೆಗಳು, ಮನೆಗಳಿಗೆ ಗಾಳಿ-ಬೆಳಕಿನ ವ್ಯವಸ್ಥೆ ಎಲ್ಲವೂ ಚೆನ್ನಾಗಿದೆ. ಆದರೆ ಅನುಷ್ಠಾನದಲ್ಲಿ ಎಡವಲಾಗಿದೆ' ಎಂಬ ಆರೋಪ ಕೇಳಿಬಂದಿವೆ.

ಗೋವಿಂದಾಪುರದಲ್ಲಿ ಹಾಲಿ ಕೈಗೆತ್ತಿಕೊಂಡಿರುವ ಮನೆಗಳ ಜೊತೆಗೆ ಹೆಚ್ಚುವರಿಯಾಗಿ 800 ಹಾಗೂ ಗೋಪಿಶೆಟ್ಟಿಕೊಪ್ಪದಲ್ಲಿ 800 ಮನೆಗಳ ನಿರ್ಮಾಣಕ್ಕೆ ಯೋಜಿಸಲಾಗಿದೆ. ಎಲ್ಲದಕ್ಕೂ ಜಾಗ ಗುರುತಿಸಲಾಗಿದೆ. ಕಾಮಗಾರಿ ಎಂಟು ವರ್ಷಗಳಿಂದಲೂ ನಡೆಯುತ್ತಲೇ ಇದೆ. ಸರ್ಕಾರ ಬದಲಾಗುತ್ತಿದ್ದಂತೆಯೇ ಕೆಲಸದ ವೇಗದಲ್ಲೂ ಏರಿಳಿತ ಕಾಣುತ್ತದೆ. ಸರ್ಕಾರ ಇತ್ತ ಗಮನ ಹರಿಸಲಿ ಎಂದು ಶಂಕರ್ ಆಗ್ರಹಿಸುತ್ತಾರೆ.

### ಮನೆ ಹಂಚಿಯಲ್ಲಿ ತಾರತಮ್ಯ

ಮನೆಗಳನ್ನು ಬಡವರಿಗಾಗಿ ನಿರ್ಮಿಸಿದ್ದರೂ ಪತಿ ಪತ್ನಿ ಇಬ್ಬರೂ ಬ್ಯಾಂಕ್ ಉದ್ಯೋಗದಲ್ಲಿ ಇರುವವರು ದುಬಾರಿ ಕಾರು ಹೊಂದಿರುವವರು ನಗರದಲ್ಲಿ ಸ್ವಂತ ಮನೆ ಇದ್ದು ಇದನ್ನು ಬಾಡಿಗೆ ಕೊಡಲು ಮುಂದಾಗಿರುವವರಿಗೆ ಕೆಲವು ಅನರ್ಹರಿಗೆ ಮನೆ ಹಂಚಿಕೆ ಮಾಡಲಾಗಿದೆ ಎಂಬ ಆರೋಪಗಳಲ್ಲಿ ಒಂದಷ್ಟು ಹುರುಳಿದೆ ಎಂದು ನಿವಾಸಿಗಳ ಸಂಘದ ಅಧ್ಯಕ್ಷ ಶಂಕರ್ ಒಪ್ಪಿಕೊಳ್ಳುತ್ತಾರೆ. ಆದರೆ ಒಂದೇ ಪಕ್ಷದ ಕಾರ್ಯಕರ್ತರಿಗೆ ಜನಪ್ರತಿನಿಧಿಯೊಬ್ಬರ ಹಿಂಬಾಲಕರಿಗೆ ಮಾತ್ರ ಮನೆಗಳ ಹಂಚಿಕೆ ಮಾಡಿ ತಾರತಮ್ಯ ಮಾಡಲಾಗಿದೆ ಎಂಬ ಆರೋಪವನ್ನು ಅವರು ನಿರಾಕರಿಸುತ್ತಾರೆ.

## ಎಟಿಎಂ ಕಳ್ಳತನಕ್ಕೆ ಯತ್ನ: ಪ್ರಕರಣ ದಾಖಲು

• ಉದಯವಾಹಿನಿ ಜೇವರ್ಗಿ

ಪಟ್ಟಣದ ಮುಖ್ಯರಸ್ತೆಯ ಪಕ್ಕದಲ್ಲಿರುವ ಎಟಿಎಂನಲ್ಲಿ ಇಲ್ಲಿರುವ ಹಣ ಕಳ್ಳತನಕ್ಕೆ ಯತ್ನ ಮಾಡಿದ ವ್ಯಕ್ತಿಯನ್ನು ನಮ್ಮ ಸಿಬ್ಬಂದಿಗಳು ವಶಕ್ಕೆ ಪಡೆದುಕೊಂಡು ತನಿಖೆ ನಡೆಸುತ್ತಿದ್ದಾರೆ ಎಂದು ಪಿಎಸ್‌ಐ ಸುರೇಶ ಕುಮಾರ ಚೌವಾಣ್ ತಿಳಿಸಿದ್ದಾರೆ.

ಪಟ್ಟಣದ ಮುಖ್ಯ ರಸ್ತೆ ಪಕ್ಕದಲ್ಲಿರುವ ಎಸ್ ಬಿ ಐ ಎಸ್ ಬಿ ಐ ಬ್ಯಾಂಕಿನ ಎಟಿಎಂ ಬಾಗಿಲು ತೆರೆದು ಹಣ ದೋಚ್ಚಲು ಯತ್ನಿಸುತ್ತಿರುವಾಗಲೇ ನಮ್ಮ ಪೊಲೀಸ್ ಸಿಬ್ಬಂದಿಗಳನ್ನು ನೋಡಿದ ತಕ್ಷಣ ಹಣದೋಚಲು ಬಂದ ವ್ಯಕ್ತಿ ಪರಾರಿಯಾಗಿದ್ದಾನೆ. ನಂತರ ಬೆಳಗ್ಗೆ ನಮ್ಮ ಪೊಲೀಸ್ ಸಿಬ್ಬಂದಿಗಳು ಮತ್ತು ಕ್ರೈಂ ಪಿಎಸ್‌ಐ ಅವರ ನೇತೃತ್ವದಲ್ಲಿ ನಮ್ಮ ಶ್ವಾನದಳದೊಂದಿಗೆ ಕಳ್ಳತನ ಮಾಡಲು ಯತ್ನಿಸಿದ ವ್ಯಕ್ತಿಯ ಹುಡುಕಾಟ ಪ್ರಾರಂಭ ಮಾಡಿದರು. ನಂತರ ಕಳ್ಳತನ ಮಾಡಲು ಯತ್ನಿಸಿದ ವ್ಯಕ್ತಿ ನಮ್ಮ ಸಿಬ್ಬಂದಿ ಹುಡುಕಿ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದರು. ಕಳ್ಳತನ ಮಾಡಲು ಯತ್ನಿಸಿದ ವ್ಯಕ್ತಿ ಮೇಲೆ ಪ್ರಕರಣ ದಾಖಲ ಮಾಡಿಕೊಂಡು ತನಿಖೆ ನಡೆಸುತ್ತಿದ್ದೇವೆ ಎಂದು ಪಿಎಸ್‌ಐ ಸುರೇಶ ಕುಮಾರ ಚೌಹಾಣ್ ತಿಳಿಸಿದ್ದಾರೆ.



ಉದಯವಾಹಿನಿ ಚಿತ್ರ

ಈ ಸಂದರ್ಭದಲ್ಲಿ ಕ್ರೈಂ ಪಿಎಸ್‌ಐ ಸಿದ್ದರಾಮ, ಸಿದ್ದಣ್ಣ ಪಿ ಸಿ, ಶ್ರೀಮಂತ ನೇರಡಗಿ, ಪೊಲೀಸ್ ಸಿಬ್ಬಂದಿಗಳು ಹಾಗೂ ಬ್ಯಾಂಕ್ ಮ್ಯಾನೇಜರ್ ಉಪಸ್ಥಿತರಿದ್ದರು.

## ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಿ: ಸಂಗಮೇಶ

• ಉದಯವಾಹಿನಿ, ಗದಗ

ಧಾರವಾಡದ ಕರ್ನಾಟಕ ರಾಜ್ಯ ಬಾಲ ವಿಕಾಸ ಅಕಾಡಮಿಯಅಧ್ಯಕ್ಷರಾದ ಸಂಗಮೇಶ ಬಬಲೇಶ್ವರ ಅವರು ನಗರದ ಬಾಲಕಿಯರ ಸರಕಾರಿ ಬಾಲ ಮಂದಿರಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಅವರು ಅಲ್ಲಿನ ವಸತಿ, ಆಹಾರ ಪದಾರ್ಥಗಳು, ಕ್ರೀಡೆ ಹಾಗೂ ಆರೋಗ್ಯಕ್ಕೆ ಸಂಬಂಧಿಸಿದ ಪರಿಕರಗಳನ್ನು ಪರಿಶೀಲಿಸಿದರು. ಮಕ್ಕಳೊಂದಿಗೆ ಸಂವಾದ ಮಾಡಿ, ಮಕ್ಕಳ ಕುಶಲೋಪರಿ ವಿಚಾರಿಸಿದರು, ಮಕ್ಕಳ ಹವ್ಯಾಸಗಳು, ಮಕ್ಕಳ ವಿಶೇಷ ಪ್ರತಿಭೆಗಳ ಬಗ್ಗೆ ಚರ್ಚಿಸಿದರು. ಮಕ್ಕಳು ತಯಾರಿಸಿದ ಕರಕುಶಲ ವಸ್ತುಗಳನ್ನು ವೀಕ್ಷಿಸಿದರು.

ಮಕ್ಕಳಿಗೆ ಕೌಟುಂಬಿಕ ವಾತಾವರಣವನ್ನು ಸೃಷ್ಟಿಸುವುದು, ಮಕ್ಕಳ ಸಮಸ್ಯೆಗಳಿಗೆ ಸ್ಪಂದಿಸುವುದು ಮಕ್ಕಳೊಂದಿಗೆ ನಿರಂತರ ಸಮಾಲೋಚನೆ ಮಾಡುವುದು ಹಾಗೂ ಸೂಕ್ತ ಮಾರ್ಗದರ್ಶನ ನಿಡುವ ಮೂಲಕ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಅಧಿಕಾರಿಗಳು ಹಾಗೂ ಸಿಬ್ಬಂಧಿಗಳು ಶ್ರಮಿಸಬೇಕು ಎಂದು ತಿಳಿಸಿದರು. ಬಾಲಮಂದಿರ ಕಟ್ಟಡ ವೀಕ್ಷಿಸಿ ಮಕ್ಕಳ ಹಿತದೃಷ್ಠಿಯಿಂದ ಕಂಪೌಂಡ ಅವಶ್ಯವಿದ್ದು, ಬೇಗನೆ ಅನುದಾನ ಬಿಡುಗಡೆಗೆ ಅನುಪಾಲನೆ ಮಾಡಲು ಸೂಚಿಸಿದರು. ಮಳೆಗಾಲದ ಅವಧಿಯಲ್ಲಿ ಸಾಂಕ್ರಾಮಿಕ ರೋಗಗಳಾದ ಡೆಂಗ್ಯೂ, ಚಿಕನ್‌ಗುನ್ಯಾ ದಂತಹ ಸಾಂಕ್ರಾಮಿಕ ರೋಗಗಳು ಮಕ್ಕಳಿಗೆ ತಾಗದಂತೆ ಎಚ್ಚರ ವಹಿಸಿ ಮತ್ತು ವಸತಿ ನಿಲಯದ ಸುತ್ತಮುತ್ತ ಕೊಳಚೆ ನೀರು ನಿಲ್ಲದಂತೆ ಎಚ್ಚರ ವಹಿಸಬೇಕೆಂದು ಸೂಚಿಸಿದರು.


ಉದಯವಾಹಿನಿ ಚಿತ್ರ

### ಮಕ್ಕಳ ವಿಶೇಷ ಪ್ರತಿಭೆಗಳ ಬಗ್ಗೆ ಚರ್ಚೆ

ಈ ಸಂದರ್ಭದಲ್ಲಿ ಬಾಲಕಿಯರ ಸರಕಾರಿ ಬಾಲಮಂದಿರದ ಅಧೀಕ್ಷಕರು ಶ್ರೀಮತಿ ಲಕ್ಷ್ಮೀ ಬಾಗೇವಾಡಿ, ಶ್ರೀಮತಿ ಶಶಿಕಲಾ ಕವಲೂರು ಮತ್ತು ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿ ಪ್ರವೀಣಕುಮಾರ ಬೆಟಗೇರಿ, ಶ್ರೀಮತಿ ರೂಪಾ ಎಸ್ ಉಪ್ಪಿನ್ ಹಾಗೂ ರವಿ ಉಮಚಗಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

## ಮನೆ ಕುಸಿದು ತಾಯಿ-ಮಕ್ಕಳಿಬ್ಬರು ಸಾವು

• ಉದಯವಾಹಿನಿ, ಹಾವೇರಿ

ನಿರಂತರ ಮಳೆಯಿಂದಾಗಿ ಇಲ್ಲಿಯ ಸವಣೂರು ತಾಲ್ಲೂಕಿನ ಕಾರಡಗಿ ಬಳಿಯ ಮಾದಾಪುರದಲ್ಲಿ ಮನೆಯೊಂದು ಕುಸಿದು ತಾಯಿ ಹಾಗೂ ಅವರ ಇಬ್ಬರು ಮಕ್ಕಳು ಮೃತಪಟ್ಟಿದ್ದಾರೆ.

ಗ್ರಾಮದ ಚನ್ನಮ್ಮ ದೊಡ್ಡಬಸಪ್ಪ ಹರಕುಣಿ (35), ಅಮೂಲ್ಯ ಮುತ್ತಪ್ಪ ಹರಕುಣಿ (2) ಹಾಗೂ ಅನುಶ್ರೀ ಮುತ್ತಪ್ಪ ಹರಕುಣಿ (2) ಮೃತರು. ಯಲ್ಲಮ್ಮ ದೊಡ್ಡಬಸಪ್ಪ ಹರಕುಣಿ (70) ಅವರು ಗಾಯಗೊಂಡಿದ್ದು, ಹಾವೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಮುತ್ತಪ್ಪ ಹರಕುಣಿ ಅವರಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ಜಿಲ್ಲೆಯಲ್ಲಿ ಗುರುವಾರದಿಂದ ಶುಕ್ರವಾರ ನಸುಕಿನವರೆಗೂ ನಿರಂತರವಾಗಿ ಮಳೆ ಆಗಿದೆ. ಚನ್ನಮ್ಮ ಹಾಗೂ ಕುಟುಂಬದವರು ಗುರುವಾರ ಮನೆಯಲ್ಲಿ ಮಲಗಿದ್ದರು. ಶುಕ್ರವಾರ ನಸುಕಿನಲ್ಲಿ ಮನೆ ಕುಸಿದು, ಅವರ ಮೈ ಮೇಲೆಯೇ ಅವಶೇಷಗಳು ಬಿದ್ದಿವೆ. ಇದರಿಂದ ತಾಯಿ-ಮಕ್ಕಳಿಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಗ್ರಾಮಸ್ಥರೊಬ್ಬರು ತಿಳಿಸಿದರು.


ಉದಯವಾಹಿನಿ ಚಿತ್ರ

ಘಟನಾ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿದ್ದು, ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಿದ್ದಾರೆ.

## ದಲಿತರ ಪರ ಇದ್ದೇವೆ ಎಂದು ಹೇಳುವ ಸಿಎಂಗೆ ಯಾವ ನೈತಿಕತೆ ಇದೆ?

• ಉದಯವಾಹಿನಿ, ಸಿಂಧನೂರು

ಮಾನ್ಯಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರದಲ್ಲಿ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ187 ಕೋಟಿ ರೂ ಅವ್ಯವಹಾರ ನಡೆದಿದ್ದು. ತಾವೇ ಏನು ಶೋಷಿತರು ದೀನ ದಲಿತರ ಪರವಾಗಿ ಇದ್ದೇವೆ ಎಂದು ಹೇಳುತ್ತಾರೆ ಯಾವ ನೈತಿಕತೆ ಇದೆ ಯಕ್ಷ ಪ್ರಶ್ನೆ ಯಾಗದೆ...?

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಬಿಜೆಪಿ ಪಕ್ಷದ ಗ್ರಾಮೀಣ ಘಟಕದ ಅಧ್ಯಕ್ಷರಾದ ಯಂಕೋಬ ನಾಯಕ್ ಅವರು ಬಿಜೆಪಿ. ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳು ಭ್ರಷ್ಟಾಚಾರ ಅವ್ಯವಹಾರ ಮಾಡಿರುವಂತಹದ್ದು

ನಾವು ಈಗಾಗಲೇ ನೋಡಿದ್ದೇವೆ ಆದರೆ ಒಂದು ಸಮುದಾಯದ ದುಡ್ಡನ್ನು ತಮ್ಮ ವೈಯಕ್ತಿಕ ಸ್ವಂತಕ್ಕೆ ಬೆಳೆಸಿಕೊಳ್ಳುತ್ತಿರುವುದು ಎಷ್ಟರ ಮಟ್ಟಿಗೆ ಸರೀ ಮತ್ತು ಇದಕ್ಕೆ ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ನವರ ಕೈವಾಡ ಇರಬೇಕು ಎಂದರು. ಪರಿಶಿಷ್ಟ ಪಂಗಡದ ಅನುದಾನ ಒಬ್ಬ ವ್ಯಕ್ತಿಯ ಅಕೌಂಟಿಗೆ ಹೋಗಿ ಮೊನ್ನೆ ತಾನೆ ನಡೆದ ಲೋಕಸಭಾ ಚುನಾವಣೆಗೆ ಖರ್ಚು ಮಾಡಿದ್ದು ಪಕ್ಕದ ರಾಜ್ಯ ತೆಲಂಗಾಣ ರಾಜ್ಯಕ್ಕೆ ಚುನಾವಣೆ ಖರ್ಚಿಗಾಗಿ ಈ ಹಣವನ್ನು ಕಬಳಿಸಿದ್ದಾರೆ ಎಂದರು.



ಉದಯವಾಹಿನಿ ಚಿತ್ರ

ಕಾಂಗ್ರೆಸ್ ಪಕ್ಷ 136 ಸೀಟುಗಳನ್ನು ಗೆದ್ದು. ಒಬ್ಬ ವಾಲ್ಮೀಕಿ ಸಮುದಾಯದ ಮಂತ್ರಿಯಾದ ನಾಗೇಂದ್ರ ಮತ್ತು ವಾಲ್ಮೀಕಿ ಸಮುದಾಯದ ನಿಗಮದ ಅಧ್ಯಕ್ಷ ಬಸನಗೌಡ ದದ್ದಲ್ ಅವರು ನಮ್ಮ ಸಮಾಜಕ್ಕೆ ಏನಾದರೂ ಕೊಡುಗೆಗಳನ್ನು ನೀಡುತ್ತಾರೆಂಬ ಸಮುದಾಯದಲ್ಲಿ ಒಂದು ನೀರೀಕ್ಷೆ ಇತ್ತು.ಆದರೆ ನೀರೀಕ್ಷೆ ಹುಸಿಯಾಗಿದೆ ಎಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ಮುಖಂಡ ಸಿದ್ದರಾಮಪ್ಪ. ಮಲ್ಲಿಕಾರ್ಜುನ. ಮಹಾದೇವ ನಾಯಕ್ ಸೇರಿದಂತೆ ಇತರರು ಸುದ್ದಿ ಗೋಷ್ಠಿಯಲ್ಲಿ ಇದ್ದರು.

### ಬಾದರ್ಲಿ ಕೈಗೊಂಬೆಯಾಗಿ ಕೆಲಸ

ಇವತ್ತು ಸಿಂಧನೂರು ವಿಧಾನಸಭಾ ಕ್ಷೇತ್ರದಲ್ಲಿ. ಅಕ್ರಮ ಅವ್ಯವಹಾರ ಜೋದಾಟ. ಇಸ್ಪೀಟ್ ದಂಧೆ. ಓಸಿ ಗಾಂಜಾ ವೈವಾಟ್. ಮರಳು ಮಾಫಿಯಾ ದಂಧೆಕೋರರು ರಾಜಾರೋಷವಾಗಿ ತಾಲ್ಲೂಕಿನಲ್ಲಿ ನಡೆಯುತ್ತಿದ್ದರೂ ಪೋಲಿಸ್ ಇಲಾಖೆ ಅಧಿಕಾರಿಗಳು ಶಾಸಕ ಹಂಪನಗೌಡ ಬಾದರ್ಲಿ ಕೈ ಗೊಂಬೆಯಾಗಿ ಕೆಲಸ ಮಾಡುತ್ತದೆ ಇದಕ್ಕೆ ಕಾರಣ ತಾಲ್ಲೂಕು ಆಡಳಿತ ಸಂಪೂರ್ಣವಾಗಿ ಕುಸಿದಿದೆ ಎಂದು ವಾಗ್ದಾಳಿ ನಡೆಸಿದರು.

## ಸ್ವಚ್ಛತೆ ಕಾಪಾಡಿ ಸಾಂಕ್ರಾಮಿಕ ರೋಗಗಳಿಂದ ದೂರವಿರಿ: ಇಓ ಮಲ್ಲಿಕಾರ್ಜುನ ಸಂಗ್ವಾರ

• ಉದಯವಾಹಿನಿ, ವಡಗೇರಾ

ಮಳೆಗಾಲದಲ್ಲಿ ವಾರಗಟಲೆ ನೀರು ಸಂಗ್ರಹಿಸದೆ, ನೀರು ಬದಲಿಸಿ ಸ್ವಚ್ಛತೆ ಕಾಪಾಡಿ ಸಾಂಕ್ರಾಮಿಕ ರೋಗಗಳಿಂದ ದೂರವಿರುವಂತೆ ವಡಗೇರಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಮಲ್ಲಿಕಾರ್ಜುನ ಸಂಗ್ವಾರ ಹೇಳಿದರು. ವಡಗೇರಾ ತಾಲ್ಲೂಕು ಪಂಚಾಯತ್ ವ್ಯಾಪ್ತಿಯ ತಡಿಬಿಡಿ ಗ್ರಾಮಕ್ಕೆ ಭೇಟಿ ನೀಡಿ, ಗ್ರಾಮದ ವಿವಿಧ ಬಡಾವಣೆಗಳಲ್ಲಿ ಸಂಚರಿಸಿ, ಮನೆ ಮನೆ ಭೇಟಿ ನೀಡಿ ಸ್ವಚ್ಛತೆ ವ್ಯವಸ್ಥೆ ಪರಿಶೀಲಿಸಿದರು. ಮಳೆಗಾಲ ಸಂದರ್ಭದಲ್ಲಿ ವಾರಗಟಲೆ ನೀರು ಸಂಗ್ರಹಿಸದೆ, ಆಗಾಗ ನೀರನ್ನು ಬದಲಾಯಿಸಿ ಸ್ವಚ್ಛವಾಗಿ ಪಾತ್ರೆ, ಮಡಿಕೆಗಳನ್ನು ತೊಳೆದು ಪುನಃ ನೀರು ಸಂಗ್ರಹಿಸಬೇಕು ಎಂದರು ಮನೆಯಲ್ಲಿ ಚಿಕ್ಕ ಮಕ್ಕಳು ಗರ್ಭಿಣಿಯರು ಹಾಗೂ ತಾಯಂದಿರು ನೀರನ್ನು ಕಾಯಿಸಿಕೊಂಡು ಕುಡಿಯಲು ಸಲಹೆ ನೀಡಿದರು.


ಉದಯವಾಹಿನಿ ಚಿತ್ರ

ಅಲ್ಲದೆ ಮನೆಯ ಮುಂದಿನ ಚರಂಡಿ, ಟೈರ್. ಟ್ಯಾಂಕ್ ಗಳಲ್ಲಿ ಮಳೆ ಸಂಗ್ರಹವಾಗಿದ್ದು ಗಮನಿಸಿ ಸ್ವಚ್ಛಗೊಳಿ ಸೊಳ್ಳೆಗಳ ಉತ್ಪಾದನೆಯಾಗದಂತೆ ಗಮನ ಹರಿಸಲು ಗ್ರಾಮಸ್ಥರಿಗೆ ಸ್ವಚ್ಛತೆ ಬಗ್ಗೆ ಅರಿವು ಮೂಡಿಸಿದರು. ಅಲ್ಲದೆ ಕುಡಿಯುವ ನೀರನ್ನು ಆಗಾಗ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಸಿಬ್ಬಂದಿ ವರ್ಗದವರು ಪರೀಕ್ಷಿಸಿ ನೀರು ಪೂರೈಕೆ ಮಾಡುವಂತೆ ಸೂಚಿಸಿದರು. ಈ ವೇಳೆ ಆರೋಗ್ಯ ಸಿಬ್ಬಂದಿಗಳು, ಪಿಡಿಓ ಹಾಗೂ ಆಶಾ ಕಾರ್ಯಕರ್ತೆಯರು ಗ್ರಾಮದಲ್ಲಿ ಸಂಚರಿಸಿ ಆರೋಗ್ಯದ ಜಾಗೃತಿ ಮೂಡಿಸಿದರು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಉಮಾರಡ್ಡಿ, ಪಿಡಿಓ ಗೋವಿಂದ ರಾಠೋಡ, ಟಿಐಇಸಿ ದುರ್ಗೇಶ್ ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿಗಳು ಅಂಗನವಾಡಿ ಆಶಾ ಕಾರ್ಯಕರ್ತೆಯರು ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

## ಭೂ ಕುಸಿತಕ್ಕೆ ಶಿರಾಡಿ ಘಾಟ್ ಬ್ಲಾಕ್

• ಉದಯವಾಹಿನಿ, ಪುತ್ತೂರು

ಶಿರಾಡಿ ಘಾಟಿ ಪ್ರದೇಶದಲ್ಲಿ ಭೂಕುಸಿತ ಉಂಟಾದ ಹಿನ್ನೆಲೆ ಸಂಚಾರವನ್ನು ನಿರ್ಬಂಧಿಸಲಾಗಿದೆ. ಶುಕ್ರವಾರ ಬೆಳಗ್ಗೆ ಗುಂಡ್ಯದಲ್ಲಿ ಗೇಟ್ ತೆರೆಯದೆ ಹೋದ ಕಾರಣ ಬೆಂಗಳೂರು ಕಡೆಗೆ ಹೋಗುವ ನೂರಾರು ವಾಹನಗಳು ಶಿರಾಡಿ ಬಳಿ ಸರತಿಯಲ್ಲಿ ನಿಂತಿದೆ. ರಸ್ತೆ ಸಂಪೂರ್ಣ ಬ್ಲಾಕ್ ಆಗಿದೆ. ಶುಕ್ರವಾರ ಬೆಳಗ್ಗೆ ಗುಂಡ್ಯದಲ್ಲಿ ಗೇಟ್ ತೆರೆಯದ ಕಾರಣ ನೂರಾರು ವಾಹನಗಳು ರಸ್ತೆಯಲ್ಲೇ ನಿಂತಿದ್ದು, ಸಾರ್ವಜನಿಕರು ಪರದಾಡುವಂತಾಗಿದೆ. ಧರ್ಮಸ್ಥಳದಿಂದ ಸುಬ್ರಹ್ಮಣ್ಯಕ್ಕೆ ತೆರಳುವ ಯಾತ್ರಾರ್ಥಿಗಳಿಗೆ ಸಮಸ್ಯೆಯಾಗಿದೆ. ಕೆಲ ದಿನಗಳಿಂದ ಭಾರೀ ಮಳೆ ಸುರಿಯುತ್ತಿರುವುದರಿಂದ ಈ ಪ್ರದೇಶದಲ್ಲಿ ಗುಡ್ಡಗಳು ಕುಸಿದಿವೆ. ಬುಧವಾರ ತಡರಾತ್ರಿ ಭೂಕುಸಿತದ ಹಿನ್ನೆಲೆ ವಾಹನವೊಂದು ಮಣ್ಣಿನಡಿ ಸಿಲುಕಿದ್ದು, ಶಿರಾಡಿ ಘಾಟ್ ಮೂಲಕ ಸಂಚರಿಸುವ ಪ್ರಯಾಣಿಕರಿಗೆ ನಿಷೇಧ ಮಾಡಿ ಜಿಲ್ಲಾಧಿಕಾರಿ ಆದೇಶಿಸಿದ್ದಾರೆ.

## ಪರೀಕ್ಷಾ ಕೇಂದ್ರಗಳ ಸುತ್ತ 200 ಮೀ ನಿಷೇದಾಜ್ಞೆ ಡಿಸಿ ಪ್ರಶಾಂತ್ ಕುಮಾರ್ ಮಿಶ್ರಾ ಆದೇಶ

• ಉದಯವಾಹಿನಿ, ಬಳ್ಳಾರಿ



ನಗರದ 02 ಪರೀಕ್ಷಾ ಕೇಂದ್ರಗಳಲ್ಲಿ ಜು.22 ರಿಂದ 31 ರ ವರೆಗೆ ವಾಣಿಜ್ಯ ಪರೀಕ್ಷೆಗಳು ನಡೆಯಲಿದ್ದು, ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯ ಆವರಣವನ್ನು ದಂಡ ಪ್ರಕ್ರಿಯಾ ಸಂಹಿತೆ 1973 ರ ಕಲಂ 144 ರನ್ವಯ ನಿಬರ್ಂಧಿತ ಪ್ರದೇಶವೆಂದು ಘೋಷಿಸಿ ಜಿಲ್ಲಾ ದಂಡಾಧಿಕಾರಿಯಾಗಿರುವ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಆದೇಶಿಸಿದ್ದಾರೆ. ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ಜೆರಾಕ್ಸ್, ಇಂಟರ್ನೆಟ್ ಸೆಂಟರ್‌ಗಳು ಕಾರ್ಯನಿರ್ವಹಿಸದಂತೆ ಮುಚ್ಚಲು ಆದೇಶಿಸಿದ್ದು, ಅನಧಿಕೃತ ವ್ಯಕ್ತಿ ಮತ್ತು ವ್ಯಕ್ತಿಗಳ ಗುಂಪುಗಳಿಗೆ ಪ್ರವೇಶ ನಿಷೇಧಿಸಲಾಗಿದೆ. ಈ ಆದೇಶವು ಪರೀಕ್ಷಾ ಮೇಲ್ವಿಚಾರಣೆ ಕಾರ್ಯ ನಿರ್ವಹಿಸುವ ಸಿಬ್ಬಂದಿಯವರಿಗೆ ಅನ್ವಯಿಸುವುದಿಲ್ಲ ಎಂದು ಅವರು ಆದೇಶದಲ್ಲಿ ತಿಳಿಸಿದ್ದಾರೆ

## ರೈಲ್ವೆ ಮಾರ್ಗ ನಿರ್ಮಿಸಲು ಮನವಿ

• ಉದಯವಾಹಿನಿ,ಚಿಂಚೋಳಿ


ಉದಯವಾಹಿನಿ ಚಿತ್ರ

ಬೀದರ- ತಾಂಡೂರ ಮಾರ್ಗವಾಗಿ ಹೈದರಾಬಾದ್ ಮತ್ತು ಬೆಂಗಳೂರು ಹೋಗಲು ನೂತನವಾಗಿ ನಿರ್ಮಿಸುತ್ತಿರುವ ರೈಲ್ವೆ ಮಾರ್ಗವು ಚಿಂಚೋಳಿ ಪಟ್ಟಣದ ಮಾರ್ಗವಾಗಿ ಸಾಗುವಂತೆ ಕೇಂದ್ರ ಸರ್ಕಾರಕ್ಕೆ ಒತ್ತಾಡ ಹಾಕಿ ಚಿಂಚೋಳಿ ಮಾರ್ಗವಾಗಿ ರೈಲ್ವೆ ಮಾರ್ಗ ಮಾಡುವಂತೆ ಬೀದರ ಲೋಕಸಭಾ ಸದಸ್ಯ ಸಾಗರ್ ಈಶ್ವರ ಖಂಡ್ರೆಯವರಿಗೆ ಬೀದರ ನಿವಾಸದಲ್ಲಿ ಚಿಂಚೋಳಿ ಪ್ರದೇಶಾಭಿವೃದ್ಧಿ ಸಮಿತಿ ಭೇಟಿಯಾಗಿ ಮನವಿ ಸಲ್ಲಿಸಿದ್ದರು. ಈ ಸಂದರ್ಭದಲ್ಲಿ ನಂದಕುಮಾರ ಪಾಟೀಲ,ಶಂಕರ ಶಿವಪೂರಿ,ಮಹೇಶ ಹಿತ್ತಲ,ಮಲ್ಲಿಕಾರ್ಜುನ ಹಿತ್ತಲ,ಭೀಮರಾವ ಪಾಟೀಲ,ಬಸವರಾಜ ಮಾಸ್ಟರ,ರಾಜೇಂದ್ರ ತಾದಲಾಪೂರ,ಶಿವಶರಣಪ್ಪಾ ಜಾಪಟ್ಟಿ,ಶ್ರೀನಿವಾಸ,ಮಂಜುನಾಥ ಲೆವಡಿ ಅನೇಕರಿದ್ದರು.

## ಕಾರ್ಮಿಕ ಮಕ್ಕಳಿಂದ ಅರ್ಜಿ ಆಹ್ವಾನ

• ಉದಯವಾಹಿನಿ ಚಿತ್ರದುರ್ಗ

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಗೆ ವಂತಿಕೆ ಪಾವತಿಸುವ ಸಂಘಟಿತ ಕಾರ್ಮಿಕರ ಮಕ್ಕಳಿಂದ ಪ್ರೌಢ ಶಾಲೆಯಿಂದ ಸ್ನಾತ್ತಕೋತ್ತರ ಪದವಿಯವರೆಗೆ ಹಾಗೂ ವೈದ್ಯಕೀಯ, ಇಂಜಿನಿಯರಿಂಗ್‌ನಲ್ಲಿ ವ್ಯಾಸಂಗ ಮಾಡುತ್ತಿರುವವರಿಗೆ 2024-25ನೇ ಸಾಲಿಗೆ ಶೈಕ್ಷಣಿಕ ಪ್ರೋತ್ಸಾಹಧನ ಸಹಾಯಕ್ಕೆ ಆನ್‌ಲೈನ್ ಮುಖಾಂತರ ಅರ್ಜಿ ಆಹ್ವಾನಿಸಲಾಗಿದೆ. 2025ರ ಜನವರಿ 31 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದೆ. ಕಾರ್ಮಿಕರ ಮಾಸಿಕ ವೇತನ ರೂ.35,000/- ಗಿಂತ ಮೀರಿರಬಾರದು. ಒಂದು ಕುಟುಂಬದಲ್ಲಿ ಒಬ್ಬ ವಿದ್ಯಾರ್ಥಿಗೆ ಮಾತ್ರ ಈ ಸೌಲಭ್ಯ ನೀಡಲಾಗುವುದು.

ಶೈಕ್ಷಣಿಕ ಪ್ರೋತ್ಸಾಹಧನ ಸಹಾಯ ಬಯಸುವ ವಿದ್ಯಾಥಿಗಳು ಆನ್‌ಲೈನ್ ಮುಖಾಂತರ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ ವೆಬ್‌ಸೈಟ್‌ನಲ್ಲಿ WWW.klwbapps.karnataka.gov.in ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಅರ್ಜಿ ಸಲ್ಲಿಸಲು ವಿದ್ಯಾರ್ಥಿಯು ಹಿಂದಿನ ವರ್ಷದಲ್ಲಿ ಸಾಮಾನ್ಯ ವರ್ಗ ಶೇ.50, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು ಶೇ.45 ರಷ್ಟು ಅಂಕ ಪಡೆದು ತೇರ್ಗಡೆಯಾಗಿರಬೇಕು.

ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ, ಕಾರ್ಮಿಕ ಕಲ್ಯಾಣ ಭವನ, ನಂ.48, 1ನೇ 2ನೇ ಮಹಡಿ, ಮತ್ತೀಕೆರೆ ಮುಖ್ಯ ರಸ್ತೆ, ಯಶವಂತಪುರ, ಬೆಂಗಳೂರು-560022 ಇಲ್ಲಿ ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ 080-23475188, 8277291175, 8277120505, 9141585402, 9141602562 ಮೂಲಕ ಸಂಪರ್ಕಿಸಬಹುದಾಗಿದೆ ಎಂದು ಚಿತ್ರದುರ್ಗ ಕಾರ್ಮಿಕ ಅಧಿಕಾರಿಗಳು ತಿಳಿಸಿದ್ದಾರೆ.

# ಬ್ರಿಮ್ಸ್‌ನ ಹೆರಿಗೆ ವಿಭಾಗದಲ್ಲಿ ದುಡ್ಡು ಕೊಟ್ಟರಷ್ಟೇ ಚಿಕಿತ್ಸೆ

## ಸಾಕಷ್ಟು ದೂರುಗಳು ಸಲ್ಲಿಕೆಯಾಗಿವೆ, ಸಿಬ್ಬಂದಿಯೊಂದಿಗೆ ಜಗಳಗಳಾಗಿವೆ, ಇದುವರೆಗೆ ಯಾರ ವಿರುದ್ಧವೂ ಕ್ರಮ ಜರುಗಿಸಿಲ್ಲ

• ಉದಯವಾಹಿನಿ ಬೀದರ್

ನಗರದ ಬೀದರ್ ವೈದ್ಯಕೀಯ ವಿಜ್ಞಾನ ಸಂಸ್ಥೆಯ (ಬ್ರಿಮ್ಸ್) ಹೆರಿಗೆ ವಿಭಾಗದಲ್ಲಿ ಪ್ರತಿಯೊಂದಕ್ಕೂ ದುಡ್ಡು ಕೊಡಬೇಕು. ದುಡ್ಡು ಕೊಡದಿದ್ದರೆ ಹೆರಿಗೆ ಆಗುವುದಿಲ್ಲ, ಇದು ನಗರದ ಲ್ಲಿನ ಬ್ರಿಮ್ಸ್ ಅವಸ್ಥೆ. ಹಣ ಕೊಡದಿದ್ದರೆ ಹೆರಿಗೆ ವಿಭಾಗದಲ್ಲಿರುವ ಸಿಬ್ಬಂದಿ ಮಹಿಳೆಯರನ್ನು ವಾರ್ಡ್ ಗೆ ಕೊಂಡೊಯ್ಯುವುದಿಲ್ಲ. ಹೆರಿಗೆ ಮೊದಲು, ಹೆರಿಗೆ ಮುಗಿಸಿಕೊಂಡು ಹೋಗುವವರೆಗೆ ಪ್ರತಿ ಯೊಂದಕ್ಕೂ ಹಣ ಕೊಡಬೇಕು. ಬಾಣಂತಿಗೆ ಬಿಸಿ ನೀರು ಬೇಕಾದರೂ ದುಡ್ಡು ಕೊಡಲೇಬೇಕು. ಈ ಸಂಬಂಧ ಸಾಕಷ್ಟು ದೂರುಗಳು ಸಲ್ಲಿಕೆಯಾಗಿವೆ. ಸಿಬ್ಬಂದಿಯೊಂದಿಗೆ ಜಗಳಗಳಾಗಿವೆ. ಆದರೆ, ಇದುವರೆಗೆ ಯಾರ ವಿರುದ್ಧವೂ ಕ್ರಮ ಜರುಗಿಸಿಲ್ಲ.

ಈ ಸಂಬಂಧ ಬ್ರಿಮ್ಸ್ ನಿರ್ದೇಶಕ ಶಿವಕುಮಾರ ಶೆಟಕಾರ ಅವರನ್ನು ಸಂಪರ್ಕಿಸಿದಾಗ, ಈ ಕುರಿತ ದೂರುಗಳಿಗೆ ಸಂಬಂಧಿಸಿದಂತೆ ಮೂವರು ನರ್ಸ್‌ಗಳ ವಿರುದ್ಧ ಕ್ರಮಕ್ಕೆ ಶಿಫಾರಸು ಮಾಡಲಾಗಿದೆ. ಪ್ರತಿಯೊಂದು ದೂರುಗಳನ್ನು ಗಂಭೀರವಾಗಿ ಸ್ವೀಕರಿಸಿ, ಸಿಬ್ಬಂದಿ ವಿರುದ್ಧ ಕ್ರಮ ಜರುಗಿಸಲು ಸಮಿತಿ ರಚಿಸಲಾಗಿದೆ ಎಂದು ತಿಳಿಸುವುದರ ಮೂಲಕ ಅಲ್ಲಿ ನಡೆಯುತ್ತಿರುವ ಅಕ್ರಮಗಳನ್ನು ಒಪ್ಪಿಕೊಂಡಿದ್ದಾರೆ.

> ಜಿಲ್ಲಾ ಸರ್ಕಾರಿ ಆಸ್ಪತ್ರೆಯನ್ನು ಬ್ರಿಮ್ಸ್‌ಗೆ ವಹಿಸಲಾಗಿದೆ. ಅದರ ಮೇಲೆ ಸಂಪೂರ್ಣ ನಿಯಂತ್ರಣ ಬ್ರಿಮ್ಸ್ ನಿರ್ದೇಶಕರಿಗೆ ಇದೆ. ಅಲ್ಲಿ ನಾವೇನೂ ಮಾಡುವಂತಿಲ್ಲ. ನಮ್ಮ ವೈದ್ಯರು ಸಿಬ್ಬಂದಿಯನ್ನು ಅಲ್ಲಿಗೆ ವರ್ಗಾಯಿಸಲಾಗಿದೆ. ಸರ್ಕಾರಿ ಆಸ್ಪತ್ರೆಯ ಜವಾಬ್ದಾರಿ ವೈದ್ಯಕೀಯ ಇಲಾಖೆ ಬದಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ವಹಿಸಿದರೆ ಉತ್ತಮ. ಜಿಲ್ಲೆಯಲ್ಲಿ ಏಳು ಹೆರಿಗೆ ವೈದ್ಯರು ಬಿಟ್ಟರೆ ಎಲ್ಲಾ ಹುದ್ದೆಗಳು ತುಂಬಿವೆ
> -ಡಾ. ಧ್ಯಾನೇಶ್ವರ ನೀರಗುಡಿ, ಡಿಎಚ್‌ಒ

ಬ್ರಿಮ್ಸ್‌ನಲ್ಲಿರುವ ಅವ್ಯವಸ್ಥೆಗಳು ಒಂದೆರಡು ಅಲ್ಲ. ಅಲ್ಲಿನ ಹಿರಿಯ ವೈದ್ಯರು ಹೇಳುವ ಪ್ರಕಾರ, ಪ್ರತಿಯೊಂದು ವಿಭಾಗದಲ್ಲಿ ಖಾಸಗಿ ಆಸ್ಪತ್ರೆಗಳ ಏಜೆಂಟರು ಸದಾ ಓಡಾಡಿಕೊಂಡು ಇರುತ್ತಾರೆ. ರೋಗಿಗಳನ್ನು ಅವರ ಆಸ್ಪತ್ರೆಗಳಿಗೆ ಕರೆದೊಯ್ಯಲು ಪ್ರಯತ್ನ ನಡೆಸಿರುತ್ತಾರೆ. ಇದು ರಾಜಾರೋಷವಾಗಿ ನಡೆಯುತ್ತಿದ್ದರೂ ಅವರನ್ನು ಯಾರೂ ನಿಯಂತ್ರಿಸುವವರು ಇಲ್ಲದಂತಾಗಿದೆ. ಬ್ರಿಮ್ಸ್ ಕಟ್ಟಡ ಹೊರಗಿನಿಂದ ನೋಡಿದರೆ ಥೇಟ್ ಮಾಲ್‌ನಂತೆ ಕಾಣುತ್ತದೆ. ಹೊರಗಿನಿಂದ ಕಟ್ಟಡ ನೋಡಿದವರು ಆಹಾ ಎಂತಹ ಆಸ್ಪತ್ರೆಗೆ ಎಂದು ಹುಬ್ಬೇರಿಸುತ್ತಾರೆ. ಆದರೆ, ಒಳಗೆ ಹೋದರೆ ಅಸ್ವಚ್ಛತೆ ಕಣ್ಣಿಗೆ ರಾಚುತ್ತದೆ. ಬಹುತೇಕ ವಿಭಾಗಗಳ ಶೌಚಾಲಯಗಳು ದುರ್ಗಂಧದಿಂದ ಕೂಡಿವೆ. ಅವುಗಳನ್ನು ಒಮ್ಮೆ ನೋಡಿದವರೂ ಪುನಃ ಬ್ರಿಮ್ಸ್ ಕಡೆ ಮುಖ ಮಾಡಲಾರರು.

ಇಂತಹ ಪರಿಸ್ಥಿತಿ ಇದೆ. ಇನ್ನು, ಇಲ್ಲಿ ಕೆಲಸ ನಿರ್ವಹಿಸುತ್ತಿರುವ ಹೆಚ್ಚಿನ ವೈದ್ಯರು ಖಾಸಗಿ ಕ್ಲಿನಿಕ್, ಆಸ್ಪತ್ರೆಗಳನ್ನು ನಡೆಸುತ್ತಾರೆ. ಸರ್ಕಾರಿ ಸಂಬಳ ಪಡೆದರೂ ಅವರಿಗೆ ಅವರ ಕ್ಲಿನಿಕ್ ಮೇಲೆ ಹೆಚ್ಚಿನ ಪ್ರೀತಿ. ಆದರೆ, ಬ್ರಿಮ್ಸ್‌ನಲ್ಲಿ ಸಮಯಕ್ಕೆ ಅನುಗುಣವಾಗಿ 'ಪಂಚ್' ಮಾಡುವುದು ಮರೆಯುವುದಿಲ್ಲ ಎಂಬ ಆರೋಪಗಳು ಅಲ್ಲಿನವರೇ ಮಾಡುತ್ತಾರೆ. ತುರ್ತು ಇದ್ದಾಗಷ್ಟೇ ಬ್ರಿಮ್ಸ್‌ಗೆ ಬರುತ್ತಾರೆ. ಹೆಚ್ಚಿನ ಸಮಯ ಖಾಸಗಿ ಕ್ಲಿನಿಕ್‌ಗಳಲ್ಲಿ ಇರುತ್ತಾರೆ.

ಬ್ರಿಮ್ಸ್ ಅವ್ಯವಸ್ಥೆ ಕುರಿತು ಸಾಕಷ್ಟು ದೂರುಗಳು ಸಲ್ಲಿಕೆಯಾಗುತ್ತಲೇ ಇವೆ. ಅಲ್ಲಿನ ಸೇವೆ ಕುರಿತು ಸ್ವತಃ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ. ಖಂಡ್ರೆಯವರೇ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಸಮಾಧಾನ ವ್ಯಕ್ತಪಡಿಸಿ, ಕ್ರಮದ ಎಚ್ಚರಿಕೆ ಕೊಟ್ಟಿದ್ದಾರೆ. ಆದರೆ, ಅದು ಬದಲಾಗಿಲ್ಲ. 5ರಿಂದ 6 ಕೋಟಿ ಬೆಲೆಬಾಳುವ ಎಂಆರ್‌ಐ ಮಶೀನ್‌ಗಳಿವೆ. ಆದರೆ, ತುರ್ತಾಗಿ ಕೊಡಲಾಗುವ 'ಎಟ್ರೊಪಿನ್' ಸೇರಿದಂತೆ ಕೆಲ ಅಗ್ಗದ ಇಂಜೆಕ್ಷನ್‌ಗಳಿಲ್ಲ ಎನ್ನುವುದು ವೈದ್ಯರ ದೂರು.


ಉದಯವಾಹಿನಿ ಚಿತ್ರ

### ಜನರ ನಿರೀಕ್ಷೆ ಹುಸಿ

ಜಿಲ್ಲಾ ಸರ್ಕಾರಿ ಆಸ್ಪತ್ರೆಯನ್ನು ವಿಲೀನಗೊಳಿಸಿ 2005ರಲ್ಲಿ ಬ್ರಿಮ್ಸ್ ಆರಂಭಿಸಲಾಯಿತು. ಹಿಂದುಳಿದ ಬೀದರ್ ಜಿಲ್ಲೆಯ ಜನರಿಗೆ ಉತ್ತಮ ಆರೋಗ್ಯ ಸೇವೆ ಕಲ್ಪಿಸಿಕೊಡಬೇಕು ಎನ್ನುವುದು ಇದರ ಉದ್ದೇಶವಾಗಿತ್ತು. ಆದರೆ, ಜನರ ನಿರೀಕ್ಷೆ ಹುಸಿಯಾಗಿದೆ. ಅಲ್ಲಿನ ಅವ್ಯವಸ್ಥೆಯಿಂದ ಜನ ಬ್ರಿಮ್ಸ್‌ಗೆ ಹೋಗಲು ಹಿಂದೇಟು ಹಾಕುತ್ತಿದ್ದಾರೆ. ಜಿಲ್ಲೆಯ ಪಾಲಿಗೆ ಬ್ರಿಮ್ಸ್ ಬಿಳಿ ಆನೆಯಾಗಿ ಮಾರ್ಪಟ್ಟಿದೆ. ಈಗಲೂ ಬಹುತೇಕರು ಚಿಕಿತ್ಸೆಗೆ ಹೈದರಾಬಾದ್, ಸೊಲ್ಲಾಪುರಕ್ಕೆ ಹೋಗುವುದು ನಿಂತಿಲ್ಲ.

### ಸೇವೆ ಮಾತ್ರ ಅಷ್ಟಕಷ್ಟೇ

ಇತ್ತೀಚೆಗೆ ಪಿ.ಜಿ ಕೋರ್ಸ್ ಆರಂಭಿಸಲು ಅನುಮತಿ ಸಿಕ್ಕಿದೆ. 'ಕ್ಯಾಥ್‌ಲ್ಯಾಬ್' ನಿರ್ಮಾಣ ಕಾರ್ಯ ಭರದಿಂದ ನಡೆಯುತ್ತಿದೆ. ಇಬ್ಬರು ಹೊಸ ಸೂಪರ್ ಸ್ಪೆಷಾಲಿಸ್ಟ್‌ಗಳ ನೇಮಕಕ್ಕೆ ಒಪ್ಪಿಗೆ ಸಿಕ್ಕಿದೆ. ಈಗಾಗಲೇ 200 ವೈದ್ಯರು ಕೆಲಸ ನಿರ್ವಹಿಸುತ್ತಿದ್ದಾರೆ. ಹೆಚ್ಚಿನ ಬಜೆಟ್ ನೀಡಲಾಗುತ್ತಿದೆ. ಆದರೆ, ವೈದ್ಯಕೀಯ ಸೇವೆ ಮಾತ್ರ ಅಷ್ಟಕಷ್ಟೇ. ಆದ್ಯತೆ ಮೇಲೆ ಅದು ಬದಲಾಗಬೇಕೆನ್ನುವುದು ಜನರ ಹಕ್ಕೊತ್ತಾಯವಾಗಿದೆ.

# ಪಾಕಿಸ್ತಾನಕ್ಕೆ ಅತ್ಯುಗ್ರ ಭಾಷೆಯಲ್ಲಿ ಅಫ್ಘಾನಿಸ್ತಾನದ ಪಾಠ

● ಪಾಕಿಸ್ತಾನ ಸರ್ಕಾರವು ಅಫ್ಘಾನಿಸ್ತಾನದ ಮಧ್ಯಂತರ ಸರ್ಕಾರಕ್ಕೆ ಉಗ್ರರನ್ನು ಮಟ್ಟ ಹಾಕಿ ಎಂದು ತಾಕೀತು

**ಇಸ್ಲಾಮಾಬಾದ್:** ನೀನು ಏನು ಕೊಡುತ್ತೀಯೋ.. ಅದೇ ನಿನಗೆ ಮರಳಿ ಸಿಗುತ್ತೆ..! ಈ ಕರ್ಮ ಸಿದ್ಧಾಂತ ಪಾಪಿ ರಾಷ್ಟ್ರ ಪಾಕಿಸ್ತಾನಕ್ಕೆ ಸೂಕ್ತವಾಗಿ ಅನ್ವಯ ಆಗ್ತಿದೆ. ಭಯೋತ್ಪಾದನೆಗೆ ಬೆಂಬಲ, ಭಾರತದ ಒಳಗೆ ಉಗ್ರರನ್ನು ನುಸುಳುವಂತೆ ಮಾಡಿ ದುಷ್ಕೃತ್ಯ ಎಸಗೋದು, ರಾಜತಾಂತ್ರಿಕವಾಗಿ ಭಾರತದ ವಿರುದ್ಧ ಸದಾ ಕಾಲ ಷಡ್ಯಂತ್ರ ರೂಪಿಸುವ ಪಾಕಿಸ್ತಾನಕ್ಕೆ ಇದೀಗ ಮಾಡಿದ್ದುಣ್ಣೋ ಮಹರಾಯ ಎಂಬಂಥಾ ಪರಿಸ್ಥಿತಿ ಬಂದೊದಗಿದೆ. ಪಾಕಿಸ್ತಾನಕ್ಕೆ ಇದೀಗ ಪಾಠ ಕಲಿಸುತ್ತಿರೋದು ಅಫ್ಘಾನಿಸ್ತಾನ.

ಭಾರತದ ಮೇಲೆ ಉಗ್ರರ ದಾಳಿ ನಡೆದ ವೇಳೆ ಪಾಕಿಸ್ತಾನದ ರಾಯಭಾರಿಯನ್ನು ಭಾರತ ಕರೆಸಿಕೊಂಡು ಛೀಮಾರಿ ಹಾಕುವ ರೀತಿಯಲ್ಲೇ ಇದೀಗ ಇಸ್ಲಾಮಾಬಾದ್‌ನಲ್ಲಿ ಇರುವ ಅಫ್ಘಾನಿಸ್ತಾನದ ರಾಯಭಾರಿಯನ್ನು ಕರೆಸಿಕೊಂಡಿರುವ ಪಾಕ್ ಸರ್ಕಾರ, ಅವರಿಗೆ ಛೀಮಾರಿ ಹಾಕುವ ಜೊತೆಯಲ್ಲೇ ಪಾಕಿಸ್ತಾನದ ಆಂತರಿಕ ಭದ್ರತೆ ಕುರಿತಾಗಿ ತನ್ನ ಕಳವಳ ಹೊರ ಹಾಕಿದೆ. ಅಫ್ಘಾನಿಸ್ತಾನದ ತಾಲಿಬಾನ್ ಸರ್ಕಾರದ ಅಡಿಯಲ್ಲಿ ಹಲವು ಉಗ್ರ ಸಂಘಟನೆಗಳು ಕಾರ್ಯ ನಿರ್ವಹಿಸುತ್ತಿವೆ. ಈ ಪೈಕಿ ಹಫೀಜ್ ಗುಲ್ ಬಹದ್ದೂರ್ ಗುಂಪು ಕೂಡಾ ಒಂದು. ಜೊತೆಯಲ್ಲೇ ತೆಹ್ರಿಕ್ – ಇ – ತಾಲಿಬಾನ್ ಪಾಕಿಸ್ತಾನ್ ಉಗ್ರ ಸಂಘಟನೆ ಕೂಡಾ ಈಗಾಗಲೇ ಹತ್ತಾರು ಉಗ್ರ ದಾಳಿಗಳನ್ನ ಪಾಕಿಸ್ತಾನದಲ್ಲಿ ನಡೆಸಿದೆ. ಈ ಮೂಲಕ ಪಾಕಿಸ್ತಾನ – ಅಫ್ಘಾನಿಸ್ತಾನ ಗಡಿಯಲ್ಲಿ ಉಗ್ರರು ಅಸ್ಥಿರತೆ ಉಂಟು ಮಾಡುತ್ತಿದ್ದಾರೆ.

**ಆಂತರಿಕ ಭದ್ರತೆ ಕುರಿತು ಕಳವಳ**

ಭಾರತದ ಮೇಲೆ ಉಗ್ರ ದಾಳಿ ನಡೆದ ಪ್ರತಿ ಬಾರಿಯೂ ಭಾರತ ಸರ್ಕಾರ ಪಾಕಿಸ್ತಾನಕ್ಕೆ ಉಗ್ರ ನಿಗ್ರಹಕ್ಕೆ ತಾಕೀತು ಮಾಡುತ್ತದೆ. ಪ್ರತಿ ಬಾರಿಯೂ ಪಾಕಿಸ್ತಾನ ತನ್ನ ಕೈವಾಡ ಇಲ್ಲ ಎಂದು ಹೇಳುತ್ತದೆ. ಇದೀಗ ಅಫ್ಘಾನಿಸ್ತಾನ ಕೂಡಾ ಇದೇ ತಂತ್ರಗಾರಿಕೆ ಅನುಸರಿಸುತ್ತಿದೆ. ಪಾಕಿಸ್ತಾನ ಸರ್ಕಾರವು ಅಫ್ಘಾನಿಸ್ತಾನದ ಮಧ್ಯಂತರ ಸರ್ಕಾರಕ್ಕೆ ಉಗ್ರರನ್ನು ಮಟ್ಟ ಹಾಕಿ ಎಂದು ತಾಕೀತು ಮಾಡಿದಾಗಲೆಲ್ಲಾ ತನ್ನ ನೆಲದಲ್ಲಿ ಭಯೋತ್ಪಾದಕ ಸಂಘಟನೆಗಳೇ ಇಲ್ಲ ಎಂದು ಅಫ್ಘಾನಿಸ್ತಾನ ಸರ್ಕಾರ ಹೇಳುತ್ತಿದೆ.



- ಪಾಕಿಸ್ತಾನದ ತಂತ್ರವನ್ನೇ ಪಾಕಿಸ್ತಾನದ ವಿರುದ್ಧ ಪ್ರಯೋಗಿಸುತ್ತಿರುವ ಅಫ್ಘಾನಿಸ್ತಾನ
- ತನ್ನ ನೆಲದಲ್ಲಿ ಅಫ್ಘನ್ ಉಗ್ರ ಕೃತ್ಯದ ಸಾಕ್ಷ್ಯ ಕೊಟ್ಟು ಗೋಳಿಡುತ್ತಿದೆ ಪಾಕಿಸ್ತಾನ
- ಏಟು ಬಿದ್ದರೂ ಪಾಠ ಕಲಿಯದ ಪಾಕಿಸ್ತಾನ, ಭಾರತಕ್ಕೆ ಉಗ್ರರ ರಫ್ತು ಮುಂದುವರಿಕೆ

ಆದರೆ, ಪಾಕಿಸ್ತಾನದ ನೆಲದಲ್ಲಿ ಉಗ್ರ ಕೃತ್ಯ ಎಸಗುವ ಭಯೋತ್ಪಾದಕರು ಖುಲ್ಲಂ ಖುಲ್ಲಾ ಅಫ್ಘಾನಿಸ್ತಾನ ಗಡಿಯೊಳಗೆ ಪರಾರಿಯಾಗುವ ಘಟನೆಗಳಿಗೆ ಲೆಕ್ಕವೇ ಇಲ್ಲದಂತಾಗಿದೆ. ಈ ಸಂಬಂಧ ಪಾಕಿಸ್ತಾನ ಸಾಕ್ಷ್ಯ ಕೊಟ್ಟರೂ ಅಫ್ಘಾನಿಸ್ತಾನ ಕ್ಯಾರೇ ಎನ್ನುತ್ತಿಲ್ಲ. ಹಾಗೆ ನೋಡಿದರೆ ಭಾರತ ಕೂಡಾ ಪಾಕಿಸ್ತಾನಕ್ಕೆ ಹಲವು ಬಾರಿ ಸಾಕ್ಷ್ಯ ಕೊಟ್ಟಿತ್ತು. ಆದರೆ, ಪ್ರತಿ ಬಾರಿಯೂ ಪಾಕ್ ಸರ್ಕಾರ ನಿರಾಕರಿಸುತ್ತಲೇ ಇತ್ತು. ಈಗಲೂ ಅದೇ ತಂತ್ರ ಅನುಸರಿಸುತ್ತಿದೆ.

### ಪಾಕಿಸ್ತಾನದ ತಂತ್ರವನ್ನೇ ಪಾಕಿಸ್ತಾನದ ವಿರುದ್ಧ ಪ್ರಯೋಗಿಸುತ್ತಿರುವ ಅಫ್ಘಾನಿಸ್ತಾನ

ಭಾರತದ ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದಕ ಕೃತ್ಯಗಳನ್ನು ಎಸಗಲು ಪಾಕಿಸ್ತಾನ ಉಗ್ರರನ್ನು ರವಾನಿಸುತ್ತಿರುವ ರೀತಿಯಲ್ಲೇ ಇದೀಗ ಅಫ್ಘಾನಿಸ್ತಾನದ ತಾಲಿಬಾನ್ ಸರ್ಕಾರ ಪಾಕಿಸ್ತಾನದೊಳಗೆ ಉಗ್ರರನ್ನು ರವಾನಿಸುತ್ತಿದೆ. ಪಾಕಿಸ್ತಾನದ ಬನ್ನು ಕಂಟೋನ್ಮೆಂಟ್‌ನಲ್ಲಿ ಇತ್ತೀಚೆಗೆ ನಡೆದ ಉಗ್ರ ದಾಳಿಯೇ ಇದಕ್ಕೆ ಸೂಕ್ತ ಉದಾಹರಣೆ. ಪಾಕ್ ಸೇನೆಯ 8 ಯೋಧರನ್ನು ಹತ್ಯೆಗೈದಿರುವ ಉಗ್ರರ ದಾಳಿ ವೇಳೆ ಹತ್ತಾರು ಜನ ತೀವ್ರವಾಗಿ ಗಾಯಗೊಂಡಿದ್ದಾರೆ.

### ಏಟು ಬಿದ್ದರೂ ಪಾಠ ಕಲಿಯದ ಪಾಕಿಸ್ತಾನ

ಇದು ನಿಜಕ್ಕೂ ಕಳವಳಕಾರಿ ಹಾಗೂ ವಿಪರ್ಯಾಸದ ಸಂಗತಿ. ಅಫ್ಘಾನಿಸ್ತಾನದಿಂದ ಪದೇ ಪದೇ ಭಯೋತ್ಪಾದನೆಯ ಪೆಟ್ಟು ತಿನ್ನುತ್ತಿದ್ದರೂ ಕೂಡಾ ಪಾಕಿಸ್ತಾನ ಸೇನೆ ಭಾರತದ ಗಡಿಯೊಳಗೆ ಉಗ್ರರನ್ನು ನುಸುಳಿಸುವ ತನ್ನ ಚಾಳಿಯನ್ನ ಬಿಟ್ಟಿಲ್ಲ. ಉಗ್ರರ ಕೈಗೆ ಚೀನಾ ನಿರ್ಮಿತ ಶಸ್ತ್ರಾಸ್ತ್ರಗಳನ್ನು ಕೊಟ್ಟು ಕಾಶ್ಮೀರಕ್ಕೆ ಛೂ ಬಿಡುವ ಪಾಕಿಸ್ತಾನ, ತನ್ನ ಸೇನೆಯ ನಿವೃತ್ತ ಯೋಧರನ್ನ ಬಳಸಿಕೊಂಡು ಪಾಕ್ ಆಕ್ರಮಿತ ಕಾಶ್ಮೀರದ ಸಾಮಾನ್ಯ ಜನರಿಗೆ ಭಯೋತ್ಪಾದಕ ತರಬೇತಿ ನೀಡುತ್ತಿರುವ ಸಾಕ್ಷ್ಯಗಳು ಸಿಕ್ಕಿವೆ.

## ರಫೇಲ್ ಡೀಲ್‌ಗೆ ಶ್ರಮಿಸಿದ್ದ ವಿನಯ್ ಮೋಹನ್‌ಗೆ ಮಹತ್ವದ ಹುದ್ದೆ

**ವಾಷಿಂಗ್ಟನ್:** ಭಾರತ ಸರ್ಕಾರದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಅಮೆರಿಕ ದೇಶಕ್ಕೆ ಭಾರತದ ಹೊಸ ರಾಯಭಾರಿಯನ್ನು ನೇಮಕ ಮಾಡಿದೆ. ವಿನಯ್ ಮೋಹನ್ ಕ್ವಾತ್ರಾ ಅವರು ಅಮೆರಿಕ ದೇಶಕ್ಕೆ ಹೊಸ ರಾಯಭಾರಿಯಾಗಿ ನೇಮಕವಾಗಿದ್ದು, ಶೀಘ್ರದಲ್ಲೇ ಅವರು ಅಧಿಕಾರ ಸ್ವೀಕಾರ ಮಾಡಲಿದ್ದಾರೆ. ಈ ಸಂಬಂಧ ಜುಲೈ 19 ಶುಕ್ರವಾರ ಭಾರತೀಯ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಆದೇಶ ಹೊರಡಿಸಿದೆ.

ವಿನಯ್ ಮೋಹನ್ ಕ್ವಾತ್ರಾ ಅವರ ಹಿನ್ನೆಲೆ..

1988ರ ಬ್ಯಾಚ್‌ನ ಭಾರತೀಯ ವಿದೇಶಾಂಗ ಸೇವೆ (ಐಎಫ್‌ಎಸ್) ಅಧಿಕಾರಿಯಾಗಿ ನೇಮಕಗೊಂಡ ವಿನಯ್ ಮೋಹನ್ ಕ್ವಾತ್ರಾ ಅವರು, 2022ರ ಏಪ್ರಿಲ್ ತಿಂಗಳಿನಲ್ಲಿ ಭಾರತೀಯ ವಿದೇಶಾಂಗ ಕಾರ್ಯದರ್ಶಿಯಾಗಿ ನೇಮಕವಾಗಿದ್ದರು. ಭಾರತದ ವಿದೇಶಾಂಗ ಕಾರ್ಯದರ್ಶಿಯಾಗಿ ನೇಮಕ ಆಗುವ ಮುನ್ನ ವಿನಯ್ ಮೋಹನ್ ಕ್ವಾತ್ರಾ ಅವರು ನೇಪಾಳದಲ್ಲಿ ಭಾರತದ ರಾಯಭಾರಿಯಾಗಿ ಕಾರ್ಯ ನಿರ್ವಹಣೆ ಮಾಡುತ್ತಿದ್ದರು. ವಿನಯ್ ಮೋಹನ್ ಕ್ವಾತ್ರಾ ಅವರು 2020 ರಲ್ಲಿ ನೇಪಾಳ ರಾಯಭಾರಿಯಾಗಿ ನೇಮಕ ಆಗಿ ಕಾರ್ಯಾರಂಭ ಮಾಡುವ ಮುನ್ನ, ಆಗಸ್ಟ್ 2017 ರಿಂದ ಫೆಬ್ರವರಿ 2020ರವರೆಗೆ ಫ್ರಾನ್ಸ್ ದೇಶದಲ್ಲಿ ಭಾರತದ ರಾಯಭಾರಿಯಾಗಿ ಕಾರ್ಯ ನಿರ್ವಹಿಸಿದ್ದರು.



ಒಟ್ಟಾರೆ 32 ವರ್ಷಗಳ ರಾಜತಾಂತ್ರಿಕ ಹಾಗೂ ವಿದೇಶಾಂಗ ವ್ಯವಹಾರಗಳ ಅನುಭವ ಹೊಂದಿರುವ ವಿನಯ್ ಮೋಹನ್ ಕ್ವಾತ್ರಾ ಅವರು ಪ್ರಧಾನ ಮಂತ್ರಿಗಳ ಕಚೇರಿ (ಪಿಎಂಓ) ನಲ್ಲಿ ಜಂಟಿ ಕಾರ್ಯದರ್ಶಿಯಾಗಿಯೂ ಕೆಲಸ ಮಾಡಿದ್ದರು. 2015ರ ಅಕ್ಟೋಬರ್ ತಿಂಗಳಿನಿಂದ 2017ರ ಆಗಸ್ಟ್ ತಿಂಗಳಿನವರೆಗೆ ಅವರು ಪ್ರಧಾನ ಮಂತ್ರಿಗಳ ಕಚೇರಿಯಲ್ಲಿ ಜಂಟಿ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದ್ದರು.

### ವಿನಯ್ ಮೋಹನ್ ಕ್ವಾತ್ರಾ ಅವರ ವಿಶೇಷತೆ ಏನು?

ವಿನಯ್ ಮೋಹನ್ ಕ್ವಾತ್ರಾ ಅವರು ಭಾರತದ ನೆರೆ ಹೊರೆಯ ರಾಷ್ಟ್ರಗಳ ಜೊತೆ ನಡೆಯುವ ವಿದೇಶಾಂಗ ವ್ಯವಹಾರಗಳಲ್ಲಿ ಪರಿಣಿತಿ ಸಾಧಿಸಿರುವುದಷ್ಟೇ ಅಲ್ಲ, ಅಮೆರಿಕ, ಚೀನಾ ಹಾಗೂ ಐರೋಪ್ಯ ರಾಷ್ಟ್ರಗಳ ಜೊತೆಗಿನ ವಿದೇಶಾಂಗ ವ್ಯವಹಾರ ಹಾಗೂ ದ್ವಿಪಕ್ಷೀಯ ಮಾತುಕತೆಗಳ ವಿಚಾರದಲ್ಲೂ ಪರಿಣಿತಿ ಹೊಂದಿದ್ದಾರೆ.

ವಿನಯ್ ಮೋಹನ್ ಕ್ವಾತ್ರಾ ಅವರು ಫ್ರಾನ್ಸ್ ರಾಯಭಾರಿ ಆಗಿದ್ದ ವೇಳೆ ಭಾರತ – ಫ್ರಾನ್ಸ್ ನಡುವೆ ರಫೇಲ್ ಯುದ್ಧ ವಿಮಾನ ಖರೀದಿ ಒಪ್ಪಂದಕ್ಕೆ ಶ್ರಮಿಸಿದ್ದರು. ಈ ಒಪ್ಪಂದದ ಅನ್ವಯ ಭಾರತ ದೇಶವು ಫ್ರಾನ್ಸ್‌ನಿಂದ 36 ರಫೇಲ್ ಯುದ್ಧ ವಿಮಾನಗಳನ್ನ ಖರೀದಿಸಿತು.

## ಒಬ್ಬ ವ್ಯಕ್ತಿ ಸೂಪರ್ ಮ್ಯಾನ್ ಆಗಲು ಪ್ರಯತ್ನ ಸಲ್ಲದು



**ಗುಮ್ಲಾ/ರಾಂಚಿ:** ಒಬ್ಬ ವ್ಯಕ್ತಿ ಸೂಪರ್ ಮ್ಯಾನ್ ಆಗಲು ಪ್ರಯತ್ನಿಸಬಾರದು ಎಂದು ಆರೆಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಪರೋಕ್ಷವಾಗಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಈ ಸಂದೇಶ ರವಾನಿಸಿದ್ದಾರೆ. ಸ್ವಯಂ ಅಭಿವೃದ್ಧಿಯ ಹಾದಿ ಯಲ್ಲಿ ಒಬ್ಬ ವ್ಯಕ್ತಿ 'ಸೂಪರ್ ಮ್ಯಾನ್ ಆಗಲು ಬಯಸಬಹುದು, ನಂತರ ದೇವತೆ ಮತ್ತು 'ಭಗವಾನ್ ಮತ್ತು 'ವಿಶ್ವರೂಪತೆಗಾಗಿ ಹಾತೊರೆಯಬಹುದು, ಆದರೆ ಮುಂದೆ ಏನಾಗುತ್ತದೆ ಎಂದು ಯಾರಿಗೂ ಖಚಿತವಾಗಿಲ್ಲ ಎಂದಿದ್ದಾರೆ

ಜಾರ್ಖಂಡ್‌ನ ಗುಮ್ಲಾದಲ್ಲಿ ಲಾಭೋದ್ದೇಶವಿಲ್ಲದ ಸಂಸ್ಥೆ ವಿಕಾಸ್ ಭಾರತಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು ಅಂತರಂಗದ ಬೆಳವಣಿಗೆಗೆ ಕೊನೆಯಿಲ್ಲ, ಮಾನವೀಯತೆಗಾಗಿ ಅವಿರತವಾಗಿ ದುಡಿಯಬೇಕು ಎಂದು ತಿಳಿಸಿದ್ದಾರೆ.

ಅಭಿವೃದ್ಧಿ ಮತ್ತು ಮಾನವ ಮಹತ್ವಾಕಾಂಕ್ಷೆಯ ಅನ್ವೇಷಣೆಗೆ ಕೊನೆಯಿಲ್ಲದ ಕಾರಣ ಜನರು ತಮ್ಮ ಸಾಧನೆಗಳಿಂದ ತೃಪ್ತರಾಗಬಾರದು ಮತ್ತು ಮನುಕುಲದ ಕಲ್ಯಾಣಕ್ಕಾಗಿ ಅವಿರತವಾಗಿ ಶ್ರಮಿಸಬೇಕು ಮತ್ತು ಸೇವೆ ಮಾಡಲು ಶ್ರಮಿಸಬೇಕು ಸಲಹೆ ನೀಡಿದ್ದಾರೆ. ಕೆಲಸ ಮುಂದುವರಿಯಬೇಕು, ಪರಿಸರ, ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ನಿರಂತರವಾಗಿ ಕೆಲಸ ಮಾಡಲು ಶ್ರಮಿಸಬೇಕು ಇದಕ್ಕೆ ಅಂತ್ಯವಿಲ್ಲ ಮತ್ತು ವಿವಿಧ ಕ್ಷೇತ್ರಗಳಲ್ಲಿ ನಿರಂತರ ಕೆಲಸವೊಂದೇ ಪರಿಹಾರ. ಈ ಜಗತ್ತನ್ನು ಸುಂದರವಾಗಿಸಲು ಶ್ರಮಿಸಬೇಕು.

ಭಾರತದ ಸ್ವಭಾವದಂತೆಯೇ ಇರಿಸಿ, ಎಂದು ಅವರು ಹೇಳಿದ್ದಾರೆ. ಸಮಾಜದ ಕಲ್ಯಾಣಕ್ಕಾಗಿ ಎಲ್ಲರೂ ಅವಿರತವಾಗಿ ಶ್ರಮಿಸಬೇಕು ಎಂದು ಪ್ರತಿಪಾದಿಸಿದ ಮೋಹನ್ ಭಾಗವತ್ ಅವರು ನಿಜವಾದ ಅರ್ಥದಲ್ಲಿ ಕೆಲಸ ಮಾಡುವವರು "ನಾವು ಕುಳಿತು ಕೇಳುವ ಸಮಯದಲ್ಲಿ ವೇದಿಕೆಯಿಂದಲೇ ಮಾತನಾಡಬೇಕು ಎಂದಿದ್ದಾರೆ.

ದೇಶದ ಭವಿಷ್ಯದ ಬಗ್ಗೆ ಅವರು ಎಂದಿಗೂ ಚಿಂತಿಸಲಿಲ್ಲ ಏಕೆಂದರೆ ಅನೇಕ ಜನರು ಅದರ ಸುಧಾರಣೆಗಾಗಿ ಸಾಮೂಹಿಕವಾಗಿ ಕೆಲಸ ಮಾಡುತ್ತಿದ್ದಾರೆ ಫಲಿತಾಂಶಗಳನ್ನು ತೋರಿಸಲು ಬದ್ಧವಾಗಿದೆ ಎಂದು ತಿಳಿಸಿದ್ದಾರೆ.

## ಆನ್‌ಲೈನ್ ಮದ್ಯ ವಿತರಣೆಗೆ ಅನುಮತಿ

**ನವದೆಹಲಿ:** ಕರ್ನಾಟಕ ದೆಹಲಿ, ಹರಿಯಾಣ, ಪಂಜಾಬ್, ತಮಿಳುನಾಡು, ಗೋವಾ ಮತ್ತು ಕೇರಳ ರಾಜ್ಯದಲ್ಲಿ ಸ್ವಿಗ್ಗಿ, ಜೊಮಾಟೊ ಮತ್ತು ಬಿಗ್ ಬಾಸ್ಕೆಟ್‌ನಂತಹ ವೇದಿಕೆಗಳ ಮೂಲಕ "ಆನ್‌ಲೈನ್ ಮದ್ಯ' ವಿತರಣೆಗೆ ಪ್ರಾಯೋಗಿಕವಾಗಿ ಅನುಮತಿ ನೀಡಲು ಪರಿಶೀಲನೆ ನಡೆದಿದೆ. ಇಕಾಮರ್ಸ್ ವೇದಿಕೆಗಳ ಮೂಲಕ ಸ್ಪಿರಿಟ್ಸ್ ತಯಾರಕರಿಂದ ಆನ್‌ಲೈನ್ ವಿತರಣೆಯ ಸಾಧಕ–ಬಾಧಕಗಳ ಕುರಿತು ರಾಜ್ಯ ಅಧಿಕಾರಿಗಳಿಂದ ಮಾಹಿತಿ ಕಲೆ ಹಾಕಿ ಈ ರೀತಿಯ ಪ್ರಯತ್ನಕ್ಕೆ ಮುಂದಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.




ವರದಿಯ ಪ್ರಕಾರ, ಆರಂಭದಲ್ಲಿ ಕಡಿಮೆ ಆಲ್ಕೋಹಾಲ್ ಪಾನೀಯಗಳಾದ ಬಿಯರ್, ವೈನ್ ಮತ್ತು ಲಿಕ್ಕರ್‌ಗಳನ್ನು ಸ್ವಿಗ್ಗಿ, ಜೊಮಾಟೊ, ಮತ್ತು ಬಿಗ್ ಬ್ಯಾಸ್ಕೆಟ್ ಮೂಲಕ ಸರಬರಾಜು ಮಾಡಲು ಉದ್ದೇಶಿಸಲಾಗಿದೆ. ಗ್ರಾಹಕರ ಆದ್ಯತೆಗಳನ್ನು ಬದಲಾಯಿಸುವ ಮೂಲಕ ಈ ಕ್ರಮ ಕೈಗೊಳ್ಳಲು ಮುಂದಾಗಿದ್ದು ವಿಶೇಷವಾಗಿಯುವ ಜನಸಂಖ್ಯಾಶಾಸ್ತ್ರ, ವಲಸಿಗರು ಮತ್ತು ಸಾಂಪ್ರದಾಯಿಕ ಮದ್ಯದ ಅಂಗಡಿಗಳು ಅನಾನುಕೂಲತೆ ಕಂಡುಕೊಳ್ಳುವ ಮಹಿಳೆಯರಲ್ಲಿ. ಆನ್‌ಲೈನ್ ಪ್ಲಾಟ್‌ಫಾರ್ಮ್‌ಗಳು ಅವರು ವಯಸ್ಸಿನ ಪರಿ ಶೀಲನೆ ಮಾಡಲಾಗುತ್ತಿದೆ ಎನ್ನಲಾಗಿದೆ. ಸ್ವಿಗ್ಗಿಯಲ್ಲಿ ಕಾರ್ಪೊರೇಟ್ ವ್ಯವಹಾ ರಗಳ ಉಪಾಧ್ಯಕ್ಷ ಡಿಂಕರ್ ವಶಿಷ್ಟ ಪ್ರತಿಕ್ರಿಯೆ ನೀಡಿ ಆನ್‌ಲೈನ್ ಮಾದರಿಗಳು ಅಂತ್ಯದಿಂದ ಅಂತ್ಯದ ವಹಿವಾಟು ದಾಖಲೆಗಳು, ವಯಸ್ಸಿನ ಪರಿಶೀಲನೆ ಮತ್ತು ಮಿತಿಗಳಿಗೆ ಬದ್ಧವಾಗಿರುತ್ತವೆ.

ಇದಲ್ಲದೆ, ಆನ್‌ಲೈನ್ ಟೆಕ್ ಸ್ಟ್ಯಾಕ್‌ಗಳು ನಿಯಂತ್ರಕ ಮತ್ತು ಅಬಕಾರಿ ಅವಶ್ಯಕತೆಗಳೊಂದಿಗೆ ಪೂರೈಸಲು ಬದ್ಧರಾಗಿದ್ದೇವೆ ಎಂದಿದ್ದಾರೆ. ಒಡಿಶಾ ಮತ್ತು ಪಶ್ಚಿಮ ಬಂಗಾಳದಂತಹ ರಾಜ್ಯಗಳು ಈಗಾಗಲೇ ಆಲ್ಕೋಹಾಲ್ ಹೋಮ್ ಡೆಲಿವರಿ ಅನುಮತಿಸಿವೆ,.

## ಅಮೆರಿಕ ಅಧ್ಯಕ್ಷೀಯ ಚುನಾವಣಾ ರೇಸ್‌ನಲ್ಲಿ ಕಮಲಾ ಹ್ಯಾರಿಸ್

**ವಾಷಿಂಗ್ಟನ:** ಡೆಮೋಕ್ರಾಟಿಕ್ ಪಕ್ಷದಲ್ಲಿ ಅಮೆರಿಕ ಅಧ್ಯಕ್ಷ ಸ್ಥಾನಕ್ಕೆ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಸ್ಪರ್ಧಿಸುವುದು ಉತ್ತಮ ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ. ಹಾಲಿ ಅಧ್ಯಕ್ಷ ಜೋ ಬಿಡೆನ್ ಅವರು ಚುನಾವಣಾ ಕಣದಿಂದ ಹಿಂದೆ ಸರಿಯಬೇಕು ಎಂಬ ಒತ್ತಡ ಹೆಚ್ಚಾಗುತ್ತಿರುವ ಸಂದರ್ಭದಲ್ಲೇ ಹ್ಯಾರಿಸ್ ಪರ ಡೆಮೋಕ್ರಾಟ್‌ಗಳು ಬೆಂಬಲ ವ್ಯಕ್ತಪಡಿಸುತ್ತಿರುವುದು ಕಂಡು ಬಂದಿದೆ.

ಎಪಿ–ಎನ್‌ಆರ್‌ಸಿ ಸೆಂಟರ್ ಫಾರ್ ಪಬ್ಲಿಕ್ ಅಫೇರ್ಸ್ ರಿಸರ್ಚ್‌ನ ಹೊಸ ಸಮೀಕ್ಷೆಯು 10 ಡೆಮೋಕ್ರಾಟ್‌ಗಳಲ್ಲಿ 6 ಮಂದಿ ಕಮಲಾ ಹ್ಯಾರಿಸ್ ಅಗ್ರಸ್ಥಾನದಲ್ಲಿ ಉತ್ತಮ ಕೆಲಸ ಮಾಡುತ್ತಾರೆ ಎಂದು ನಂಬಿದ್ದಾರೆ. 10 ರಲ್ಲಿ ಇಬ್ಬರ ಅವರನ್ನು ನಂಬಿಲ್ಲ ಉಳಿದ ಇಬ್ಬರು ತಮ ತೀರ್ಮಾನ ತಿಳಿಸಲು ನಿರಾಕರಿಸಿದ್ದಾರೆ.

ಜೂನ್ 27 ರಂದು ಬಿಡೆನ್ ಅವರ ಚರ್ಚೆಯ ಸೋಲಿನ ನಂತರ, ಅನೇಕ ಡೆಮೋಕ್ರಾಟ್‌ಗಳು ಖಾಸಗಿಯಾಗಿ ಮತ್ತು ಬಹಿರಂಗವಾಗಿ ಹ್ಯಾರಿಸ್ ಪರ ಒಲವು ವ್ಯಕ್ತಪಡಿಸುತ್ತಿದ್ದಾರೆ. ಮಿಸೌರಿಯ ಗ್ರೀನ್‌ವುಡ್‌ನಲ್ಲಿರುವ ಡೆಮೋಕ್ರಾಟ್ ಓಕ್ಲೆ ಗ್ರಹಾಂ ಅವರು ಬಿಡೆನ್ ಅವರ ಕಚೇರಿಯಲ್ಲಿನ ಸಾಧನೆಗಳ ಬಗ್ಗೆ ಸಾಕಷ್ಟು ಸಂತೋಷವಾಗಿರುವಾಗ, ಟಿಕೆಟ್‌ನ ಮೇಲ್ಭಾಗದಲ್ಲಿ ಹ್ಯಾರಿಸ್ ಅವರನ್ನು ಬೆಂಬಲಿಸಲು ಅವರು ಹೆಚ್ಚು ಉತ್ಸುಕರಾಗುತ್ತಾರೆ ಮತ್ತು ಮಹಿಳೆಯೊಬ್ಬರು ಅಧ್ಯಕ್ಷರಾಗುವ ಸಮಯ ಬಂದಿದೆ ಎಂದು ತಿಳಿಸಿದ್ದಾರೆ.



**ಹ್ಯಾರಿಸ್ ಪರ ಡೆಮೋಕ್ರಾಟ್ ಬೆಂಬಲ**

ಅಮೆರಿಕನ್ನರಿಗೆ ಹೆಚ್ಚು ವಿಶಾಲವಾಗಿ, ಹ್ಯಾರಿಸ್ ಓವಲ್ ಆಫೀಸ್‌ನಲ್ಲಿ ಹೇಗೆ ಕಾರ್ಯನಿರ್ವಹಿಸುತ್ತಾರೆ ಎಂಬುದರ ಕುರಿತು ಹೆಚ್ಚು ಸಂದೇಹ ಹೊಂದಿದ್ದಾರೆ. ಒಟ್ಟಾರೆಯಾಗಿ 10 ಯುಎಸ್ ವಯಸ್ಕರಲ್ಲಿ 3 ಜನರು ಮಾತ್ರ ಹ್ಯಾರಿಸ್ ಅಧ್ಯಕ್ಷರಾಗಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಾರೆ ಎಂದು ಹೇಳುತ್ತಾರೆ. ಹ್ಯಾರಿಸ್ ಪಾತ್ರದಲ್ಲಿ ಉತ್ತಮ ಕೆಲಸ ಮಾಡುವುದಿಲ್ಲ ಎಂದು ಅರ್ಧದಷ್ಟು ಹೇಳುತ್ತಾರೆ, ಮತ್ತು 10 ರಲ್ಲಿ 2 ಜನರು ಹೇಳಲು ಸಾಕಷ್ಟು ತಿಳಿದಿಲ್ಲ ಎಂದು ಹೇಳುತ್ತಾರೆ. ಹ್ಯಾರಿಸ್‌ನ ಒಲವಿನ ರೇಟಿಂಗ್ ಬಿಡೆನ್‌ನಂತೆಯೇ ಇದೆ, ಆದರೆ ಅವಳ ಬಗ್ಗೆ ಪ್ರತಿಕೂಲವಾದ ಅಭಿಪ್ರಾಯವನ್ನು ಹೊಂದಿರುವ ಅಮೆರಿಕನ್ನರ ಪಾಲು ಸ್ವಲ್ಪ ಕಡಿಮೆಯಾಗಿದೆ. ಸಮೀಕ್ಷೆಯು 10 ವಯಸ್ಕರಲ್ಲಿ 4 ಜನರು ಹ್ಯಾರಿಸ್ ಬಗ್ಗೆ ಅನುಕೂಲಕರ ವಾದ ಅಭಿಪ್ರಾಯವನ್ನು ಹೊಂದಿದ್ದಾರೆ, ಆದರೆ ಅರ್ಧದಷ್ಟು ಜನರು ಪ್ರತಿಕೂಲವಾದ ಅಭಿಪ್ರಾಯವನ್ನು ಹೊಂದಿದ್ದಾರೆ. ಬಿಡೆನ್ ಬಗ್ಗೆ ನಕಾರಾತಕ ದಷ್ಟಿಕೋನವನ್ನು ಹೊಂದಿರುವ ಹೆಚ್ಚಿನ ಅಮೆರಿಕನ್ನರು ಇದ್ದಾರೆ. ಸರಿಸುಮಾರು 10 ರಲ್ಲಿ 6. ಸುಮಾರು 10 ರಲ್ಲಿ 1 ಅಮೆರಿಕನ್ನರು ಹ್ಯಾರಿಸ್ ಅವರ ಅಭಿಪ್ರಾಯವನ್ನು ಹೊಂದಲು ಸಾಕಷ್ಟು ತಿಳಿದಿಲ್ಲ ಎಂದು ಹೇಳುತ್ತಾರೆ, ಆದರೆ ಬಹುತೇಕ ಎಲ್ಲರೂ ಬಿಡೆನ್ ಬಗ್ಗೆ ಅಭಿಪ್ರಾಯವನ್ನು ಹೊಂದಿದ್ದಾರೆ.

## ಮೀಸಲಾತಿ ಹೋರಾಟ: ಧಗಧಗಿಸುತ್ತಿದೆ ಬಾಂಗ್ಲಾದೇಶ, 32 ಮಂದಿ ಬಲಿ

**ಡಾಕಾ:** ಬಾಂಗ್ಲಾದೇಶದಲ್ಲಿ ಮೀಸಲಾತಿ ವಿರುದ್ಧದ ಹಿಂಸಾಚಾರ ಮುಂದುವರೆದಿದೆ. ಈ ಹಿಂಸಾಚಾರದಲ್ಲಿ ಇದುವರೆಗೆ 32 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ತಿಭಟನಾಕಾರರು ಢಾಕಾದಲ್ಲಿನ ರಾಜ್ಯ ಸರ್ಕಾರ ಸುದ್ದಿವಾಹಿನಿಯ ಪ್ರಧಾನ ಕಚೇರಿಗೆ ಬೆಂಕಿ ಹಚ್ಚಿದ್ದಾರೆ, ಪ್ರಧಾನ ಕಚೇರಿಯಲ್ಲಿ ನಿಲ್ಲಿಸಿದ್ದ ಹಲವಾರು ವಾಹನಗಳನ್ನು ಸಹ ನಾಶಪಡಿಸಿದ್ದಾರೆ.

ಒಂದು ದಿನ ಮೊದಲು ಸರ್ಕಾರಿ ಟಿವಿ ಕಚೇರಿಯಲ್ಲಿ ಪ್ರಧಾನಿ ಶೇಖ್ ಹಸೀನಾ ಅವರ ಸಂದರ್ಶನ ನಡೆದಿತ್ತು. ಬಾಂಗ್ಲಾದೇಶದ ಪ್ರತಿಭಟನಾಕಾರರು ಮೀಸಲಾತಿಯನ್ನು ಕೊನೆಗೊಳಿಸಬೇಕೆಂಬ ತಮ ಬೇಡಿಕೆಗೆ ಅಚಲರಾಗಿದ್ದಾರೆ. ಹಿಂಸಾಚಾರದ ಹಿನ್ನೆಲೆಯಲ್ಲಿ ದೇಶದ ಎಲ್ಲಾ ಶಾಲೆಗಳು ಮತ್ತು ವಿಶ್ವವಿದ್ಯಾಲಯಗಳನ್ನು ಅನಿರ್ದಿಷ್ಟಾವಧಿಯವರೆಗೆ ಮುಚ್ಚುವಂತೆ ಶೇಖ್ ಹಸೀನಾ ಸರ್ಕಾರ ಆದೇಶಿಸಿದೆ. ಅಲ್ಲದೆ ಪರಿಸ್ಥಿತಿ ನಿಯಂತ್ರಿಸಲು ಬಿಗಿ ಬಂದೋಬಸ್ತ್ ಮಾಡುವಂತೆ ಸೂಚನೆ ನೀಡಲಾಗಿದೆ.



**ಪರಿಸ್ಥಿತಿ ನಿಯಂತ್ರಿಸಲು ಬಿಗಿ ಬಂದೋಬಸ್ತ್**

ಬಾಂಗ್ಲಾದೇಶದಲ್ಲಿ ಸ್ವಾತಂತ್ರ್ಯದ ನಂತರ ಮೀಸಲಾತಿ ವ್ಯವಸ್ಥೆ ಜಾರಿಯಲ್ಲಿದೆ. ಇದರ ಅಡಿಯಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಮಕ್ಕಳಿಗೆ ಶೇ.30, ದೇಶದ ಹಿಂದುಳಿದ ಜಿಲ್ಲೆಗಳ ಯುವಕರಿಗೆ ಶೇ.10, ಮಹಿಳೆಯರಿಗೆ ಶೇ.10, ಅಲ್ಪಸಂಖ್ಯಾತರಿಗೆ ಶೇ.5 ಮತ್ತು ಅಂಗವಿಕಲರಿಗೆ ಶೇ.1ರಷ್ಟು ಮೀಸಲಾತಿ ಕಲ್ಪಿಸಲಾಗಿತ್ತು.

ಹೀಗಾಗಿ, ಬಾಂಗ್ಲಾದೇಶದಲ್ಲಿ ಸರ್ಕಾರಿ ಉದ್ಯೋಗಗಳಲ್ಲಿ 56 ಪ್ರತಿಶತ ಮೀಸಲಾತಿ ಇತ್ತು. 2018 ರಲ್ಲಿ, ಬಾಂಗ್ಲಾದೇಶದ ಯುವಕರು ಈ ಮೀಸಲಾತಿಯನ್ನು ವಿರೋಧಿಸಿದರು. ಹಲವಾರು ತಿಂಗಳುಗಳ ಪ್ರತಿಭಟನೆಯ ನಂತರ, ಬಾಂಗ್ಲಾದೇಶ ಸರ್ಕಾರವು ಮೀಸಲಾತಿಯ ಅಂತ್ಯವನ್ನು ಘೋಷಿಸಿತು. ಕಳೆದ ತಿಂಗಳು, ಜೂನ್ 5 ರಂದು, ಬಾಂಗ್ಲಾದೇಶದ ಸರ್ವೋಚ್ಚ ನ್ಯಾಯಾಲಯವು ದೇಶದಲ್ಲಿ ಹಳೆಯ ಮೀಸಲಾತಿ ವ್ಯವಸ್ಥೆಯನ್ನು ಮರುಜಾರಿಗೊಳಿಸಲು ಆದೇಶಿಸಿತು. ಶೇಖ್ ಹಸೀನಾ ಸರ್ಕಾರವೂ ಸುಪ್ರೀಂ ಕೋರ್ಟ್‌ನ ತೀರ್ಪಿನ ವಿರುದ್ಧ ಮೇಲನವಿ ಸಲ್ಲಿಸಿತು, ಆದರೆ ಸುಪ್ರೀಂ ಕೋರ್ಟ್ ಆದೇಶವನ್ನು ಎತ್ತಿಹಿಡಿಯಿತು.

## ವಿದ್ಯಾರ್ಥಿನಿಯನ್ನು ಅಪಹರಿಸಿ ಸಾಮೂಹಿಕ ಅತ್ಯಾಚಾರ

**ಗಾಜಿಯಾಬಾದ್:** ಇಬ್ಬರು ಪುಢಾರಿಗಳು ಕಾಲೇಜು ವಿದ್ಯಾರ್ಥಿನಿಯನ್ನು ಅಪಹರಿಸಿ ಸತತ ಹನ್ನೆರಡು ದಿನಗಳ ಕಾಲ ಸಾಮೂಹಿಕ ಅತ್ಯಾಚಾರ ನಡೆಸಿರುವ ಘಟನೆ ನಡೆದಿದೆ. ಅಪಹೃತ ವಿದ್ಯಾರ್ಥಿನಿಯ ಮೇಲೆ ಮೀರತ್ ಹಾಗೂ ಜಮುವಿನ ಹೋಟೆಲ್‌ನಲ್ಲಿ ಅತ್ಯಾಚಾರ ನಡೆಸಿ ಆಕೆಯ ಅಶ್ಲೀಲ ವಿಡಿಯೋವನ್ನು ಕೂಡ ಮಾಡಿದ್ದಾರೆ ಎನ್ನಲಾಗಿದೆ.

ಇದಾದ ಬಳಿಕ ಆಕೆಗೆ ಬೆದರಿಕೆ ಹಾಕಿದ್ದಾರೆ. ಜುಲೈ 6 ರಂದು ಗಾಜಿಯಾಬಾದ್‌ನ ಭೋಜ್ ಪುರ್ ಪೊಲೀಸ್ ಠಾಣೆ ಬಳಿ ಬಿಟ್ಟು ಪರಾರಿಯಾ ಗಿದ್ದಾರೆ. ಗಾಜಿಯಾಬಾದ್ ಹಾಗೂ ಮೀರತ್ ಪೊಲೀಸರು ತಮ ವ್ಯಾಪ್ತಿಗೆ ಬರುವುದಿಲ್ಲ ಎಂದು ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದರು. ಬಳಿಕ ಕುಟುಂಬದವರು ಎಸ್‌ಎಸ್‌ಪಿಗೆ ದೂರು ನೀಡಿದ ನಂತರ ತನಿಖೆ ಆರಂಭಿಸಲಾಗಿದೆ. ಮೋದಿನಗರ ಗ್ರಾಮದ ನಿವಾಸಿಯಾಗಿರುವ ಬಾಲಕಿ ಇಲ್ಲಿನ ಕಾಲೇಜೊಂದರಲ್ಲಿ ಓದುತ್ತಿದ್ದಳು. ಜೂನ್ 24ರಂದು ಕಾಲೇಜಿಗೆ ಹೋದವಳು ನಾಪತ್ತೆಯಾಗಿದ್ದಳು. ಕುಟುಂಬದವರು ಹುಡುಕಾಟ ನಡೆಸಿ, ನಾಪತ್ತೆ ಪ್ರಕರಣವನ್ನೂ ದಾಖಲಿಸಿದ್ದರು.

ಇದೀಗ ವಿದ್ಯಾರ್ಥಿನಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚೇತರಿಸಿಕೊಳ್ಳುತ್ತಿದ್ದಾಳೆ, ಜೂನ್ 24ರಂದು ಬೆಳಗ್ಗೆ 11 ಗಂಟೆ ಸುಮಾರಿಗೆ ತನ್ನನ್ನು ಇಬ್ಬರು ಅಪಹರಿಸಿದ್ದರು ಎಂದು ಆಕೆ ತಿಳಿಸಿದ್ದಾಳೆ. ದೂರಿನ ಆಧಾರದ ಮೇಲೆ ಇದೀಗ ಪೊಲೀಸರು ತನಿಖೆ ನಡೆಸುತ್ತಿದ್ದಾರೆ, ವಿದ್ಯಾರ್ಥಿನಿಯನ್ನು ಇರಿಸಿದ್ದ ಹೋಟೆಲ್‌ನ ಸಿಸಿಟಿವಿ ದೃಶ್ಯಾವಳಿಗಳನ್ನು ಪೊಲೀಸರು ಪರಿಶೀಲಿಸಿದ್ದಾರೆ. ಇಬ್ಬರೂ ಆರೋಪಿಗಳು ವಿದ್ಯಾರ್ಥಿನಿಯನ್ನು ಜಮುವಿಗೆ ಕರೆದೊಯ್ದು ಆರು ದಿನಗಳ ಕಾಲ ಅಲ್ಲಿನ ಹೋಟೆಲ್‌ನಲ್ಲಿ ಒತ್ತೆಯಾಳಾಗಿ ಇರಿಸಿದ್ದರು. ಇಲ್ಲಿ ನಾಲ್ವರು ಯುವಕರು ತನ್ನ ಮೇಲೆ ಸಾಮೂಹಿಕ ಅತ್ಯಾಚಾರವೆಸಗಿದ್ದಾರೆ ಎಂದು ವಿದ್ಯಾರ್ಥಿನಿ ಆರೋಪಿಸಿದ್ದಾಳೆ.

# ಮೈಕ್ರೋಸಾಫ್ಟ್ ಸೇವೆಗಳಲ್ಲಿ ತಾಂತ್ರಿಕ ದೋಷ

## ಭಾರತ ಸೇರಿ ಜಗತ್ತಿನಾದ್ಯಂತ ವಿಮಾನ, ಷೇರು ಮಾರುಕಟ್ಟೆ, ಹೋಟೆಲ್ ಸೇವೆಗಳು ಸೇರಿದಂತೆ ಎಲ್ಲಾ ರೀತಿಯ ಸೇವೆಗಳಲ್ಲಿ ವ್ಯತ್ಯಯ

**ವಾಷಿಂಗ್ಟನ್:** ಜಗತ್ತಿನ ಸಾಫ್ಟ್‌ವೇರ್ ದೈತ್ಯ ಮೈಕ್ರೋಸಾಫ್ಟ್‌ನ ಸೇವೆಗಳಲ್ಲಿ ಉಂಟಾದ, 'ಬ್ಲೂಸ್ಕ್ರೀನ್ ಸಡನ್ ಡೆತ್' ಎಂಬ ತಾಂತ್ರಿಕ ದೋಷದಿಂದಾಗಿ ಭಾರತ, ಅಮೆರಿಕ ಸೇರಿದಂತೆ ಜಗತ್ತಿನ ಎಲ್ಲಾ ರಾಷ್ಟ್ರಗಳಲ್ಲಿ ಅಲ್ಲೋಲ ಕಲ್ಲೋಲ ಉಂಟಾಗಿದೆ. ವಿಮಾನ ನಿಲ್ದಾಣಗಳು, ವಿಮಾನ ಸೇವೆಗಳು, ಷೇರು ಮಾರುಕಟ್ಟೆಗಳು, ಬ್ಯಾಂಕಿಂಗ್ ಸೇವೆಗಳು, ಹೋಟೆಲ್ ಸೇವೆಗಳು ಸೇರಿದಂತೆ ಎಲ್ಲಾ ರೀತಿಯ ಸೇವೆಗಳಲ್ಲಿ ವ್ಯತ್ಯಯ ಕಂಡು ಬಂದಿವೆ. ಭಾರತ ಸೇರಿದಂತೆ ಹಲವಾರು ದೇಶಗಳ ಸರ್ಕಾರಿ ಕಚೇರಿಗಳಲ್ಲಿನ ಸೇವಾ ಕೇಂದ್ರಗಳೂ ಸ್ವಯಂಚಾಲಿತವಾಗಿ ಸ್ತಬ್ಧವಾಗಿವೆ.

ಅತಿಹೆಚ್ಚು ದುಷ್ಪರಿಣಾಮವಾಗಿರುವುದು ವಾಯು ಸೇವೆಗಳು, ಬ್ಯಾಂಕಿಂಗ್ , ಷೇರು ಮಾರುಕಟ್ಟೆಯ ಮೇಲೆ. ಭಾರತ, ಅಮೆರಿಕ ಸೇರಿದಂತೆ ಜಗತ್ತಿನ ಹಲವಾರು ರಾಷ್ಟ್ರಗಳಲ್ಲಿ ವಿಮಾನ ಸೇವೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ. ಅದರಿಂದಾಗಿ, ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಹೊರಡಬೇಕಿದ್ದ ಹಲವಾರು ವಿಮಾನಗಳನ್ನು ಗಗನಕ್ಕೆ ಹಾರಿಲ್ಲ.




**ಏನಿದು ಸಮಸ್ಯೆ?:** ಬಹುಮುಖ್ಯವಾಗಿ ಇದು ಅಂತಾರಾಷ್ಟ್ರೀಯ ಸೇವೆಗಳಿಗೆ ಬೇಕಾಗುವ ಸಾಫ್ಟ್‌ವೇರ್‌ಗಳಲ್ಲಿ ಕಾಣಿಸಿಕೊಂಡ ತಾಂತ್ರಿಕ ದೋಷವಾಗಿದೆ. ಈ ಸಾಫ್ಟ್‌ವೇರ್ ಗಳಡಿ ಕಾರ್ಯನಿರ್ವಹಿಸುವ ಕಂಪ್ಯೂಟರ್ ಗಳ ಪರದೆಗಳು ಬ್ಲೂಸ್ಕ್ರೀನ್ ಗಳಾಗಿ ಪರಿವರ್ತನೆಗೊಂಡು, ಆನಂತರ ಇದ್ದಕ್ಕಿದ್ದಂತೆ ಕಂಪ್ಯೂಟರ್‌ಗಳು ಶಟ್ ಡೌನ್ ಆಗುತ್ತಿವೆ. ಇದನ್ನು ತಾಂತ್ರಿಕ ಭಾಷೆಯಲ್ಲಿ ಬ್ಲೂಸ್ಕ್ರೀನ್ ಡೆತ್ ಎಂದು ಕರೆಯಲಾಗುತ್ತದೆ. ಕೇವಲ ಕಂಪ್ಯೂಟರ್ ಗಳು ಮಾತ್ರವಲ್ಲ, ಈ ಸಾಫ್ಟ್‌ವೇರ್ ನೊಂದಿಗೆ ಜೋಡಿಸಲ್ಪಟ್ಟಿರುವ ವಿಮಾನ ನಿಲ್ದಾಣಗಳು, ಬ್ಯಾಂಕುಗಳು, ಷೇರು ಮಾರುಕಟ್ಟೆಗಳ ಮುಂತಾದ ಕಡೆಯಿರುವ ಟಿವಿ ಪರದೆಗಳು, ಡಿಸ್ ಪ್ಲೇ ಬೋರ್ಡ್ ಗಳು ಎಲ್ಲವೂ ಬ್ಲೂಸ್ಕ್ರೀನ್‌ಗೆ ತಿರುಗಿವೆ.

- ಮೈಕ್ರೋಸಾಫ್ಟ್‌ನ ಕೆಲವು ಸಾಫ್ಟ್‌ವೇರ್‌ಗಳಲ್ಲಿ ಕಾಣಿಸಿಕೊಂಡ ತಾಂತ್ರಿಕ ದೋಷ.
- ಜಗತ್ತಿನ ಹಲವಾರು ಕಂಪ್ಯೂಟರ್‌ಗಳ ಇದ್ದಕ್ಕಿದ್ದಂತೆ ಶಟ್ ಡೌನ್.
- ವಿಮಾನ ಸಂಚಾರ, ಬ್ಯಾಂಕಿಂಗ್, ಷೇರು ಮಾರುಕಟ್ಟೆ ಸೇರಿ ಹಲವಾರು ಸೇವೆ ಸ್ತಬ್ಧ.
- ಭಾರತದಲ್ಲಿಯೂ ಹಲವಾರು ಸೇವೆಗಳಿಗೆ ತೊಂದರೆ.

ಭಾರತದಲ್ಲೂ ಈ ಸಮಸ್ಯೆ ಕಾಣಿಸಿಕೊಂಡಿದ್ದು, ಭಾರತದ ಪ್ರಮುಖ ವಿಮಾನ ಸೇವಾ ಸಂಸ್ಥೆಗಳಾದ ಸ್ಪೈಸ್ ಜೆಟ್, ಆಕಾಶ ಏರ್ ಲೈನ್ಸ್ ಸಂಸ್ಥೆಗಳು ಮೈಕ್ರೋಸಾಫ್ಟ್ ಸಾಫ್ಟ್‌ವೇರ್‌ನಲ್ಲಿ ಕಾಣಿಸಿಕೊಂಡಿರುವ ದೋಷದಿಂದಾಗಿ ತಮ್ಮ ಸಂಸ್ಥೆಯ ಅನೇಕ ವಿಮಾನಗಳ ಹಾರಾಟ ನಿಲ್ಲಿಸಲಾಗಿದೆ ಎಂದು ಹೇಳಿವೆ.

### ಬೆಂಗಳೂರಿಗೂ ಎಫೆಕ್ಟ್

ಬೆಂಗಳೂರಿನ ಕೆಂಪೇಗೌಡ ವಿಮಾನ ನಿಲ್ದಾಣದಿಂದಲೂ ಹಲವಾರು ವಿಮಾನಗಳ ಹಾರಾಟವನ್ನು ಮುಂದೂಡಲಾಗಿದೆ. ಅಮೆರಿಕದ ಪ್ರಮುಖ ವಿಮಾನ ಸೇವೆಗಳಾದ, ಡೆಲ್ಟಾ ಏರ್ ಲೈನ್ಸ್, ಯುಎಸ್ ಏರ್ ಲೈನ್ಸ್ ವಿಮಾನಗಳ ಸೇವೆಯನ್ನು ತಡೆಹಿಡಿಯಲಾಗಿದೆ. ಪ್ರಯಾಣಿಕರಿಗೆ ಟಿಕೆಟ್ ಹಣವನ್ನು ಹಿಂದಿರುಗಿಸಲಾಗಿದೆ. ವಿಮಾನ ಸೇವೆಗಳಿಗಾಗಿ ಕಾಯುತ್ತೇವೆ ಎನ್ನುವವರಿಗೆ ವಿಮಾನ ನಿಲ್ದಾಣಗಳ ಬೋರ್ಡಿಂಗ್ ಪಾಸ್ ಗಳನ್ನು ಕೈಯ್ಯಲ್ಲೇ ಬರೆದುಕೊಡಲಾಗುತ್ತಿದೆ.

### ವಿದ್ಯುತ್ ಬಿಲ್ ಮನ್ನಾ

ಯಾವ ಸಾಫ್ಟ್‌ವೇರ್ ಗಳಲ್ಲಿ ತೊಂದರೆ? ಪವರ್ ಬಿಐ, ಮೈಕ್ರೋಸಾಫ್ಟ್ ಫ್ಯಾಬ್ರಿಕ್, ಮೈಕ್ರೋಸಾಫ್ಟ್ ಟೀಮ್ಸ್, ಮೈಕ್ರೋಸಾಫ್ಟ್ 365 ಅಡ್ಮಿನ್ ಸೆಂಟರ್, ಮೈಕ್ರೋಸಾಫ್ಟ್ ಪರ್ವ್ಯೂ, ವಿವಾ ಎಂಗೇಜ್ ಎಂಬ ಸಾಫ್ಟ್‌ವೇರ್‌ಗಳಲ್ಲಿ ಈ ರೀತಿಯ ತಾಂತ್ರಿಕ ದೋಷ ಕಾಣಿಸಿಕೊಂಡಿದೆ. ಇದಲ್ಲದೆ, ಮೈಕ್ರೋಸಾಫ್ಟ್ ಡಿಫೆಂಡರ್, ಮೈಕ್ರೋಸಾಫ್ಟ್ ಡಿಫೆಂಡರ್ ಫಾರ್ ಎಂಡ್ ಪಾಯಿಂಟ್, ಮೈಕ್ರೋಸಾಫ್ಟ್ ಇನ್‌ಟ್ಯೂನ್, ಮೈಕ್ರೋಸಾಫ್ಟ್ ಒನ್ ನೋಟ್, ಒನ್ ಡ್ರೈವ್ ಫಾರ್ ಬ್ಯುಸಿನೆಸ್, ಶೇರ್ ಪಾಯಿಂಟ್ ಆನ್ ಲೈನ್, ವಿಂಡೋಸ್ 365 ಅಡಿಯಲ್ಲಿನ ಕ್ಲೌಡ್ ಪಿಸಿಗಳಲ್ಲೂ ಈ ರೀತಿಯ ತೊಂದರೆಗಳು ಕಾಣಿಸಿಕೊಂಡಿವೆ.

## ಮಿನಿ ನ್ಯೂಸ್

### ಟ್ರೈನಿ ಐಎಎಸ್ ಅಧಿಕಾರಿ ಪೂಜಾ ಖೇಡ್ಕರ್ ಹುದ್ದೆಯಿಂದ ವಜಾ

**ಮುಂಬೈ:** ವಿವಾದಿತ ಟ್ರೈನಿ ಐಎಎಸ್ ಅಧಿಕಾರಿ ಪೂಜಾ ಖೇಡ್ಕರ್ ವಿರುದ್ಧ ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ಎಫ್‌ಐಆರ್ ದಾಖಲು ಮಾಡಿದೆ. ಅಷ್ಟೇ ಅಲ್ಲ, ಪೂಜಾ ಖೇಡ್ಕರ್ ಅವರ ಐಎಎಸ್ ನೇಮಕಾತಿ ರದ್ದು ಮಾಡುವ ಹಾಗೂ ಮುಂದಿನ ದಿನಗಳಲ್ಲಿ ಅವರಿಗೆ ಯುಪಿಎಸ್‌ಸಿ ಪರೀಕ್ಷೆಗೆ ಅವಕಾಶ ನೀಡದೆ ಡಿಬಾರ್ ಮಾಡುವ ಕುರಿತಾಗಿ ಶೋಕಾಸ್ ನೋಟಿಸ್ ಜಾರಿ ಮಾಡಿದೆ. ಈ ಮೂಲಕ ಪೂಜಾ ಖೇಡ್ಕರ್ ಅವರ ಐಎಎಸ್ ಹುದ್ದೆಗೇ ಕಂಟಕ ಎದುರಾಗಿದೆ.

2022ರಲ್ಲಿ ನಡೆದ ಕೇಂದ್ರ ಲೋಕಸೇವಾ ಆಯೋಗದ ಪರೀಕ್ಷೆಯಲ್ಲಿ ಅಭ್ಯರ್ಥಿಯಾಗಿದ್ದ ಪೂಜಾ ಖೇಡ್ಕರ್, ಈ ಪರೀಕ್ಷೆಯಲ್ಲಿ ಆಯ್ಕೆಯಾಗಿ ಐಎಎಸ್ ತರಬೇತಿ ಶಾಲೆಯಲ್ಲಿ ತರಬೇತಿ ಪೂರ್ಣಗೊಳಿಸಿ ಪ್ರೊಬೆಷನರಿ ಅಧಿಕಾರಿಯಾಗಿ ನಿಯುಕ್ತರಾಗಿದ್ದರು. ಆದರೆ, ಅವರ ವಿರುದ್ಧ ಅಕ್ರಮ ದಾಖಲೆ ಸಲ್ಲಿಕೆ ಆರೋಪ ಕೇಳಿ ಬಂದಿದ್ದ ಹಿನ್ನೆಲೆಯಲ್ಲಿ ಸಮಗ್ರ ತನಿಖೆ ಮಾಡಿದ ಯುಪಿಎಸ್‌ಸಿ, ಪೂಜಾ ಮನೋರಮಾ ದಿಲೀಪ್ ಖೇಡ್ಕರ್ ಅವರ ಅಭ್ಯರ್ಥಿತನ ರದ್ದು ಮಾಡಲು ಮುಂದಾಗಿದೆ.

### ರಾಜಸ್ಥಾನದಲ್ಲಿ ಭೀಕರ ಅಪಘಾತ ಒಂದೇ ಕುಟುಂಬದ 6 ಮಂದಿ ದುರ್ಮರಣ



**ಜೈಪುರ:** ರಾಜಸ್ಥಾನದ ಬಿಕಾನೇರ್‌ನ ಮಹಾಜನ್‌ನ ಜೈತ್‌ಪುರ ಟೋಲ್ ಬಳಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಒಂದೇ ಕುಟುಂಬದ ಆರು ಜನರು ಸಾವನ್ನಪ್ಪಿದ್ದಾರೆ. ಮೃತರನ್ನು ಆರತಿ, ದುಬ್ಬು, ಭೂಮಿಕಾ, ನೀರಜ್ ಕುಮಾರ್ ಮತ್ತು ಶಿವಕುಮಾರ್ ಎಂದು ಗುರುತಿಸಲಾಗಿದೆ. ಅವರು ಹನುಮಾನ್‌ಗಢ್‌ನ ದಬ್ವಾಲಿ ನಿವಾಸಿಗಳಾಗಿದ್ದು, ಹರಿಯಾಣದ ಪರವಾನಗಿ ಪ್ಲೇಟ್ ಹೊಂದಿರುವ ಕಾರಿನಲ್ಲಿ ಪ್ರಯಾಣಿಸುತ್ತಿದ್ದರು. ಭೀಕರ ಅಪಘಾತಕ್ಕೆ ಕಾರಿನ ಮುಂಭಾಗ ಸಂಪೂರ್ಣ ನಜ್ಜುಗುಜ್ಜಾಗಿದೆ. ಅಪಘಾತದ ವೇಳೆ ಇಬ್ಬರು ಪ್ರಯಾಣಿಕರು ಕಾರಿನಿಂದ ಹೊರಬಿದ್ದು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಅಪಘಾತದಲ್ಲಿ ಇಡೀ ಕುಟುಂಬ ಪ್ರಾಣ ಕಳೆದುಕೊಂಡಿದೆ.

### ಒಂದು ಗ್ರಾಂ ಡ್ರಗ್ಸ್ ಕೂಡ ಭಾರತ ಪ್ರವೇಶಿಸಲು ಬಿಡಲ್ಲ: ಅಮಿತ್ ಶಾ



**ನವದೆಹಲಿ:** ಒಂದು ಗ್ರಾಂ ಡ್ರಗ್ಸ್ ಕೂಡ ದೇಶಕ್ಕೆ ಪ್ರವೇಶಿಸಲು ಬಿಡುವುದಿಲ್ಲ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ವಿಜ್ಞಾನ ಭವನದಲ್ಲಿ ಗುರುವಾರ ನಡೆದ 7ನೇ ಅಪೆಕ್ಸ್ ಲೆವೆಲ್ ನಾರ್ಕೋ–ಕೋಆರ್ಡಿನೇಷನ್ ಸೆಂಟರ್ (ಎನ್‌ಸಿಒಆರ್‌ಡಿ) ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಭಾರತವನ್ನು ಮಾದಕವಸ್ತುಗಳಿಂದ ಮುಕ್ತಗೊಳಿಸುವುದಾಗಿ ಪ್ರತಿಜ್ಞೆ ಮಾಡಿದರು. ಡ್ರಗ್ಸ್ ಪೂರೈಕೆ ಸರಪಳಿ ಕಿತ್ತುಹಾಕಲು ನಿರ್ದಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಮಾದಕ ದ್ರವ್ಯ ವಿರೋಧಿ ಏಜೆನ್ಸಿಗಳಿಗೆ ಅಮಿತ್ ಶಾ ಸಲಹೆ ನೀಡಿದ್ದಾರೆ.

### ಬದ್ರಿನಾಥ್ ರಾಷ್ಟ್ರೀಯ ಹೆದ್ದಾರಿಯಲ್ಲಿ ನಿರ್ಮಾಣ ಹಂತದಲ್ಲಿದ್ದ ಮೇಲ್ಸೇತುವೆ ಕುಸಿತ

**ಬದ್ರಿನಾಥ್:** ಬದ್ರಿನಾಥ್ ರಾಷ್ಟ್ರೀಯ ಹೆದ್ದಾರಿಯಲ್ಲಿ ನಿರ್ಮಾಣ ಹಂತದಲ್ಲಿದ್ದ ಮೇಲ್ಸೇತುವೆಯ ಭಾಗವೊಂದು ಕುಸಿತವಾಗಿದೆ. ರುದ್ರಪ್ರಯಾಗ ಸಮೀಪದ ನಾರ್ಕೋಟಾ ಪ್ರದೇಶದಲ್ಲಿ ಸಂಭವಿಸಿದ ಘಟನೆಯಲ್ಲಿ ಅದೃಷ್ಟವಶಾತ್ ಯಾವುದೇ ಜೀವಹಾನಿ ಸಂಭವಿಸಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಕ್ಕದಲ್ಲಿ ಕೆಲಸ ಮಾಡುತ್ತಿದ್ದ ಕೆಲವು ಕಾರ್ಮಿಕರು ಚೌಕಟ್ಟು ಕುಸಿಯುತ್ತಿರುವುದನ್ನು ಅರಿತು ಓಡಿ ಹೋಗಿದ್ದರಿಂದ ಸ್ವಲ್ಪದರಲ್ಲೇ ಪಾರಾಗಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನಿರ್ಮಾಣ ಹಂತದಲ್ಲಿರುವ ಸೇತುವೆಯ ಚೌಕಟ್ಟಿನ ಒಂದು ಭಾಗ ಕುಸಿದಿದೆ ಎಂದು ರಾಷ್ಟ್ರೀಯ ಹೆದ್ದಾರಿ ಕಾರ್ಯಪಾಲಕ ಎಂಜಿನಿಯರ್ ತನುಜ್ ಕಾಂಬೋಜ್ ಹೇಳಿದ್ದಾರೆ.

ಚಾರ್‌ಧಾಮ್ ರಸ್ತೆ ಯೋಜನೆಯಡಿ ಸುಮಾರು 67 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ ಸೇತುವೆಯು ಕಳೆದ ಮೂರು ವರ್ಷಗಳಿಂದ ನಿರ್ಮಾಣ ಹಂತದಲ್ಲಿದೆ.

### ಜು. 22ರಂದು ಸುಪ್ರೀಂನಲ್ಲಿ ಚುನಾವಣಾ ಬಾಂಡ್ ಅರ್ಜಿ ವಿಚಾರಣೆ

**ನವದೆಹಲಿ:** ಚುನಾವಣಾ ಬಾಂಡ್‌ಗಳ ಯೋಜನೆಗೆ ಸಂಬಂಧಿಸಿದಂತೆ ನ್ಯಾಯಾಲಯದ ಮೇಲ್ವಿಚಾರಣೆಯ ತನಿಖೆ ಕೋರಿ ಸಲ್ಲಿಸಲಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆಯನ್ನು ಜುಲೈ 22 ರಂದು ನಡೆಸಲಾಗುವುದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಮುಖ್ಯ ನ್ಯಾಯಮೂರ್ತಿ ಡಿ ವೈ ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಜೆ ಬಿ ಪರ್ದಿವಾಲಾ ಮತ್ತು ಮನೋಜ್ ಮಿಶ್ರಾ ಅವರನ್ನೊಳಗೊಂಡ ಪೀಠ, ವಕೀಲ ಪ್ರಶಾಂತ್ ಭೂಷಣ್ ಅವರ ಸಲ್ಲಿಕೆಗಳನ್ನು ಗಮನಿಸಿ ಈ ಹೇಳಿಕೆ ನೀಡಿದೆ. ಎರಡು ಎನ್‌ಜಿಒಗಳಾದ ಪಿಐಎಲ್ ಕಾಮನ್ ಕಾಸ್ ಮತ್ತು ಸೆಂಟರ್ ಫಾರ್ ಪಬ್ಲಿಕ್ ಇಂಟರೆಸ್ಟ್ ಲಿಟಿಗೇಷನ್ (ಸಿಪಿಐಎಲ್) ಅನ್ನು ವಿಚಾರಣೆಗೆ ಪಟ್ಟಿ ಮಾಡಲಾಗಿದೆ. ಪಟ್ಟಿ ಮಾಡಲಾದ ಇದೇ ರೀತಿಯ ಮನವಿಯನ್ನು ಜುಲೈ 22 ರಂದು ಹಿಂದಿನ ಪಿಐಎಲ್ ಜೊತೆಗೆ ತೆಗೆದುಕೊಳ್ಳಲಾಗುವುದು ಎಂದು ಪೀಠ ಹೇಳಿದೆ. ಚುನಾವಣಾ ಬಾಂಡ್‌ಗಳ ಯೋಜನೆಯನ್ನು "ಹಗರಣ" ಎಂದು ಬಣ್ಣಿಸಿ, ದತ್ತಾಂಶದಿಂದ ಬಹಿರಂಗಪಡಿಸಿದಂತೆ ವಿವಿಧ ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡಿದ "ಶೆಲ್ ಕಂಪನಿಗಳು ಮತ್ತು ನಷ್ಟದ ಕಂಪನಿಗಳ" ನಿಧಿಯ ಮೂಲವನ್ನು ತನಿಖೆ ಮಾಡಲು ಅಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ಮನವಿಯಲ್ಲಿ ಕೋರಲಾಗಿದೆ.

ಕ್ವಿಡ್ ಪ್ರೋಕೋ ವ್ಯವಸ್ಥೆಗಳ ಭಾಗವಾಗಿ ಕಂಪನಿಗಳು ದೇಣಿಗೆ ನೀಡಿದ ಹಣವನ್ನು ಹಿಂಪಡೆಯಲು ಅಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ಮನವಿಯಲ್ಲಿ ಕೋರಲಾಗಿದೆ, ಇವುಗಳು ಅಪರಾಧದ ಆದಾಯವೆಂದು ಕಂಡುಬಂದರೆ ಕ್ರಮ ಕೈಗೊಳ್ಳುವ ಸಾಧ್ಯತೆ ಇದೆ.ಐವರು ನ್ಯಾಯಾಧೀಶರ ಸಂವಿಧಾನ ಪೀಠ, ಫೆಬ್ರವರಿ 15 ರಂದು ಬಿಜೆಪಿ ಸರ್ಕಾರ ಪರಿಚಯಿಸಿದ ಅನಾಮಧೇಯ ರಾಜಕೀಯ ನಿಧಿಯ ಚುನಾವಣಾ ಬಾಂಡ್‌ಗಳ ಯೋಜನೆಯನ್ನು ರದ್ದುಗೊಳಿಸಿತ್ತು. ಉನ್ನತ ನ್ಯಾಯಾಲಯದ ತೀರ್ಪಿನ ನಂತರ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಯೋಜನೆಯ ಅಡಿಯಲ್ಲಿ ಅಧಿಕೃತ ಹಣಕಾಸು ಸಂಸ್ಥೆ, ಚುನಾವಣಾ ಆಯೋಗ ಡೇಟಾವನ್ನು ಹಂಚಿಕೊಂಡಿದೆ, ಅದು ನಂತರ ಅದನ್ನು ಸಾರ್ವಜನಿಕಗೊಳಿಸಿತು.



# ಭಾರತ ತಂಡದಲ್ಲಿ 6 ಕೆಕೆಆರ್ ಆಟಗಾರರು

## ಫೇವರಿಸಂ ಶುರು ಮಾಡಿದ್ರಾ ಗಂಭೀರ್

ಶ್ರೀಲಂಕಾ ಪ್ರವಾಸಕ್ಕೆ ಭಾರತ ತಂಡವನ್ನು ಬಿಸಿಸಿಐ ಪ್ರಕಟಿಸಿದೆ. ಜುಲೈ 27ರಿಂದ ಆರಂಭವಾಗಲಿರುವ ಈ ಪ್ರವಾಸದಲ್ಲಿ ಟೀಂ ಇಂಡಿಯಾ ತಲಾ 3 ಪಂದ್ಯಗಳ ಟಿ20 ಹಾಗೂ ಏಕದಿನ ಸರಣಿಯನ್ನು ಆಡಲಿದೆ. ಏಕದಿನದಲ್ಲಿ ರೋಹಿತ್ ಶರ್ಮಾ ತಂಡದ ನಾಯಕನಾಗಿದ್ದರೆ, ಸೂರ್ಯಕುಮಾರ್ ಯಾದವ್‌ಗೆ ಟಿ20 ತಂಡದ ಜವಾಬ್ದಾರಿಯನ್ನು ನೀಡಲಾಗಿದೆ. ಮುಖ್ಯ ಕೋಚ್ ಗೌತಮ್ ಗಂಭೀರ್ ಈ ಪ್ರವಾಸದಲ್ಲಿ ಹಲವು ಯುವ ಆಟಗಾರರಿಗೆ ಅವಕಾಶ ನೀಡಿದ್ದಾರೆ. ಆದರೆ, ಈ ಪ್ರವಾಸಕ್ಕೆ ಭಾರತ ತಂಡದಲ್ಲಿ 6 ಕೋಲ್ಕತ್ತಾ ನೈಟ್ ರೈಡರ್ಸ್ ತಂಡದ ಆಟಗಾರರು ಆಯ್ಕೆಯಾಗಿರುವುದು ದೊಡ್ಡ ವಿಷಯ. ಅಂದರೆ ಗಂಭೀರ್ ಕೋಚ್ ಆದ ಕೂಡಲೇ ಕೆಕೆಆರ್ ಆಟಗಾರರ ಹಣೆಬರಹವೇ ಬದಲಾದಂತ್ತಾಗಿದೆ.

**ನೆಚ್ಚಿನ ಆಟಗಾರರ ಆಯ್ಕೆ:** ಶ್ರೀಲಂಕಾ ಪ್ರವಾಸಕ್ಕೆ ಬಿಸಿಸಿಐ ಎರಡು ತಂಡಗಳನ್ನು ಪ್ರಕಟಿಸಿದೆ. ಒಂದು ತಂಡ ಟಿ20 ಸರಣಿ ಆಡಲಿದ್ದು, ಇನ್ನೊಂದು ತಂಡ ಏಕದಿನದಲ್ಲಿ ಭಾಗವಹಿಸಲಿದೆ. ಈ ಸರಣಿಯೊಂದಿಗೆ ಭಾರತ ತಂಡದ ಅಧಿಕೃತ ಕೋಚ್ ಎನಿಸಿಕೊಳ್ಳಲ್ಲಿರುವ ಗಂಭೀರ್, ಈ ಎರಡು ಸರಣಿಗಳಿಗೆ ತಂಡದಲ್ಲಿ 6 ಮಂದಿ ಕೆಕೆಆರ್ ಆಟಗಾರರನ್ನು ಆಯ್ಕೆ ಮಾಡಿದ್ದಾರೆ. ಇವರೆಲ್ಲರೂ ಗಂಭೀರ್ ಅವರ ನಾಯಕತ್ವ ಅಥವಾ ಮಾರ್ಗದರ್ಶನದಲ್ಲಿ ಒಂದಲ್ಲ ಒಂದು ಬಾರಿ ಐಪಿಎಲ್‌ನಲ್ಲಿ ಕೆಕೆಆರ್ ತಂಡದ ಪರ ಆಡಿದ ಆಟಗಾರರಾಗಿದ್ದಾರೆ.

**ಫಾರ್ಮ್‌ನಲ್ಲಿರದ ಅಯ್ಯರ್ ಆಯ್ಕೆ;** ಇದರಲ್ಲಿ ಮೊದಲ ಹೆಸರು ಹಾಲಿ ಕೆಕೆಆರ್ ನಾಯಕ ಶ್ರೇಯಸ್ ಅಯ್ಯರ್ ಅವರದ್ದು. ಸುಮಾರು 8 ತಿಂಗಳಿಂದ ಅಯ್ಯರ್ ಭಾರತ ತಂಡದಿಂದ ಹೊರಗಿದ್ದಾರೆ. ಶಿಸ್ತು ಉಲ್ಲಂಘಿಸಿದ್ದಕ್ಕಾಗಿ ಬಿಸಿಸಿಐ ಅವರ ವಿರುದ್ಧ ಕ್ರಮ ಕೈಗೊಂಡಿದ್ದು, ಕೇಂದ್ರ ಗುತ್ತಿಗೆಯಿಂದಲೂ ಅವರನ್ನು ತೆಗೆದುಹಾಕಿತ್ತು. ಆದರೆ ಗಂಭೀರ್ ಕೋಚ್ ಆದ ಕೂಡಲೇ ಶ್ರೇಯಸ್ ಅಯ್ಯರ್ ತಂಡಕ್ಕೆ ಮರಳಿದ್ದಾರೆ. ವಾಸ್ತವವಾಗಿ ಅಯ್ಯರ್ ಅವರನ್ನು ಟೀಂ ಇಂಡಿಯಾದಿಂದ ಹೊರಗಿಟ್ಟ ಬಳಿಕ ಅವರಿಗೆ ರಣಜಿ ಆಡುವಂತೆ ಮಂಡಳಿ ಸೂಚಿಸಿತ್ತು. ಆ ವೇಳೆ ಗಂಭೀರ್ ಕೂಡ ಬಿಸಿಸಿಐ ಸೂಚನೆಯ ಪರವಾಗಿ ಬ್ಯಾಟ್ ಬೀಸಿದ್ದರು. ಆದರೆ ಕೋಚ್ ಆದ ಬಳಿಕ ಉಲ್ಟಾ ಹೊಡೆದಿರುವ ಗಂಭೀರ್, ಅಯ್ಯರ್‌ಗೆ ತಂಡದಲ್ಲಿ ಅವಕಾಶ ನೀಡಿದ್ದಾರೆ. ಆದರೆ ಅಯ್ಯರ್ ಅಂತೆಯೇ ಟೀಂ ಇಂಡಿಯಾದಿಂದ ಹೊರಬಿದ್ದಿರುವ ಇಶಾನ್ ಕಿಶನ್‌ಗೆ ಮಾತ್ರ ಅವಕಾಶ ನೀಡುವ ಕೆಲಸವನ್ನು ಗಂಭೀರ್ ಮಾಡಿಲ್ಲ.

**ಸೂರ್ಯನಿಗೆ ನಾಯಕತ್ವ ಪಟ್ಟ:** ಈ ಪಟ್ಟಿಯಲ್ಲಿ ಎರಡನೇ ದೊಡ್ಡ ಹೆಸರು ಸೂರ್ಯಕುಮಾರ್ ಯಾದವ್ ಅವರದು. ಸೂರ್ಯ ಕೂಡ ಈ ಹಿಂದೆ ಕೆಕೆಆರ್ ಪರ ಆಡಿದ್ದಾರೆ. ಅಷ್ಟೇ ಅಲ್ಲ, ಗಂಭೀರ್ ಕೆಕೆಆರ್ ಪರ ಆಡುವಾಗ ತಮ್ಮ ನಾಯಕತ್ವದಲ್ಲಿ ಸೂರ್ಯ ಅವರನ್ನು ಉಪನಾಯಕನನ್ನಾಗಿ ಮಾಡಿದ್ದರು. ಇದೀಗ ಟೀಂ ಇಂಡಿಯಾಕ್ಕೆ ಕೋಚ್ ಆದ ಬಳಿಕ ಟಿ20 ತಂಡದ ನಾಯಕತ್ವದ ಅತಿ ದೊಡ್ಡ ಸ್ಪರ್ಧಿ ಹಾರ್ದಿಕ್ ಪಾಂಡ್ಯ ಅವರನ್ನು ಬದಿಗೊತ್ತಿ ಸೂರ್ಯರನ್ನು ತಂಡದ ನಾಯಕರನ್ನಾಗಿ ಮಾಡಿದ್ದಾರೆ.

**ಉಳಿದವರ ಪಟ್ಟಿ ಹೀಗಿದೆ :** ಸೂರ್ಯಕುಮಾರ್ ಯಾದವ್ ಮತ್ತು ಶ್ರೇಯಸ್ ಅಯ್ಯರ್ ಅವರಂತಹ ದೊಡ್ಡ ಹೆಸರುಗಳಲ್ಲದೆ, ರಿಂಕು ಸಿಂಗ್, ಹರ್ಷಿತ್ ರಾಣಾ, ಕುಲ್ದೀಪ್ ಯಾದವ್ ಮತ್ತು ಶುಭ್‌ಮನ್ ಗಿಲ್ ಕೂಡ ಕೆಕೆಆರ್ ಪರ ಆಡಿದ್ದಾರೆ. ಶುಭ್‌ಮನ್ ಗಿಲ್ ಅವರನ್ನು ಏಕದಿನ ಮತ್ತು ಟಿ20 ಎರಡರಲ್ಲೂ ಉಪನಾಯಕರನ್ನಾಗಿ ಮಾಡಲಾಗಿದೆ. ಇದರಲ್ಲಿ ಗಂಭೀರ್ ಪಾತ್ರವಿರುವ ಸಾಧ್ಯತೆ ಇದೆ. ಗಿಲ್‌ಗೆ ನಾಯಕತ್ವದ ಅನುಭವವಿಲ್ಲ, ಆದರೂ ಅವರನ್ನು ತಂಡದ ಉಪನಾಯಕನನ್ನಾಗಿ ಮಾಡಲಾಗಿದೆ. ಆದರೆ ಗಿಲ್‌ಗಿಂತಲೂ ನಾಯಕತ್ವದಲ್ಲಿ ಅನುಭವ ಹೊಂದಿರುವ ಕೆಎಲ್ ರಾಹುಲ್ ಮತ್ತು ಹಾರ್ದಿಕ್ ಪಾಂಡ್ಯ ಅವರನ್ನು ಈ ಸ್ಥಾನಕ್ಕೆ ಪರಿಗಣಿಸಲಾಗಿಲ್ಲ ಎಂಬುದು ಅಚ್ಚರಿಯ ಸಂಗತಿ.

# ಜಿಂಬಾಬ್ವೆ ವಿರುದ್ಧ ಮಿಂಚಿದರೂ ಐವರಿಗೆ ಅವಕಾಶ ನೀಡಲಾಗಿಲ್ಲ




ಈ ತಿಂಗಳ ಅಂತ್ಯದಲ್ಲಿ ಭಾರತ ತಂಡ ಶ್ರೀಲಂಕಾ ಪ್ರವಾಸ ಕೈಗೊಳ್ಳಲಿದೆ. 3 ಪಂದ್ಯಗಳ ಟಿ20 ಸರಣಿ ಜುಲೈ 27ರಿಂದ ಆರಂಭವಾಗಲಿದೆ. ಈ ಸರಣಿಗೆ ಭಾರತ ತಂಡವನ್ನು ಪ್ರಕಟಿಸಲಾಗಿದ್ದು, ಸೂರ್ಯಕುಮಾರ್ ಯಾದವ್‌ಗೆ ನಾಯಕತ್ವ ಪಟ್ಟಕಟ್ಟಲಾಗಿದೆ. ಈ ಸರಣಿಯೊಂದಿಗೆ ಹಲವು ವಿಶ್ವಕಪ್ ವಿಜೇತ ಆಟಗಾರರು ತಂಡಕ್ಕೆ ಮರಳಿದ್ದಾರೆ. ಆದಾಗ್ಯೂ, ಕಳೆದ ಸರಣಿಯಲ್ಲಿ ಅದ್ಭುತ ಪ್ರದರ್ಶನ ನೀಡಿದರೂ ಈ ಐವರನ್ನು ಕಡೆಗಣಿಸಲಾಗಿದೆ.

ಎಡಗೈ ಆರಂಭಿಕ ಬ್ಯಾಟ್ಸ್‌ಮನ್ ಅಭಿಷೇಕ್ ಶರ್ಮಾ ಸರಣಿಯ ಎರಡನೇ ಪಂದ್ಯದಲ್ಲಿ ಶತಕ ಬಾರಿಸಿದ್ದರು. ಕೇವಲ 46 ಎಸೆತಗಳಲ್ಲಿ ಶತಕ ದಾಖಲಿಸಿದರು. ಇದಲ್ಲದೇ ಬೌಲಿಂಗ್‌ನಲ್ಲೂ ಗಮನಾರ್ಹ ಪ್ರದರ್ಶನ ನೀಡಿದ್ದರು. ಇದಾದ ನಂತರವೂ ಶ್ರೀಲಂಕಾ ಪ್ರವಾಸದಲ್ಲಿರುವ ಅಭಿಷೇಕ್ ತಂಡದಲ್ಲಿಲ್ಲ. ವೇಗದ ಬೌಲರ್ ಅವೇಶ್ ಖಾನ್ ಜಿಂಬಾಬ್ವೆಯಲ್ಲಿ ಕೇವಲ ಮೂರು ಪಂದ್ಯಗಳನ್ನು ಆಡುವ ಅವಕಾಶ ಪಡೆದರಾದರೂ 6 ವಿಕೆಟ್ ಪಡೆಯುವಲ್ಲಿ ಯಶಸ್ವಿಯಾಗಿದ್ದರು. ಇದಾದ ನಂತರವೂ ಅವೇಶ್ ತಂಡದ ಭಾಗವಾಗಿಲ್ಲ.

ವೇಗದ ಬೌಲರ್ ಅವೇಶ್ ಖಾನ್ ಜಿಂಬಾಬ್ವೆಯಲ್ಲಿ ಕೇವಲ ಮೂರು ಪಂದ್ಯಗಳನ್ನು ಆಡುವ ಅವಕಾಶ ಪಡೆದರಾದರೂ 6 ವಿಕೆಟ್ ಪಡೆಯುವಲ್ಲಿ ಯಶಸ್ವಿಯಾಗಿದ್ದರು. ಇದಾದ ನಂತರವೂ ಅವೇಶ್ ತಂಡದ ಭಾಗವಾಗಿಲ್ಲ.

ಜಿಂಬಾಬ್ವೆ ಪ್ರವಾಸದ ವೇಳೆ ಮುಖೇಶ್ ಕುಮಾರ್ ಆಡಿದ 3 ಪಂದ್ಯಗಳಲ್ಲಿ 8 ವಿಕೆಟ್ ಪಡೆದಿದ್ದರು. ಅಲ್ಲದೆ ಸರಣಿಯ ಕೊನೆಯ ಪಂದ್ಯದಲ್ಲಿ 4 ವಿಕೆಟ್ ಕಬಳಿಸಿದ್ದರು. ಇದು ಅವರ ವೃತ್ತಿಜೀವನದ ಅತ್ಯುತ್ತಮ ಪ್ರದರ್ಶನವೂ ಆಗಿತ್ತು. ಹಾಗಿದ್ದರೂ ಅವರಿಗೆ ಅವಕಾಶ ಸಿಕ್ಕಿಲ್ಲ.

# ಲೋಕಲ್ ಕ್ರಿಕೆಟ್‌ಗೆ 'ವೇದಿಕೆ' ನಿರ್ಮಿಸುವ ಪಿಚ್ ಮಲ್ಲೇಶ್

## ಕ್ರಿಕೆಟ್ ಎಂದರೆ ಪಂಚ ಪ್ರಾಣ



ಇತ್ತೀಚೆಗಷ್ಟೆ ಭಾರತ ಕ್ರಿಕೆಟ್ ತಂಡ ಟಿ20 ವಿಶ್ವಕಪ್ ಗೆದ್ದಿತು. ಕಪ್ ಗೆದ್ದ ಬಳಿಕ ನಾಯಕ ರೋಹಿತ್ ಶರ್ಮಾ ಪಂದ್ಯ ನಡೆದ ವೆಸ್ಟ್ ಇಂಡೀಸ್‌ನ ಬಾರ್ಬಡೋಸ್ ಕ್ರೀಡಾಂಗಣದ ಪಿಚ್ ಬದಿ ಕುಳಿತು ಪಿಚ್‌ನ ಮಣ್ಣನ್ನು ಬಾಯಿಗೆ ಹಾಕಿಕೊಂಡು ಸಂಭ್ರಮಿಸಿದರು. ಅದಾದ ಬಳಿ ಪ್ರಧಾನಿ ಮೋದಿವರೊಂದಿಗಿನ ಅಭಿನಂದನಾ ಸಭೆಯಲ್ಲಿಯೂ ರೋಹಿತ್ ಶರ್ಮಾ, ಬಾರ್ಬೊಡೋಸ್‌ನ ಪಿಚ್‌ನ ಬಗ್ಗೆ ಮಾತನಾಡಿದರು. 2011ರಲ್ಲಿ ಭಾರತ ತಂಡ ವಾಂಖಡೆಯಲ್ಲಿ ವಿಶ್ವಕಪ್ ಗೆದ್ದಾಗಲೂ ಸಹ ಭಾರತ ತಂಡ ಪಿಚ್ ಕ್ಯುರೇಟರ್‌ಗಳನ್ನು ಅಪ್ಪಿಕೊಂಡು ಸಂಭ್ರಮಿಸಿತ್ತು. ಬಿಸಿಸಿಐ, ವಾಂಖಡೆ ಪಿಚ್ ಸಿದ್ಧ ಪಡಿಸಿದ್ದ ಕ್ಯುರೇಟರ್ ಹಾಗೂ ಸಹಾಯಕ ಸಿಬ್ಬಂದಿಗೆ ನಗದು ಪ್ರಶಸ್ತಿಗಳನ್ನು ಘೋಷಿಸಿತ್ತು. ಒಂದು ಕ್ರಿಕೆಟ್ ಪಂದ್ಯಕ್ಕೆ ಪಿಚ್ ಅದೆಷ್ಟು ಅವಶ್ಯಕ ಎಂಬುದಕ್ಕೆ ಈ ಎರಡು ಉದಾಹರಣೆಗಳು ಸಾಕ್ಷಿ.

ಸ್ಥಳೀಯ ಟೂರ್ನಮೆಂಟ್‌ಗಳಿಗೂ ಪಿಚ್ ತಯಾರು ಮಾಡಿ ಕೊಡುವ ಕ್ಯುರೇಟರ್‌ಗಳು ಇದ್ದಾರೆ. ಅವರು ಇಂಥಹಾ ಲೋಕಲ್ ಕ್ರಿಕೆಟ್ ಪಂದ್ಯಾವಳಿಗಳಿಗೆ ಸೂಕ್ತ ಪಿಚ್‌ಗಳನ್ನು ತಯಾರು ಮಾಡಿ ಕೊಡುತ್ತಾರೆ. ಅಂಥಹವರಲ್ಲಿ ಪಿಚ್ ಮಲ್ಲೇಶ್ ಮೊದಲಿಗರು.

ಹಾಸನದ ಅರಸಿಕೆರೆಯ ಮಲ್ಲೇಶ್ 2009 ರಿಂದಲೂ ಸ್ಥಳೀಯ ಕ್ರಿಕೆಟ್ ಪಂದ್ಯಾವಳಿಗಳಿಗೆ ಪಿಚ್‌ಗಳನ್ನು ತಯಾರು ಮಾಡಿಕೊಡುತ್ತಿದ್ದಾರೆ. ಹತ್ತನೇ ತರಗತಿಯಷ್ಟೆ ಮುಗಿಸಿರುವ ಮಲ್ಲೇಶ್‌ಗೆ ಕ್ರಿಕೆಟ್ ಎಂದರೆ ಪಂಚ ಪ್ರಾಣ. ಅವರ ಈ ಕ್ರಿಕೆಟ್ ಪ್ರೀತಿಯೇ ಅವರನ್ನು ಪಿಚ್ ನಿರ್ಮಾಣದತ್ತ ಸೆಳೆದಿರುವುದು.

# ಬಿಸಿಸಿಐ ಅಧಿಕಾರಿಗಳ ಸಂಪರ್ಕಿಸಿದ ಕೊಹ್ಲಿ




ಶ್ರೀಲಂಕಾ ವಿರುದ್ಧದ ಸರಣಿಗೆ ಟೀಂ ಇಂಡಿಯಾ ಆಟಗಾರರ ಪಟ್ಟಿಯನ್ನು ಬಿಸಿಸಿಐ ರಿಲೀಸ್ ಮಾಡಿದೆ. ಮುಖ್ಯ ಕೋಚ್ ಆಗಿರೋ ಗೌತಮ್ ಗಂಭೀರ್ ತಂಡದಲ್ಲಿ ಸಾಕಷ್ಟು ಬದಲಾವಣೆ ಮಾಡಿದ್ದಾರೆ. ಟಿ20ಗೆ ಹಾಗೂ ಏಕದಿನಕ್ಕೆ ಬೇರೆ ಬೇರೆ ತಂಡವನ್ನೇ ಘೋಷಣೆ ಮಾಡಿಕೊಳ್ಳಲಾಗಿದೆ. ಏಕದಿನಕ್ಕೆ ರೋಹಿತ್ ಶರ್ಮಾ ಕ್ಯಾಪ್ಟನ್ ಆಗಿದ್ದು, ವಿರಾಟ್ ಕೊಹ್ಲಿ ಅವರು ಕೂಡ ತಂಡದಲ್ಲಿದ್ದಾರೆ.

ಗೌತಮ್ ಹಾಗೂ ವಿರಾಟ್ ಮಧ್ಯೆ ಈ ಮೊದಲು ಹಲವು ಕ್ಲ್ಯಾಶ್ ಆಗಿತ್ತು. ಇದನ್ನು ಮನಸ್ಸಿನಲ್ಲಿ ಇಟ್ಟುಕೊಂಡರೆ ಎನ್ನುವ ಪ್ರಶ್ನೆ ಅನೇಕರಲ್ಲಿ ಇತ್ತು. ಆದರೆ, ಇದನ್ನು ಇಬ್ಬರೂ ಮರೆಯಲು ನಿರ್ಧರಿಸಿದ್ದಾರಂತೆ.

ವಿರಾಟ್ ಕೊಹ್ಲಿ ಅವರು ಈಗಾಗಲೇ ಬಿಸಿಸಿಐನ ಅಧಿಕಾರಿಗಳನ್ನು ಸಂಪರ್ಕಿಸಿದ್ದಾರೆ. ಈ ಮೊದಲು ಗಂಭೀರ್ ಜೊತೆಗೆ ನಡೆದ ಕಿರಿಕ್‌ಗಳನ್ನು ಮರೆತು ಮುಂದೆ ಸಾಗಿರುವುದಾಗಿ ಹೇಳಿದ್ದಾರೆ. ಈ ಕಿರಿಕ್‌ಗಳಿಂದ ಆಟದ ಮೇಲೆ ಯಾವುದೇ ಪರಿಣಾಮ ಆಗುವುದಿಲ್ಲ ಎಂದು ಹೇಳಿದ್ದಾರಂತೆ.

ಮನಸ್ತಾಪಗಳು ಇದ್ದಾಗ ಅವುಗಳು ಆಟದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇರುತ್ತದೆ. ಒಂದು ಟೀಂ ಆಗಿ ಆಡೋಕೆ ಸಾಧ್ಯವಾಗುವುದಿಲ್ಲ. ಈ ಕಾರಣದಿಂದಲೇ ಬಿಸಿಸಿಐ ಅಧಿಕಾರಿಗಳಿಗೆ ಭಯ ಇತ್ತು. ಈಗ ವಿರಾಟ್ ಅವರ ಆಶ್ವಾಸನೆಯಿಂದ ಬಿಸಿಸಿಐ ಅಧಿಕಾರಿಗಳು ಖುಷಿಯಾಗಿದ್ದಾರೆ. ಗಂಭೀರ್ ಕೂಡ ಇದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುತ್ತಿಲ್ಲ. ಈ ಬಾರಿಯ ಐಪಿಎಲ್ ಸಂದರ್ಭದಲ್ಲಿ ಗೌತಮ್ ಗಂಭೀರ್ ಅವರು ಕೋಲ್ಕತ್ತಾ ನೈಟ್ ರೈಡರ್ಸ್‌ನ ಮೆಂಟರ್ ಆಗಿದ್ದರು. ಆರ್‌ಸಿಬಿ ಪರ ಆಡುತ್ತಿರುವ ವಿರಾಟ್ ಕೊಹ್ಲಿ ಹಾಗೂ ಕೆಕೆಆರ್ ಎರಡು ಬಾರಿ ಮುಖಾಮುಖಿ ಆಗಿತ್ತು. ಆಗ ಕೊಹ್ಲಿ ಹಾಗೂ ಗೌತಮ್ ಕಿತ್ತಾಡಿಕೊಳ್ಳಬಹುದು ಎಂದು ಅನೇಕರು ಭಾವಿಸಿದ್ದರು. ಆದರೆ, ಆ ರೀತಿ ಆಗಿಲ್ಲ. ವಿರಾಟ್ ಹಾಗೂ ಗೌತಮ್ ನಗು ನಗುತ್ತಲೇ ಮಾತನಾಡಿ ದ್ದರು. ವಿರಾಟ್ ಅವರು ಎಷ್ಟೇ ದ್ವೇಷ ಇಟ್ಟುಕೊಂಡರೂ ಕ್ಷಮಿಸುವ ಗುಣವನ್ನು ಹೊಂದಿದ್ದಾರೆ. ಮೈದಾನದಲ್ಲಿ ಅವರನ್ನು ರೇಗಿಸಿದ ಅನೇಕರನ್ನು ಮನ್ನಿಸಿದ್ದಾರೆ. ಆ ಬಳಿಕ ಅವರ ಜೊತೆ ನಗು ನಗುತ್ತಲೇ ಮಾತನಾಡಿದ್ದು ಇದೆ.

# ಇನ್ಸ್ಟಾಗ್ರಾಂನಲ್ಲಿ ಪೋಸ್ಟ್ ಹಂಚಿಕೊಂಡ ನತಾಶಾ

ನಟಿ ನತಾಶಾ ಸ್ಟಾಂಕೋವಿಕ್, ಕ್ರಿಕೆಟಿಗ ಹಾರ್ದಿಕ್ ಪಾಂಡ್ಯ ಜೊತೆಗಿನ ದಾಂಪತ್ಯಕ್ಕೆ ಅಂತ್ಯ ಹಾಡಿದ್ದಾರೆ. ಡಿವೋರ್ಸ್ ಖಚಿತಪಡಿಸಿದ ಬಳಿಕ ಸೋಷಿಯಲ್ ಮೀಡಿಯಾದಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ. ಕಳೆದ ಎರಡು ದಿನಗಳ ಹಿಂದೆಯೇ ನತಾಶಾ ಸರ್ಬಿಯಾಗೆ ತೆರಳಿದ್ದಾರೆ. ಪ್ರೈವೆಸಿಗಾಗಿ ತಮ್ಮ ಹುಟ್ಟೂರು ಸರ್ಬಿಯಾದಲ್ಲಿ ಪೋಷಕರ ಜೊತೆ ಕಾಲ ಕಳೆಯುತ್ತಿದ್ದಾರೆ. ಸದ್ಯ ಪುತ್ರ ಅಗಸ್ತ್ಯ ಆಟವಾಡುತ್ತಿರುವ ವಿಡಿಯೋ ಮತ್ತು ತಮ್ಮ ವರ್ಕೌಟ್ ಫೋಟೋವನ್ನು ನತಾಶಾ ಇನ್ಸ್ಟಾಗ್ರಾಂ ಸ್ಟೋರಿಯಲ್ಲಿ ಹಂಚಿಕೊಂಡಿದ್ದಾರೆ. ಡಿವೋರ್ಸ್ ನಂತರ ಮೊದಲ ಪೋಸ್ಟ್ ಇದಾಗಿದೆ. ಅಂದಹಾಗೆ, 4 ವರ್ಷಗಳ ಕಾಲ ಜೊತೆಯಾಗಿ ಇದ್ದ ಹಾರ್ದಿಕ್ ಮತ್ತು ನಾನು ಪರಸ್ಪರ ಬೇರೆಯಾಗಲು ನಿರ್ಧರಿಸಿದ್ದೇವೆ. ನಾವು ಜೊತೆಯಾಗಿ ಇರಲು ಸಾಕಷ್ಟು ಪ್ರಯತ್ನ ಮಾಡಿದ್ದೇವೆ. ಕೊನೆಗೆ ಭಿನ್ನಾಭಿಪ್ರಾಯ ಮಿತಿ ಮೀರಿದಾಗ ನಮ್ಮ ಒಳ್ಳೆಯದಕ್ಕೆ ಬೇರೆ ಆಗಬೇಕು ಎಂದು ನಿರ್ಧಾರ ಮಾಡಿದ್ದೇವೆ. ನಾವು ಒಟ್ಟಿಗೆ ಆನಂದಿಸಿದ ಸಂತೋಷ,



ಪರಸ್ಪರ ಗೌರವ ಮತ್ತು ಒಡನಾಟವನ್ನು ಗಮನದಲ್ಲಿಟ್ಟುಕೊಂಡು ಮತ್ತು ನಾವು ಕುಟುಂಬವಾಗಿ ಬೆಳೆದಿದ್ದೇವೆ. ಇದು ನಮಗೆ ಕಠಿಣ ನಿರ್ಧಾರ ಎಂದು ನತಾಶಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ನಮ್ಮಿಬ್ಬರ ದಾಂಪತ್ಯಕ್ಕೆ ಸಾಕ್ಷಿಯಾಗಿದ್ದು ಅಗಸ್ತ್ಯ. ಅವನು ನಮ್ಮಿಬ್ಬರ ಜೀವನದ ಕೇಂದ್ರ ಬಿಂದು ವಾಗಿ ಮುಂದುವರಿಯುತ್ತಾನೆ. ಅವನಿಗೆ ಎಲ್ಲಾ ರೀತಿಯಲ್ಲೂ ಬೆಂಬಲವಾಗಿ ನಾವು ನಿಲ್ಲುತ್ತೇವೆ. ಈ ಕಷ್ಟಕರ ಮತ್ತು ಸೂಕ್ಷ್ಮ ಸಮಯದಲ್ಲಿ ನಮ್ಮ ಗೌಪ್ಯತೆ ಕಾಪಾಡಲು ನಾವು ಕಳಕಳಿಯಿಂದ ವಿನಂತಿಸುತ್ತೇವೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ. ಅಂದಹಾಗೆ, ನತಾಶಾ ಮತ್ತು ಹಾರ್ದಿಕ್ ಪಾಂಡ್ಯ 2020ರಲ್ಲಿ ಮೇ 31ರಂದು ವಿವಾಹವಾದರು. ಜುಲೈ 2020ರಲ್ಲಿ ತಮ್ಮ ಮೊದಲ ಮಗು ಅಗಸ್ತ್ಯನನ್ನು ಸ್ವಾಗತಿಸಿದರು. 2023ರ ಫೆಬ್ರವರಿಯಲ್ಲಿ ಹಿಂದೂ ಮತ್ತು ಕ್ರಿಶ್ಚಿಯನ್ ಪದ್ಧತಿ ಪ್ರಕಾರ ಮತ್ತೊಮ್ಮೆ ಮದುವೆಯಾದರು.



# ಕಟೀಲು ದೇವಸ್ಥಾನಕ್ಕೆ ಎಕ್ತಾ ಕಪೂರ್ ಭೇಟಿ

ಬಾಲಿವುಡ್ ನಿರ್ದೇಶಕಿ ಕಮ್ ನಿರ್ಮಾಪಕಿ ಎಕ್ತಾ ಕಪೂರ್ ಇದೀಗ ಮಂಗಳೂರಿನ ಕಟೀಲು ಶ್ರೀದುರ್ಗಾಪರಮೇಶ್ವರಿ ದೇವಸ್ಥಾನಕ್ಕೆ ಭೇಟಿ ನೀಡಿದ್ದಾರೆ. ಕುಟುಂಬದ ಜೊತೆ ಕಟೀಲು ದುರ್ಗಾಪರಮೇಶ್ವರಿ ತಾಯಿಗೆ ವಿಶೇಷ ಪೂಜೆ ಸಲ್ಲಿಸಿದ್ದಾರೆ. ಕಟೀಲು ಶ್ರೀದುರ್ಗಾಪರಮೇಶ್ವರಿ ದೇವಸ್ಥಾನಕ್ಕೆ ಮೊದಲ ಬಾರಿಗೆ ಭೇಟಿ ನೀಡಿರುವ ಎಕ್ತಾ ಕಪೂರ್, ಈಗ ದೇವಿಗೆ ವಿಶೇಷ ಪೂಜೆ ಸಲ್ಲಿಸಿದ್ದಾರೆ. ಕೆಲ ಸಮಯ ದೇವಸ್ಥಾನದಲ್ಲಿ ಕುಟುಂಬದ ಜೊತೆ ಸಮಯ ಕಳೆದಿದ್ದಾರೆ. ಬಳಿಕ ದೇವಸ್ಥಾನದ ವತಿಯಿಂದ ದೇವರ ವಿಶೇಷ ವಸ್ತ್ರ ನೀಡಿ ಗೌರವಿದ್ದಾರೆ. ನಂತರ ಶಿಬರೂರು ಕೊಡಮಣಿತ್ತಾಯ ದೈವಸ್ಥಾನಕ್ಕೆ ಎಕ್ತಾ ಕಪೂರ್ ಕುಟುಂಬ ಭೇಟಿ ಕೊಟ್ಟಿದ್ದಾರೆ. ಇನ್ನೂ ಹಿಂದಿ ಸಿನಿಮಾರಂಗದಲ್ಲಿ ಸೀರಿಯಲ್ ಮತ್ತು ಸಿನಿಮಾ ನಿರ್ಮಾಪಕಿಯಾಗಿ ಗುರುತಿಸಿಕೊಂಡಿದ್ದಾರೆ. ಎಕ್ ವಿಲನ್, ಬಿಗ್ ಬಿ ಮತ್ತು ರಶ್ಮಿಕಾ ನಟನೆಯ 'ಗುಡ್ ಬೈ' ಸಿನಿಮಾ, ಯೂ ಟರ್ನ್ ಚಿತ್ರ ಸೇರಿದಂತೆ ಸಾಕಷ್ಟು ಸಿನಿಮಾಗಳನ್ನು ನಿರ್ಮಾಣ ಮಾಡಿದ್ದಾರೆ.



# ಜಾನ್ವಿ ಕಪೂರ್ ಆರೋಗ್ಯದಲ್ಲಿ ಏರುಪೇರು

ಬಾಲಿವುಡ್ ಬೆಡಗಿ ಜಾನ್ವಿ ಕಪೂರ್ ಫ್ಯಾನ್ಸ್‌ಗೆ ಇದು ಬ್ಯಾಡ್ ನ್ಯೂಸ್. ಜಾನ್ವಿ ಆರೋಗ್ಯದಲ್ಲಿ ಏರುಪೇರಾಗಿದ್ದು, ಇದೀಗ ಮುಂಬೈನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಅನಂತ್ ಅಂಬಾನಿ, ರಾಧಿಕಾ ಮದುವೆಯ ಬಳಿಕ ಜಾನ್ವಿ ಕಪೂರ್ ಚೆನ್ನೈಗೆ ತೆರಳಿದರು. ಅಲ್ಲಿನ ಕುಟುಂಬಸ್ಥರ ಮನೆಗೆ ಭೇಟಿ ನೀಡಿದ್ದ ವೇಳೆ ಫುಡ್ ಪಾಯ್ಸನ್ ಆಗಿದ್ದು, ನಟಿಯನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ. 3 ದಿನಗಳ ಕಾಲ ವಿಶ್ರಾಂತಿ ಪಡೆಯಲು ವೈದ್ಯರು ಸೂಚಿಸಿದ್ದಾರೆ. ಇನ್ನೆರಡು ದಿನಗಳಲ್ಲಿ ನಟಿ ಡಿಸ್ಚಾರ್ಜ್ ಆಗಲಿದ್ದಾರೆ. ಚೆನ್ನೈನಲ್ಲಿ ಸೇವಿಸಿದ ಆಹಾರದಿಂದಲೇ ಆರೋಗ್ಯದಲ್ಲಿ ಏರುಪೇರಾಗಿದ್ದು, ಅಲ್ಲಿರುವಾಗಲೇ ನಟಿ ಕುಸಿದು ಬಿದ್ದಿದ್ದರು ಎನ್ನಲಾಗಿದೆ. ಕೂಡಲೇ ಆಸ್ಪತ್ರೆಗೆ ದಾಖಲಿಸಿದ್ದಕ್ಕೆ ನಟಿ ಚೇತರಿಕೊಂಡಿದ್ದಾರೆ. ಜಾನ್ವಿ ಆದಷ್ಟು ಬೇಗ ಚೇತರಿಸಿಕೊಳ್ಳಲಿ ಎಂದು ಅಭಿಮಾನಿಗಳು ಪ್ರಾರ್ಥಿಸುತ್ತಿದ್ದಾರೆ. ಅಂದಹಾಗೆ, ಸ್ಟಾರ್ ಕಿಡ್ ಎಂಬ ಆರೋಪದ ನಡುವೆಯೂ ಜಾನ್ವಿ ಕಪೂರ್‌ಗೆ ಬೇಡಿಕೆ ಕಮ್ಮಿಯಾಗಿಲ್ಲ. ತೆಲುಗು ಮತ್ತು ಬಾಲಿವುಡ್‌ನಲ್ಲಿ ಕೈತುಂಬಾ ಅವಕಾಶಗಳಿವೆ. ಜ್ಯೂ.ಎನ್‌ಟಿಆರ್ ಜೊತೆಗಿನ 'ದೇವರ', ರಾಮ್ ಚರಣ್ ಜೊತೆಗಿನ ಸಿನಿಮಾ, ಇದರ ನಡುವೆ ನ್ಯಾಚುರಲ್ ಸ್ಟಾರ್ ನಾನಿಗೆ ಶ್ರೀದೇವಿ ಪುತ್ರಿ ಹೀರೋಯಿನ್ ಆಗಿದ್ದಾರೆ.

# ಪ್ರಕೃತಿಯ ಮಡಿಲಲ್ಲಿ ಪಾರು

ಕಿರುತೆರೆಯ ಮುದ್ದು ಮೊಗದ ಚೆಲುವೆ ಮೋಕ್ಷಿತಾ ಪೈ ಸದ್ಯ ರಿಲ್ಯಾಕ್ಸ್ ಮೂಡ್‌ಗೆ ಜಾರಿದ್ದಾರೆ. ಸ್ನೇಹಿತೆಯರ ಊಟಿಯಲ್ಲಿ ಮಸ್ತ್ ಆಗಿ ಸಮಯ ಕಳೆದಿದ್ದಾರೆ. ಪ್ರವಾಸದ ಸುಂದರ ಫೋಟೋಗಳನ್ನು ನಟಿ ಹಂಚಿಕೊಂಡಿದ್ದಾರೆ. ಕಳೆದ 5 ವರ್ಷಗಳಿಂದ 'ಪಾರು' ಸೀರಿಯಲ್ ಮೂಲಕ ರಂಜಿಸಿದ್ದ ಕುಡ್ಲದ ಬೆಡಗಿ ಮೋಕ್ಷಿತಾ ಪೈ ಸದಾ ಒಂದಲ್ಲಾ ಒಂದು ಹೊಸ ತಾಣಗಳಿಗೆ ಭೇಟಿ ಕೊಡುತ್ತಲೇ ಇರುತ್ತಾರೆ. ಇತ್ತೀಚೆಗೆ ದುಬೈ, ಮನಾಲಿಗೆ ಭೇಟಿ ನೀಡಿದ್ದರು. ಈಗ ಪ್ರಕೃತಿಯ ಮಡಲಲ್ಲಿ ನಟಿ ಸಮಯ ಕಳೆದಿದ್ದಾರೆ.

ಊಟಿ ಪ್ರವಾಸಿಗರು ನೋಡಲೇಬೇಕಾದ ಪ್ರವಾಸಿಗರ ಸ್ಥಳ. ತಮಿಳುನಾಡಿನ ನೀಲಗಿರಿ ಪರ್ವತದ ತಪ್ಪಲಿನಲ್ಲಿದೆ. ಈ ಮಳೆಗಾಲದ ಸಮಯದಲ್ಲಿ ಕೊರೆವ ಚಳಿಯಲ್ಲಿ ಪಾರು ಫೋಟೋ ಕ್ಲಿಕ್ಕಿಸಿಕೊಂಡಿದ್ದಾರೆ. ಕ್ಯೂಟ್ ಆಗಿ ಕ್ಯಾಮೆರಾಗೆ ಪೋಸ್ ನೀಡಿದ್ದಾರೆ. ಅಂದಹಾಗೆ, 'ಪಾರು' ಸೀರಿಯಲ್ ಬಳಿಕ ಮೋಕ್ಷಿತಾ ಪೈ ಸೋಷಿಯಲ್ ಮೀಡಿಯಾದಲ್ಲಿ ಸಖತ್ ಆಯಕ್ಟೀವ್ ಆಗಿದ್ದಾರೆ. ತಮ್ಮದೇ ಯೂಟ್ಯೂಬ್ ಚಾನೆಲ್ ಕೂಡ ಶುರು ಮಾಡುವ ಮೂಲಕ ಸದ್ದು ಮಾಡುತ್ತಿದ್ದಾರೆ. ಸದ್ಯ ಹೊಸ ಫೋಟೋಶೂಟ್‌ಗಳ ಮೂಲಕ ಪಡ್ಡೆಹುಡುಗರ ನಿದ್ದೆಕೆಡಿಸಿರುವ ಪಾರು, ಈ ಹೊಸ ಪಾತ್ರಗಳ ಹುಡುಕಾಟದಲ್ಲಿದ್ದಾರೆ. ಅವಕಾಶಗಳಿಗೆ ಕೊರತೆಯಿಲ್ಲ. ಆದರೆ ಚಾಲೆಂಜಿಂಗ್ ಎನಿಸುವಂತಹ ಕಥೆಯಲ್ಲಿ ಕಾಣಿಸಿಕೊಳ್ಳಲು ನಟಿ ಎದುರು ನೋಡ್ತಿದ್ದಾರೆ. ಅದು ಸೀರಿಯಲ್ ಅಥವಾ ಸಿನಿಮಾನಾ ಎಂದು ಕಾದು ನೋಡಬೇಕಿದೆ.





# ರಾಮ್ ಪೋತಿನೇನಿ ಜೊತೆ ಕುಣಿದು ಕುಪ್ಪಳಿಸಿದ ಹಾಟ್ ಬೆಡಗಿ ಕಾವ್ಯಾ ಥಾಪರ್

'ಡಬಲ್ ಇಸ್ಮಾರ್ಟ್' ಸಿನಿಮಾದ 'ಸ್ಟೆಪ್ಪಮಾರ್' ಹಾಡಿಗೆ ಭರ್ಜರಿ ರೆಸ್ಪಾನ್ಸ್ ಸಿಕ್ಕಿದೆ. ಇದೀಗ ಚಿತ್ರತಂಡ ಎರಡನೇ ಹಾಡನ್ನು ಬಿಡುಗಡೆ ಮಾಡಿದೆ. 'ಮಾರ್ ಮುಂತಾ ಚೋಡ್ ಚಿಂತಾ' ಎಂಬ ಹಾಡಿಗೆ ನಾಯಕ ಉಸ್ತಾದ್ ರಾಮ್ ಪೋತಿನೇನಿ ಮತ್ತು ನಾಯಕಿ ಕಾವ್ಯಾ ಥಾಪರ್ ಸಖತ್ ಆಗಿ ಕುಣಿದು ಕುಪ್ಪಳಿಸಿದ್ದಾರೆ. ಶ್ಯಾಮ್ ಬರೆದ ಸಾಹಿತ್ಯಕ್ಕೆ ಮಣಿ ಶರ್ಮಾ ಟ್ಯೂನ್ ಹಾಕಿದ್ದು, ರಾಹುಲ್ ಸಿಪ್ಲಿಗುಂಜ್ ಮತ್ತು ಕೀರ್ತನಾ ಶರ್ಮಾ ಧ್ವನಿಯಾಗಿದ್ದಾರೆ. 'ಮಾರ್ ಮುಂತಾ ಚೋಡ್ ಚಿಂತಾ' ಲಿರಿಕಲ್ ವಿಡಿಯೋದ ಜೊತೆಗೆ ಮೇಕಿಂಗ್ ವಿಡಿಯೋ ಕೂಡ ಇರೋದು ವಿಶೇಷವಾಗಿದೆ.

'ಇಸ್ಮಾರ್ಟ್ ಶಂಕರ್' ಸಿನಿಮಾದ ಮುಂದುವರೆದ ಭಾಗವೇ ಈ ಡಬಲ್ ಇಸ್ಮಾರ್ಟ್ ಚಿತ್ರ. ಈ ಮೂಲಕ ಡೈರೆಕ್ಟರ್ ಪುರಿ ಜಗನ್ನಾಥ್ ಹೊಸ ರೀತಿಯಲ್ಲಿ ಶಂಕರ್‌ನ ಕಥೆ ಹೇಳಲು ಹೊರಟ್ಟಿದ್ದಾರೆ. 2019ರಲ್ಲಿ 'ಇಸ್ಮಾರ್ಟ್ ಶಂಕರ್' ಸಿನಿಮಾ ರಿಲೀಸ್ ಆಗಿತ್ತು. ಇದರಲ್ಲಿ ಕನ್ನಡತಿ ನಭಾ ನಟೇಶ್ ಅಭಿನಯಿಸಿದ್ದರು. ಆಗ ಈ ಸಿನಿಮಾ ಕಮರ್ಷಿಯಲ್ ಆಗಿ ಸಕ್ಸಸ್ ಆಗಿತ್ತು. ಆದರೆ ಈ ಸಿನಿಮಾ ಬಂದು 5 ವರ್ಷದ ಬಳಿಕ ಪಾರ್ಟ್-2 'ಡಬಲ್ ಇಸ್ಮಾರ್ಟ್' ಸಿನಿಮಾ ಬರುತ್ತಿದೆ. ಟಾಲಿವುಡ್‌ನಲ್ಲಿ ಈಗಾಗಲೇ ನಿರೀಕ್ಷೆಯನ್ನು ಕೂಡ ಹುಟ್ಟುಹಾಕಿದೆ.

ತೆಲುಗು ಮಾತ್ರವಲ್ಲದೇ ಕನ್ನಡ, ತಮಿಳು, ಮಲಯಾಳಂ ಹಾಗೂ ಹಿಂದಿ ಭಾಷೆಗಳಲ್ಲಿ 'ಡಬಲ್ ಇಸ್ಮಾರ್ಟ್' ಸಿನಿಮಾ ಬಿಡು ಗಡೆ ಆಗಲಿದೆ. ಮಣಿ ಶರ್ಮಾ ಅವರು ಈ ಸಿನಿಮಾಗೆ ಸಂಗೀತ ನಿರ್ದೇಶನ ಮಾಡಿದ್ದಾರೆ. ಪುರಿ ಜಗನ್ನಾಥ್, ಚಾರ್ಮಿ ಕೌರ್ ಅವರು ಈ ಸಿನಿಮಾವನ್ನು ನಿರ್ಮಿಸಿದ್ದಾರೆ. ಈ ಚಿತ್ರದಲ್ಲಿ ರಾಮ್ ಪೋತಿನೇನಿ ನಟಿ ಕಾವ್ಯಾ ಥಾಪರ್ ಜೋಡಿ ಆಗಿದ್ದಾರೆ. ಸಂಜಯ್ ದತ್ ಈ ಸಿನಿಮಾದಲ್ಲಿ ಖಡಕ್ ವಿಲನ್ ಆಗಿಯೇ ಕಾಣಿಸುತ್ತಿದ್ದಾರೆ. 'ಡಬಲ್ ಇಸ್ಮಾರ್ಟ್' ಸಿನಿಮಾದ ಶೂಟಿಂಗ್ ಇನ್ನು ನಡೆಯುತ್ತಿದೆ. ಈ ಸಿನಿಮಾ ಬಗ್ಗೆ ಫ್ಯಾನ್ಸ್‌ಗೆ ಭಾರೀ ನಿರೀಕ್ಷೆ ಇದೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966